ಚಂದ್ರಶೇಖರ ಕಂಬಾರರ ಎರಡು ಕಾದಂಬರಿಗಳ ತೌಲನಿಕ ಅಧ್ಯಯನ
(ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ)

ಕನ್ನಡ ಎಂ.ಫಿಲ್ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

2015–2016

ಸಂಶೋಧಕರು :
ನೋಂದಣಿ ಸಂಖ್ಯೆ: 151201030070

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ–583276

ಚಂದ್ರಶೇಖರ ಕಂಬಾರರ ಎರಡು ಕಾದಂಬರಿಗಳ ತೌಲನಿಕ ಅಧ್ಯಯನ (ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ)

ಕನ್ನಡ ಎಂ.ಫಿಲ್ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

2015-2016

ಸಂಶೋಧಕರು :
ನೋಂದಣಿ ಸಂಖ್ಯೆ : 151201030070

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ.

ಪರಿವಿಡಿ

ಅಧ್ಯಯ –1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಾಹಿತ್ಯ ಪರಂಪರೆ ಎಂಬುದು ಕ್ರಿ.ಪೂ. ದಿಂದಲೂ ಬೆಳೆದು ಬಂದಿದ್ದರೂ ಹಂತ ಹಂತವಾಗಿ ಹೊಸ ಹೊಸ ಬದಲಾವಣೆಗಳೊಂದಿಗೆ ಮತ್ತಷ್ಟು ಉತ್ತುಂಗ ಸ್ಥಿತಿಯನ್ನು ತಲುಪಿದೆ ಎಂದರೆ ತಪ್ಪಾಗಲಾರದು. ಕೃತಿಗಳ ಅಧ್ಯಯನದ ದೃಷ್ಟಿಯಿಂದ ಕನ್ನಡ ಸಾಹಿತ್ಯವನ್ನು ಭಾಗಗಳಾಗಿ ಮಾಡಿಕೊಂಡು ಅಧ್ಯಾಯನಕ್ಕೆ ಒಳಪಡಿಸಿದಾಗ ಪಂಪಪೂರ್ವ ಯುಗದ ಕೃತಿಕಾರರ ಕೃತಿಗಳು ದೊರೆಯದಿದ್ದರು, ಅನ್ಯ ಭಾಷೆಗಳ ಕೃತಿಗಳಲ್ಲಿ ಸಾಹಿತ್ಯ ರಚನೆಯ ಬಗ್ಗೆ ಪಂಪಪೂರ್ವ ಯುಗದ ಕೃತಿಗಳು, ಸಾಹಿತ್ಯದ ಬಗ್ಗೆ ಉಲ್ಲೇಖವಿರುವುದರಿಂದ ಸಾಹಿತ್ಯ ರಚನೆ ಅಂದಿನಿಂದಲೂ ರಚನೆಯಾಗಿದೆ ಎಂಬುದನ್ನು ತಿಳಿಯಬಹುದು.

ಪಂಪನಿಂದ ರಚನೆಯಾದ ಕೃತಿಗಳ ಅಧ್ಯಯನ, ನಂತರದ ಕೃತಿಗಳ ಅಧ್ಯಯನದಿಂದ ಸಾಹಿತ್ಯ ಕೃಷಿ ಯಾವರೀತಿ ಬೆಳೆಯುತ್ತಾ ಬಂದಿದೆ ಎಂಬುದಕ್ಕೆ ಇಂದಿನ ಕೃತಿಗಳೇ ಸಾಕ್ಷಿ.

ಶತ ಶತಮಾನದಿಂದ ಬೆಳೆದು ಬಂದಂತಹ ಸಾಹಿತ್ಯ ಪರಂಪರೆ ಇಂದು ಆಧುನಿಕ ಯುಗದಲ್ಲಿ ಅಗಾಧವಾಗಿ ಬೆಳೆದು ನಿಂತಿದೆ. ಸಾಗರದಷ್ಟು ಆಳ ಭೂಮಿಯಷ್ಟು ಅಗಲವಾಗಿ ಬೆಳೆದಿದೆ ಕನ್ನಡ ಸಾಹಿತ್ಯ ಲೋಕದಲ್ಲಿ ಅನೇಕ ಅಸಂಖ್ಯಗಣ್ಯರು ಕೃತಿರಚನೆ ಮಾಡಿದ್ದಾರೆ. ಕನ್ನಡ ನಾಡು ನುಡಿಗೆ ಶ್ರಮಿಸಿದ್ದಾರೆ. ಸಾಹಿತ್ಯ ಲೋಕದಲ್ಲಿ ಬೇರೆ ಬೇರೆ ಪ್ರಕಾರಗಳು ಇದ್ದರೂ ಆ ಪ್ರಕಾರಗಳ ಮುಖಾಂತರ ಸಾಹಿತ್ಯವನ್ನು ತಿಳಿಯಲು ಸುಲಭಸಾಧ್ಯ ಸಾಹಿತ್ಯ ಕೃತಿಗಳು ಎಂದಾಕ್ಷಣ ಕೇವಲ ಪಠ್ಯಕ್ಕೆ, ಮನರಂಜನೆಗೆ, ಕೃತಿರಚನೆಗೆ, ಜ್ಞಾನಾರ್ಜನೆಗೆ ಮಾತ್ರ ಸೀಮಿತವಲ್ಲ. ಇವುಗಳ ಮುಖ್ಯ ಉದ್ದೇಶ ಆ ಕೃತಿಗಳು ಪ್ರಸ್ತುತ ಸಮಾಜಕ್ಕೆ ಯಾವ ರೀತಿಯಾಗಿ ಸಂದೇಶವನ್ನು ಸಾರುತ್ತವೆ ಎಂಬುದು ಮುಖ್ಯ ಸಂಗತಿ. ಸಾಮಾನ್ಯವಾಗಿ ಸಾಹಿತ್ಯ ರಚನೆ 'ಅಣುರೇಣುತೃಣಕಾಷ್ಟ'ಗಳ ಮೇಲೆ ರಚಿತವಾಗಿರುವಂತದ್ದು, ಎಲ್ಲವನ್ನು ಒಳಗೊಂಡು ಯಾವುದನ್ನು ಕಡೆಗಣಿಸದೆ ತನ್ನ ತೆಕ್ಕೆಗೆ ಸೇರಿಸಿಕೊಂಡಿದೆ ಈ ಸಾಹಿತ್ಯ ಲೋಕ.

ಆಧುನಿಕ ಸಾಹಿತ್ಯದಲ್ಲಿ ಅನೇಕ ಅಗ್ರಗಣ್ಯರು ಕೃತಿ ರಚನೆ ಮಾಡಿದ್ದಾರೆ ಅವರಲ್ಲಿ ಚಂದ್ರಶೇಖರ ಕಂಬಾರರು ಒಬ್ಬರು. ಮೂಲತಃ ತಮ್ಮೆಲ್ಲ ಕೃತಿಗಳಲ್ಲಿ ಜನಪದ ಶೈಲಿಯನ್ನು ಬಳಸಿರುವುದು ವಿಶೇಷ ಸಂಗತಿ. ಕಾರಣ ಆ ಶೈಲಿ ಜನರಿಗೆ ಯಾವ ರೀತಿ ಮುಟ್ಟುತ್ತದೆ

ಎಂಬುದನ್ನು ಅರಿತು ಶೈಲಿಯನ್ನು ಆಯ್ಕೆ ಮಾಡಿರುವುದು ನಿಜವಾಗಿಯು ಗಮನಾರ್ಹವಾದ ಸಂಗತಿ.

ಸಾಹಿತ್ಯ ಪರಂಪರೆ ಮುಖ್ಯವಾಗಿ ಮೊದಲು ಬಂದದ್ದು ಮೌಖಿಕ ಪರಂಪರೆಯಿಂದಾದರು ನಂತರ ಆ ಪರಂಪರೆ ಮುಂದುವರೆದು ಲಿಖಿತ ರೂಪವನ್ನು ಪಡೆದುಕೊಂಡಿತು. 'ಜಾನಪದೀಯರ ಮನಸ್ಸು ಮಗುವಿನಷ್ಟೇ ಸ್ವಚ್ಛಂದವಾದದ್ದು ಅಂತಹ ಮನಸ್ಸಿನಿಂದ ಉತ್ಕೃಷ್ಟವಾದ ಸಾಹಿತ್ಯ ಉದಯಿಸಿದ್ದು' ಸಾಹಿತ್ಯ ರಚನೆಗೆ ಸುಲಭಸಾಧ್ಯ.

ಸಾಹಿತ್ಯದಲ್ಲಿ ರಚನೆಯಾದ ಯಾವುದೇ ಒಂದು ಕೃತಿಯೂ ಯಾವರೀತಿ ಪರಿಣಾಮಕಾರಿಯಾಗಿರುತ್ತದೆ. ಎಂಬುದಕ್ಕೆ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಎಲ್ಲದ್ದಕ್ಕೂ ಸಂಬಂಧಿಸಿದಂತಹ ಪಾತ್ರ ಚಿತ್ರಣಗಳ ಮೂಲಕ ಪ್ರತಿಬಿಂಬಿಸುವ ಒಂದು ನೆಲೆ. ಆ ನೆಲೆಯಿಂದ ಸಾಮಾಜದಲ್ಲಿರುವ ಅರಾಜಕತೆ, ಅನ್ಯಾಯ, ಅಕ್ರಮ, ದಬ್ಬಾಳಿಕೆಗಳನ್ನು ಸರಿಪಡಿಸಬೇಕು ಅಂತಹ ಆರೋಪಗಳನ್ನು ಯಾವ ರೀತಿ ಸಮನ ಮಾಡಬೇಕೆಂಬುದರ ಬಗ್ಗೆ ತಿಳಿಸುವಂತದ್ದು. ಸರ್ವಧರ್ಮ ಸಮನ್ವಯವಾದನಾಡಿನಲ್ಲಿ ಎಲ್ಲರಿಗೂ ಸಮಾನವಾದ ಅವಕಾಶಗಳು ಲಭಿಸಲೆಂದು ಕೃತಿಗಳ ಆಶಯ. ಜೊತೆಗೆ ನಾಡು-ನುಡಿ, ಆಚಾರ-ವಿಚಾರ, ಉಡುಗೆ-ತೊಡುಗೆ, ಆಹಾರ ಪ್ರಾದೇಶಿಕವಾಗಿ ಯಾವ ರೀತಿ ಭಿನ್ನವಾಗುತ್ತಾ ಹೋಗುತ್ತವೆ ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗುತ್ತವೆ.

ಸಾಹಿತ್ಯದ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಮತ್ತಷ್ಟು ಆಳವಾಗಿ ಅಭ್ಯಸಿಸಲು ಸಾಧ್ಯವಾಗುವುದು. ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ಬೆಳೆಸುವುದು ಸಾಹಿತ್ಯಾಭಿಮಾನಿಗಳ ಕರ್ತವ್ಯವೂ ಹೌದು.

ದೇಶಿ ಬೇರುಗಳ ಗುರುತಿಸುವಿಕೆ ಸಾಹಿತ್ಯ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಅಂತಹ ನೆಲೆಗಳನ್ನು ಯಾವ ದೃಷ್ಟಿಕೋನದಿಂದ ನೋಡಿದರೆ ಒಳಿತು ಎಂಬುದು ಇದರಿಂದ ಮಾತ್ರ ಸಾಧ್ಯ. ಕಾಲದಿಂದ ಕಾಲಕ್ಕೆ ಹೊಸ ತಿಳುವಳಿಕೆಯನ್ನು ತನ್ನ ಕಡೆ ಸೆಳೆಯುತ್ತಾ ತನ್ನ ವಿಸ್ತಾರವನ್ನು ಮತ್ತಷ್ಟು ಅಗಲವಾಗಿಸಿಕೊಂಡಿರುವುದು ಈ ಸಾಹಿತ್ಯ. ಹೀಗಾಗಿ ದೇಶಿ ಮತ್ತು ವಿದೇಶಿ ವಿದ್ವಾಂಸರು ತಮ್ಮನ್ನು

ತಾವು ತೊಡಗಿಸಿಕೊಂಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಮುಂದಿನ ತಲೆಮಾರಿನ ವಿದ್ವಾಂಸರು ಅದಕ್ಕಿಂತ ಹೆಚ್ಚಿನ ವಿದ್ವತ್ಪೂರ್ಣತೆಯನ್ನು ಸಾಧಿಸಲೆಂದು ಎಲ್ಲರ ಆಶಯವಾಗಿದೆ.

ಅಧ್ಯಾಪಕ, ಕವಿ, ನಾಟಕಕಾರ, ವಿಮರ್ಶಕ, ಕಾದಂಬರಿಕಾರ, ಕಥೆಗಾರ, ನಿರ್ದೇಶಕ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಚಂದ್ರಶೇಖರ ಕಂಬಾರರು. ಕಂಬಾರರು ಐದು ದಶಕಗಳಿಗೂ ಹೆಚ್ಚು ಕಾಲ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಂದಿಗೂ ಕಾರ್ಯನಿರತರಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಕಂಬಾರರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಲವಾರು ಕಾದಂಬರಿಗಳು ರಚನೆಯಾಗಿವೆ. ಈ ಕಾದಂಬರಿಗಳ ರಚನೆಗೆ ಒಂದು ಸಮಾಜದ ಸ್ಥಿತಿ-ಗತಿಗಳು ಪ್ರಮುಖ ಕಾರಣಗಳಾಗುತ್ತವೆ. ಅದರಲ್ಲೂ ಮುಖ್ಯವಾಗಿ ಧಾರ್ಮಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ವಿಚಾರಗಳನ್ನು ಕುರಿತು ಕಾದಂಬರಿಗಳು ರಚನೆಯಾಗಿವೆ. ಹಾಗೆಯೇ ಆಧುನಿಕ ಕಾದಂಬರಿಗಳಲ್ಲಿ ಬಹುಪಾಲು ಸ್ತ್ರೀ ಸಂವೇದನೆ ಮತ್ತು ಜಾತಿ ಪದ್ಧತಿಯನ್ನು ಕುರಿತಂತೆ ಅನೇಕ ವಿಭಿನ್ನ ವಿಚಾರಗಳನ್ನು ದಾಖಲಿಸುವಂತಹ ಕಾರ್ಯ ಮಾಡುತ್ತವೆ.

ಮಾನವ ತನ್ನ ದೈನಂದಿನ ಬದುಕಿನಲ್ಲಿ ಕೈಗೊಳ್ಳುವ ಕಾರ್ಯದ ಹಿಂದೆ ಒಂದಲ್ಲ ಒಂದು ಉದ್ದೇಶ ಇದ್ದೇ ಇರುತ್ತದೆ, ಇರಲೇಬೇಕು. ಉದ್ದೇಶವಿಲ್ಲದೆ ಮಾಡುವ ಕಾರ್ಯ ಎಂದಿಗೂ ಯಶಸ್ವಿಯಾಗುವುದಿಲ್ಲ. ಈ ಉದ್ದೇಶ ಸಫಲವಾಗಲು ಆಸಕ್ತಿ, ಅಭ್ಯಾಸಗಳೆರಡೂ ಅತ್ಯಗತ್ಯ. ಹಾಗಾಗಿ ಯಾವುದೇ ವ್ಯಕ್ತಿಗೆ ಜೀವನದಲ್ಲಿ "ಮುಂದೆ ಗುರಿ, ಹಿಂದೆ ಗುರು ಇರಬೇಕು" ಎಂಬ ಮಾತು ಔಚಿತ್ಯಪೂರ್ಣವಾಗಿದೆ.

ನವ್ಯೋತ್ತರ ಕಾಲಘಟ್ಟದಲ್ಲಿ ರಚಿತವಾದ ಚಂದ್ರಶೇಖರ ಕಂಬಾರರ "ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ" ಕಾದಂಬರಿಗಳನ್ನು ಪ್ರಸ್ತುತ ನಿಬಂಧ ರಚನೆಗೆ ಆಯ್ಕೆ ಮಾಡಿಕೊಂಡಿದ್ದು ಕಾದಂಬರಿಗಳೆರಡನ್ನೂ ತೌಲನಿಕ ಅಧ್ಯಯನಕ್ಕೆ ಒಳಪಡಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಕಾದಂಬರಿಗಳೆರಡೂ ವಿಭಿನ್ನ ನೆಲೆಗಟ್ಟಿಗೆ ಸೇರಿದವುಗಳಾದರೂ ಅವುಗಳಲ್ಲಿ ಸಾಮ್ಯತೆಗಳನ್ನು ಗುರುತಿಸಲಾಗಿದೆ.

ಪ್ರಸ್ತುತ ನಿಬಂಧ ರಚನೆಗೆ ಆಯ್ಕೆ ಮಾಡಿಕೊಂಡಿರುವ ಕಾದಂಬರಿಗಳಲ್ಲಿ ಎಲ್ಲಾ ಘಟನೆಗಳು ಮತ್ತು ಪಾತ್ರಗಳು ತೌಲನಿಕ ಅಧ್ಯಯನದ ಚರ್ಚೆಯ ವ್ಯಾಪ್ತಿಗೆ ಒಳಪಡುತ್ತವೆಂದು ಹೇಳುವುದು

ಅಸಾಧ್ಯವಾದರೂ ಕಾದಂಬರಿಗಳನ್ನು ಓದಿದಾಗ ನನಗೆ ಗೋಚರವಾದ ಕೆಲವು ವಿಚಾರಗಳನ್ನು ಅಧ್ಯಯನಕ್ಕೊಳಪಡಿಸಿ ಚರ್ಚಿಸಬಯಸಿದ್ದೇನೆ. ಅಧ್ಯಯನಕ್ಕೆ ಈ ಕಾದಂಬರಿಗಳನ್ನೇ ಆಯ್ದುಕೊಳ್ಳಲು ಕಾರಣ ಲೇಖಕರ ವಿಶಿಷ್ಟ ಬರವಣಿಗೆಯ ಕ್ರಮ, ಭಾಷಾ ಪ್ರಯೋಗ, ಮತ್ತು ಕಾದಂಬರಿಗಳಲ್ಲಿ ವ್ಯಕ್ತವಾಗಿರುವ ಸಾರ್ವಕಾಲೀಕವಾದ ಮಾನವ ಸಂಬಂಧಗಳ ಚಿತ್ರಣಗಳ ಬಗ್ಗೆ ಚರ್ಚಿಸಲಾಗಿದೆ.

ತೌಲನಿಕ ಅಧ್ಯಯನ ಎಂಬುದು ಎರಡು ಕೃತಿಗಳ ನಡುವಿನ ವಿಚಾರವಾಗಿದ್ದು ವಸ್ತು, ಭಾಷೆ ಮತ್ತು ಆ ಕೃತಿಗಳು ತಳೆಯುವ ಧೋರಣೆಯಲ್ಲಿ ವ್ಯಕ್ತವಾಗುವ ಸಾದೃಶ್ಯ-ವೈದೃಶ್ಯಗಳನ್ನು ಅರಿಯುವುದಾಗಿದೆ. ಹಾಗೆಯೇ ಕೃತಿಗಳು ರಚನೆಯಾದ ಸಂದರ್ಭ ಕಾಲಕ್ಕನುಗುಣವಾಗಿ ತಳೆದಿರುವ ಧೋರಣೆಗಳನ್ನು ಹೇಳುವ ಪ್ರಯತ್ನ ಮಾಡಿದ್ದೇನೆ.

"ಶಿವನ ಡಂಗುರ" ಹಾಗೂ "ಸಿಂಗಾರೆವ್ವ ಮತ್ತು ಅರಮನೆ" ಕಾದಂಬರಿಗಳ ತೌಲನಿಕ ಅಧ್ಯಯನ ಎಂಬ ಶೀರ್ಷಿಕೆಯ ಪ್ರಸ್ತುತ ನಿಬಂಧದಲ್ಲಿ ಏಳು ಅಧ್ಯಾಯಗಳಾಗಿ ವಿಭಾಗಿಸಿಕೊಂಡಿದ್ದು ಅವುಗಳ ಬಗ್ಗೆ ಚರ್ಚಿಸಲಾಗಿದೆ.

ಪ್ರಸ್ತುತವಾಗಿ ಈ ಪ್ರಬಂಧದ ಅಧ್ಯಯನದಲ್ಲಿ ಚಂದ್ರಶೇಖರ ಕಂಬಾರರ ಕೃತಿಗಳಾದ "ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ" ತೌಲನಿಕ ಅಧ್ಯಯನದಲ್ಲಿ ಚರ್ಚಿಸುವ ಚಿಕ್ಕ ಪ್ರಯತ್ನ ಇಲ್ಲಿ ನಡೆದಿದೆ. ಮೊದಲೇ ಹೇಳಿದಂತೆ ವಸಾಹತುಶಾಹಿ ವ್ಯವಸ್ಥೆ ಹಾಗೂ ಆಧುನಿಕ ದೃಷ್ಟಿಕೋನದಿಂದ ಹಳ್ಳಿಗಳಲ್ಲಿನ ವಾತಾವರಣದಲ್ಲಾಗುವ ವೈಪರಿತ್ಯವನ್ನು ತಿಳಿಸಿಕೊಡುವ ಪ್ರಯತ್ನ ಇಲ್ಲಿ ನಡೆದಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಂಬಾರರದ್ದು ಒಂದು ವಿಭಿನ್ನ ಮಾದರಿಯಾಗಿದೆ. ಪ್ರಸ್ತುತವಾಗಿ ಚಂದ್ರಶೇಖರ ಕಂಬಾರರ ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ ಈ ಕಾದಂಬರಿಗಳ ಮುಖಾಂತರ ಸಾಮಾಜಿಕ ಸ್ಥಿತಿ-ಗತಿ ಹಾಗೂ ಪಾತ್ರಗಳ ಮುಖೇನ ಒಂದು ಸಂಸ್ಕೃತಿಯ ವಿನಾಶ ಜೊತೆಗೆ ಅದನ್ನು ಮತ್ತೆ ಉಳಿಸಿಕೊಳ್ಳುವ ಪ್ರಯತ್ನ ನಂತರ ಸ್ತ್ರೀಯು ಯಾವ ನೆಲೆಗಟ್ಟಿನಲ್ಲಿದ್ದಾಳೆ ಎಂಬುದನ್ನು ಚರ್ಚಿಸಲಾಗಿದೆ.

ಕಂಬಾರರ ಬಹುತೇಕ ಕೃತಿಗಳು ಶಿವಾಪುರ ಎಂಬ ಹಳ್ಳಿಯಿಂದಲೇ ಶುರುವಾಗುವಂತದ್ದು. ಕನ್ನಡದ ಸಾಂಸ್ಕೃತಿಕ ಬದುಕಿನೊಂದಗಿನ ಕಂಬಾರರ ಸೃಜನಾತ್ಮಕ ಅನುಸಂದಾನ ನಿರಂತರವಾದುದ್ದು. ರೂಢಿಗತ ಅಧ್ಯಯನ ಮಾದರಿಗಳಿಗಿಂತ ಭಿನ್ನವಾದುದ್ದು. ಕೃತಿಗಳ ಉದ್ದಕ್ಕೂ

ಸಾಮಾನ್ಯ ಹಳ್ಳಿಜನರ ಮುಗ್ಧತೆಯನ್ನು ಬಳಸಿಕೊಂಡು ಅವರ ಜೀವನದ ಜೊತೆ ಆಟವಾಡುವಂತಹ ಕೆಲವು ಪಾತ್ರಗಳನ್ನು ಚಿತ್ರಿಸುತ್ತಾರೆ. ಸಮಾಜದಲ್ಲಿ ಒಂದು ವರ್ಗ ಮತ್ತೊಂದು ವರ್ಗವನ್ನು ಯಾವರೀತಿ ತನ್ನ ಅಂಕೆಯಲ್ಲಿಟ್ಟು ಕೊಂಡಿರುತ್ತದೆಂಬುದನ್ನು ಚರ್ಚಿಸಲಾಗಿದೆ. ಕೇವಲ ತಮ್ಮ ಸ್ವಾರ್ಥಕ್ಕಾಗಿ ಸಾಮಾನ್ಯ ಜನರನ್ನು ಬಳಸಿಕೊಳ್ಳುವ ರೀತಿ ಜೊತೆಗೆ ರೂಢಿಗತವಾಗಿ ಬಂದಂತಹ ಸಂಪ್ರದಾಯ ಪಾಲನೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಈ ಸಂಪ್ರದಾಯ ಪಾಲನೆಗೆ ಬಲಿಯಾಗುತ್ತಿರುವ ವರ್ಗಗಳನ್ನು ಪ್ರಸ್ತುತ ಸಮಾಜದಲ್ಲಿ ಇಂದಿಗೂ ಕಾಣಬಹುದಾಗಿದೆ. ಇವುಗಳಿಂದಾಗುವಂತಹ ಪರಿಣಾಮಗಳು ಮತ್ತು ಅವುಗಳನ್ನು ಎದುರಿಸುವಂತಹ ಪಾತ್ರ ಸೃಷ್ಟಿಯನ್ನು ಕಂಬಾರರು ತಮ್ಮ ಕೃತಿಗಳಲ್ಲಿ ವಿವರಿಸಿದ್ದಾರೆ.

* * * * *

ಅಧ್ಯಾಯ –2

ಚಂದ್ರಶೇಖರ ಕಂಬಾರರ ವ್ಯಕ್ತಿತ್ವ

ಕನ್ನಡ ಸಾಹಿತ್ಯದ ಮಹತ್ವದ ಲೇಖಕರಲ್ಲಿ ಡಾ.ಚಂದ್ರಶೇಖರ ಕಂಬಾರರ ಅಪರೂಪದ 'ಪ್ರತಿಭೆಯ ಗಣಿ' ಎಂದೇ ಹೇಳಬಹುದು. ರಂಗಭೂಮಿ, ನಾಟಕ, ಕಾವ್ಯ, ಕಥೆ, ಕಾದಂಬರಿ, ಜಾನಪದ, ಶಿಕ್ಷಣ ಹೀಗೆ ಹಲವು ಕ್ಷೇತ್ರಗಳಲ್ಲಿ ಗಣನೀಯವಾದ ಸೇವೆ ಸಲ್ಲಿಸಿದ್ದಾರೆ. ಕಂಬಾರರು ಕನ್ನಡದ ಮಹತ್ವದ ಕವಿ, ನಾಟಕಕಾರ, ಕಾದಂಬರಿಕಾರ, ಸಂಶೋಧಕ, ಜಾನಪದ ತಜ್ಞ, ರಂಗತಜ್ಞ, ಅಧ್ಯಾಪಕ, ಆಡಳಿತಗಾರ, ಚಲನಚಿತ್ರ ನಿರ್ದೇಶಕ, ಸಂಗೀತಗಾರ, ಹಾಡುಗಾರರಾಗಿ ಖ್ಯಾತರಾಗಿದ್ದಾರೆ.

ಕಂಬಾರರು 1937 ಜನವರಿ 2ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯಲ್ಲಿ ಬಸವಣ್ಣೆಪ್ಪ ಕಂಬಾರ ಮತ್ತು ಚೆನ್ನಮ್ಮ ದಂಪತಿಯ ಪುತ್ರನಾಗಿ ಜನಿಸಿದರು. ಇವರ ಮನೆತನದ ವೃತ್ತಿ ಕಮ್ಮಾರಿಕೆ. ಚಂದ್ರಶೇಖರ ಕಂಬಾರರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಘೋಡಗೇರಿಯಲ್ಲೇ ಪಡೆದರು. ನಂತರ ಗೋಕಾಕ್‌ನ ಮುನ್ಸಿಪಲ್ ಶಾಲೆಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಪಡೆದರು. ಇಲ್ಲಿ ಖ್ಯಾತ ಕಾದಂಬರಿಕಾರರಾದ ಕೃಷ್ಣಮೂರ್ತಿ ಪುರಾಣಿಕರು ಕಂಬಾರರ ಗುರುಗಳಾಗಿದ್ದರು. ಗುರುಗಳ ನೆಚ್ಚಿನ ವಿದ್ಯಾರ್ಥಿಯಾಗಿದ್ದ ಕಂಬಾರರು ಆರ್ಥಿಕ ತೊಂದರೆಯಿಂದಾಗಿ ಶಾಲೆ ಬಿಟ್ಟಾಗ ಕೃಷ್ಣಮೂರ್ತಿ ಪುರಾಣಿಕರು ಕಂಬಾರರನ್ನು ಕರೆಸಿಕೊಂಡು ಸಾವಳಗಿ ಮಠದ ಹಾಸ್ಟೆಲ್‌ನಲ್ಲಿರಲು ವ್ಯವಸ್ಥೆ ಮಾಡಿದರು. ಗುರುಗಳ ಪ್ರೋತ್ಸಾಹದಿಂದಾಗಿ ನಾಟಕ ರಚಿಸಿ ಓದಿದ್ದರು. "ಕಥಾವಳಿ" ಮಾಸಪತ್ರಿಕೆಯಲ್ಲಿ ಕಂಬಾರರು ರಚಿಸಿದ ಸ್ವಾತಂತ್ರ್ಯ ಹೋರಾಟದ ವಸ್ತುವುಳ್ಳ ಕವಿತೆ ಪ್ರಕಟವಾಗಿತ್ತು. ಸಾವಳಗಿ ಮಠದ ಸ್ವಾಮಿಗಳು ಕಂಬಾರರ ಬರವಣಿಗೆಗೆ ಪ್ರೋತ್ಸಾಹ ನೀಡಿದರು. ಕಂಬಾರರು ಬರೆದ ಕಥೆಯೊಂದನ್ನು ಮೂಢಬಿದಿರೆಯ ಪ್ರಕಾಶನ ಸಂಸ್ಥೆಯೊಂದು ಕಿರುಪುಸ್ತಿಕೆ ಮಾಲೆಯಲ್ಲಿ ಪ್ರಕಟಿಸಿತು.

ಪ್ರೌಢಶಾಲೆ ಮಟ್ಟದಲ್ಲೇ ಅದ್ಭುತ ಪ್ರತಿಭಾಶಾಲಿಯಾಗಿದ್ದ ಕಂಬಾರರು, ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು, 1962ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ. ಹಾಗೂ ಪಿಹೆಚ್.ಡಿ ಪದವಿ ಪಡೆದರು. ಅನಂತರ ಚಿಕಾಗೋ ವಿಶ್ವವಿದ್ಯಾನಿಲಯದ ವಿಶೇಷ ಆಹ್ವಾನದ ಮೇರೆಗೆ ಅಮೇರಿಕಾಗೆ ತೆರಳಿ 1968ರಿಂದ 1970 ರವರೆಗೆ ಕನ್ನಡ ಅಧ್ಯಾಪಕರಾಗಿ, ಜಾನಪದ ಕ್ಷೇತ್ರದ ತಜ್ಞರಾಗಿ ಕೆಲಸ ಮಾಡಿದರು. 1984ರಿಂದ 1986 ರವರೆಗೆ

ಫೋರ್ಡ್ ಸಂಸ್ಥೆಯ ಫೆಲೋಶಿಪ್ ಪಡೆದು ಸಾಂಪ್ರದಾಯಿಕ ರಂಗಭೂಮಿ, ಜಾನಪದ ರಂಗಭೂಮಿಗಳೊಂದಿಗೆ ಆಧುನಿಕ ರಂಗಭೂಮಿಯ ಅಂತರ್ ಸಂಬಂಧದವನ್ನು ಕುರಿತು ವಿಶೇಷ ಅಧ್ಯಯನ ನಡೆಸಿದರು.

1970ರಿಂದ 1991ರವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1991ರಿಂದ 1998ರ ಅವಧಿಯಲ್ಲಿ ಹಂಪಿಯ 'ಕನ್ನಡ ವಿಶ್ವವಿದ್ಯಾನಿಲಯ'ದ ಮೊದಲ ಕುಲಪತಿಯಾಗಿ ಕಾರ್ಯನಿರ್ವಹಿಸಿದರು. 1980–83ರ ಅವಧಿಯಲ್ಲಿ 'ಕರ್ನಾಟಕ ನಾಟಕ ಅಕಾಡೆಮಿಯ' ಯಲ್ಲಿ, 1980–83ರ ಅವಧಿಯಲ್ಲಿ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ'ಯಲ್ಲಿ, 1987–91ರ ಅವಧಿಯಲ್ಲಿ ಮೈಸೂರಿನಲ್ಲಿರುವ 'ಕರ್ನಾಟಕ ರೆಪರ್ಟರಿ ರಂಗಾಯಣ'ದಲ್ಲಿ, 1992–98 ರವರೆಗೆ 'ಕೇಂದ್ರ ಸಾಹಿತ್ಯ ಅಕಾಡೆಮಿಯ'ಯಲ್ಲಿ, 1992 ರಿಂದ 96 ಮತ್ತು 1998 ರಲ್ಲಿ 'ಕೇಂದ್ರ ಸಂಗೀತ ನಾಟಕ ಅಕಾಡೆಮಿ'ಯಲ್ಲಿ 1995–1996 ರವರೆಗೆ 'ರಾಷ್ಟ್ರೀಯ ರಂಗಶಾಲೆ'ಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ದೆಹಲಿಯ 'ರಾಷ್ಟ್ರೀಯ ರಂಗಶಾಲೆ'ಯಲ್ಲಿ 1996–2000 ರವರೆಗೆ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ, ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. 1983ರಿಂದ 1987ರ ವರೆಗೆ 'ಕರ್ನಾಟಕ ನಾಟಕ ಅಕಾಡೆಮಿಯ' ಅಧ್ಯಕ್ಷರಾಗಿದ್ದರು. 2004ರಲ್ಲಿ 'ರಾಜ್ಯ ವಿಧಾನಪರಿಷತ್ತಿನ ಸದಸ್ಯ'ರಾಗಿ ಕಾರ್ಯನಿರ್ವಹಿಸಿದ್ದರು. ಚಿಕಾಗೋ, ಬರ್ಲಿನ್, ನ್ಯೂಯಾರ್ಕ್, ಮಾಸ್ಕೋ, ಜಪಾನ್ ಮುಂತಾದೆಡೆಗಳ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ 'ಜಾನಪದ ಮತ್ತು ರಂಗಭೂಮಿ' ಕುರಿತು ಉಪನ್ಯಾಸ ನೀಡಿದ ಹೆಗ್ಗಳಿಕೆ ಕಂಬಾರರದು.

ಚಂದ್ರಶೇಖರ ಕಂಬಾರರು ಯುವಕರಾಗಿದ್ದಾಗ ಖ್ಯಾತ ಕವಿಗಳಲ್ಲೊಬ್ಬರು ಅಧ್ಯಕ್ಷತೆ ವಹಿಸಿದ್ದ ಧಾರವಾಡದ ಕವಿ ಸಮ್ಮೇಳನದಲ್ಲಿ ಕವಿತೆಯೊದನ್ನು ಓದಿದ್ದರಂತೆ. ಕವಿತೆಯನ್ನು ಕುರಿತು ಅಧ್ಯಕ್ಷರು ಮಾತನಾಡುವಾಗ "ಕಜ್ಜಿಣ ಕಾಸುವವರೂ ಈಗ ಕಾವ್ಯ ಬರೆಯುತ್ತಿದ್ದಾರೆ." ಎಂಬ ಕುಹಕದ ಮಾತುಗಳನ್ನು ಕಂಬಾರರ ಬಗ್ಗೆ ಹೇಳಿದ್ದು ಕಂಬಾರರ ಸ್ವಾಭಿಮಾನವನ್ನು ಬಡಿದೆಬ್ಬಿಸಲು ಅಂದೇ ಕಂಬಾರರು ಕಾವ್ಯವನ್ನು ಪಳಗಿಸಿಕೊಳ್ಳಲು ನಿರ್ಧರಿಸಿದರು.

ಜಾನಪದ ಸೊಗಡನ್ನು ತಮ್ಮ ಬರವಣಿಗೆಯಲ್ಲಿ ಮೈದಾಳಿಸಿಕೊಂಡು ಬಂದಿರುವ ಕಂಬಾರರು ತಮ್ಮ ಊರಿನ ಜಾನಪದ ಹಾಡು, ಕುಣಿತ, ನಾಟಕಗಳ ಬಗ್ಗೆ ವಿಶೇಷ ಕಾಳಜಿವಹಿಸಿ ಅವುಗಳ ಸಂಗ್ರಹ, ಬರವಣಿಗೆಯನ್ನು ರೂಢಿಸಿಕೊಂಡರು. ಉತ್ತರ ಕರ್ನಾಟಕ ಅದರಲ್ಲೂ

ಗೋಕಾಕ್, ಬೆಳಗಾವಿ, ಧಾರವಾಡದ ಗಂಡು ಭಾಷೆಯನ್ನು ಕನ್ನಡ ಸಾಹಿತ್ಯಕ್ಕೆ ಹೊತ್ತು ತಂದರು. ಭಾಷೆಯನ್ನು ಬೇಂದ್ರೆಯಂತೆ ಪರಿಣಾಮಕಾರಿಯಾಗಿ ದುಡಿಸಿಕೊಂಡವರು ಚಂದ್ರಶೇಖರ ಕಂಬಾರರು. 2011 ರ ವೇಳೆಗೆ ಕಂಬಾರರು 22ಕ್ಕೂ ಹೆಚ್ಚು ನಾಟಕಗಳು, 8 ಕವಿತಾ ಸಂಕಲನಗಳು, 6 ಕಾದಂಬರಿಗಳು ಮತ್ತು 12ಕ್ಕೂ ಹೆಚ್ಚು ಸಂಶೋಧನ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ.

1958ರಲ್ಲಿ ಕಂಬಾರರ ಮೊಟ್ಟಮೊದಲ ಕವನ ಸಂಕಲನ "ಮುಗುಳು" ಪ್ರಕಟವಾಯಿತು. "ಹೇಳತೇನಕೇಳ, ತಕರಾರಿನವರು ಸಾವಿರದ ನೆರಳು, ಬೆಳ್ಳಿಮೀನು, ಅಕ್ಕಕ್ಕು ಹಾಡುಗಳೇ" ಇವು ಇನ್ನಿತರ ಪ್ರಮುಖ ಕವನ ಸಂಕಲನಗಳು ಇವುಗಳಲ್ಲದೆ "ಚಕೋರಿ" ಎಂಬ ಮಹಾಕಾವ್ಯವನ್ನು ರಚಿಸಿದ್ದಾರೆ.

ಕಂಬಾರರ ನಾಟಕಗಳು ಕನ್ನಡ ರಂಗಭೂಮಿಯಲ್ಲಿ ಹೊಸ ಕ್ರಾಂತಿಯನ್ನುಂಟು ಮಾಡಿದವು. "ಬೆಂಬತ್ತಿದ್ದ ಕಣ್ಣು, ನಾರ್ಸಿಸಸ್, ಋಷ್ಯಶೃಂಗ (1970) ಜೋಕುಮಾರಸ್ವಾಮಿ (1972), ಜಾಳೇಶ (1973), ಕಿಟ್ಟಯ ಕಥೆ, ಸಂಗ್ಯಾಬಾಳ್ಯ ಅನಬೇಕೋ ನಾಡೊಳಗ, ಜೈಸಿದ ನಾಯಕ (1975), ಅಲೀಬಾಬ ಮತ್ತು ನಲವತ್ತು ಕಳ್ಳರು, ಕಾಡುಕುದುರೆ (1976), ನಾಯೀಕತೆ (1976), ಖಿರೋಖಿರ, ಮತಾಂತರ, ಹರಕೆಯ ಕುರಿ (1983), ಸಾಂಬಶಿವ ಪ್ರಹಸನ (1987), ಸಿರಿಸಂಪಿಗೆ (1991), ಹುಲಿಯನೆರಳು (1990), ಬೆಪ್ಪುತಕ್ಕಡಿ, ಭೋಳೇಶಂಕರ (1991), ಪುಷ್ಪರಾಣಿ, ತುಕ್ರನ ಕನಸು (1989), ಮಹಾಮಾಯಿ (1999), ಹಬ್ಬಿನ ಕಣ್ಣು" ಇವು ಕಂಬಾರರ ನಾಟಕಗಳು. ಸಿರಿಸಂಪಿಗೆ ನಾಟಕ ಇಂಗ್ಲಿಷ್ ಹಾಗೂ ಇತರ ಎಲ್ಲಾ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿದೆ ನಾಯೀಕತೆ, ಕಾಡುಕುದುರೆ ಮತ್ತು ಹರಕೆಯ ಕುರಿ ನಾಟಕಗಳು ಚಲನಚಿತ್ರವಾಗಿವೆ. ಹರಕೆಯಕುರಿ ನಾಟಕ ಇಂಗ್ಲಿಷ್, ಹಿಂದಿ, ತಮಿಳು ಭಾಷೆಗೆ ಅನುವಾದಗೊಂಡಿದೆ. ತುಕ್ರನ ಕನಸು ಹಾಗೂ ಮಹಾಮಾಯಿ ನಾಟಕಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಗೆ ಅನುವಾದವಾಗಿವೆ. ನಾರ್ಸಿಸಸ್, ಜಾಳೇಶ ನಾಟಕಗಳನ್ನು "ಅಸಂಗತ" ನಾಟಕಗಳು ಎನ್ನಲಾಗುತ್ತದೆ.

ಕಂಬಾರರು ಒಟ್ಟು ಆರು ಕಾದಂಬರಿಗಳನ್ನು ರಚಿಸಿದ್ದಾರೆ. ಕಂಬಾರರ ಕಾದಂಬರಿಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ವಿಶಿಷ್ಟತೆಯಿಂದ ಕೂಡಿದ್ದು ಸಾಂಸ್ಕೃತಿಕ ದಾಖಲೆಗಳಂತೆ ಮೌಲಿಕ ಸ್ಥಾನವನ್ನು ಪಡೆದಿದೆ. ಅಣ್ಣ-ತಂಗಿ (1956), ಕರಿಮಾಯಿ (1975), ಸಿಂಗಾರೆವ್ವ ಮತ್ತು ಅರಮನೆ (1982), ಜಿ.ಕೆ.ಮಾಸ್ತರ ಪ್ರಣಯ ಪ್ರಸಂಗ (1986), ಶಿಖರ ಸೂರ್ಯ (2006), ಶಿವನ ಡಂಗುರ

(2015). ಅಣ್ಣ-ತಂಗಿ, ಶಿಖರಸೂರ್ಯ ಶಿವನ ಡಂಗುರ ಕಾದಂಬರಿಗಳನ್ನು ಹೊರತುಪಡಿಸಿ ಉಳಿದ ಮೂರು ಕಾದಂಬರಿಗಳು ಚಲನಚಿತ್ರಗಳಾಗಿವೆ. ಕರಿಮಾಯಿ ಹಾಗೂ ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಗಳು ನಾಟಕ ರೂಪದಲ್ಲೂ ರಂಗದಲ್ಲಿ ಪ್ರದರ್ಶನಗೊಂಡಿವೆ. 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿಯನ್ನು ಶ್ರೀಮತಿ ಲಕ್ಷ್ಮಿ ಚಂದ್ರಶೇಖರ ಇಂಗ್ಲ ಭಾಷೆಗೆ ಅನುವಾದ ಮಾಡಿದ್ದಾರೆ.

ಕಂಬಾರರು ಜಾನಪದಕ್ಕೆ ಸಂಬಂಧಿಸಿದಂತೆ 12ಕ್ಕೂ ಹೆಚ್ಚು ಸಂಶೋಧನಾ ಕೃತಿಗಳನ್ನು ರಚಿಸಿದ್ದಾರೆ. ಇವೆಲ್ಲವೂ ಉತ್ತರ ಕರ್ನಾಟಕದ ಜನಪದ ಸಂಶೋಧನೆಗಳಾಗಿವೆ. ಅವರ ಜಾನಪದ ಕೃತಿಗಳೆಂದರೆ "ಉತ್ತರ ಕರ್ನಾಟಕದ ಜನಪದ ರಂಗಭೂಮಿ (1965), ಸಂಗ್ಯಾಬಾಳ್ಯ (ಕೀರ್ತಿನಾಥ ಕುರ್ತುಕೋಟಿಯೊಂದಿಗೆ ಸಂಪಾದಿಸಿದ್ದಾರೆ 1966), ಬಣ್ಣಿಸಿ ಹಾಡವ್ವ ನನ್ನ ಬಳಗ (1968), ಮಾತಡೊ ಲಿಂಗವೇ (1973), ಬಯಲಾಟಗಳು (1973), ನಮ್ಮ ಜಾನಪದ (1980), ಬಂದೀರೇ ನನ್ನ ಜಡೆವೊಳಗೆ (1981), ಲಕ್ಷಾಪತಿ ರಾಜನಕತೆ (1986), ಬೇಡರಹುಡುಗ ಮತ್ತು ಗಿಳಿ (1989) ಕಾಸಿಗೊಂದು ಸೇರು (1989), ನೆಲದ ಮರೆಯ ನಿಧಾನ (1993), ದೇಶೀಯ ಚಿಂತನ (2004)" ಮುಂತಾದವು ಕಂಬಾರರ ಸಂಪಾದನೆ ಸಂಶೋಧನೆ ಮತ್ತು ವಿಮರ್ಶೆಗೆ ಸಂಬಂಧಿಸಿದ ಕೃತಿಗಳಾಗಿವೆ. ಜೊತೆಗೆ "ಕನ್ನಡ ಜಾನಪದ ವಿಶ್ವ ಕೋಶ"(1985) ಎಂಬ ಹೆಸರಿನ ಎರಡು ಬೃಹತ್ ಸಂಪುಟಗಳನ್ನು ಸಂಪಾದಿಸಿದ್ದಾರೆ.

ರಂಗಭೂಮಿ, ಸಾಹಿತ್ಯ, ಶೈಕ್ಷಣಿಕ ಮುಂತಾದ ಕ್ಷೇತ್ರಗಳಲ್ಲಿನ ಕಂಬಾರರ ಸೇವೆಯ ಫಲವಾಗಿ ಅವರಿಗೆ ಮತ್ತು ಅವರ ಕೃತಿಗಳಿಗೆ ಹಲವಾರು ಪ್ರಶಸ್ತಿ-ಸನ್ಮಾನಗಳು ಕಂಬಾರರಿಗೆ ಲಭಿಸಿವೆ.

ಕಂಬಾರರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು 5 ಬಾರಿ ಶ್ರೇಷ್ಠಕೃತಿ ಪ್ರಶಸ್ತಿ ನೀಡಿ ಗೌರವಿಸಿದೆ. ಆ ಕೃತಿಗಳೆಂದರೆ ತಕರಾರಿನವರು (ಕವನಸಂಕಲನ) ಜೋಕುಮಾರಸ್ವಾಮಿ, ಜೈಸಿದ ನಾಯಕ (ನಾಟಕ ಕೃತಿಗಳು) ಸಿಂಗಾರೆವ್ವ ಮತ್ತು ಅರಮನೆ (ಕಾದಂಬರಿ) ಬೇಡರ ಹುಡುಗಿ ಮತ್ತು ಗಿಳಿ (ಸಂಶೋಧನಾ ಕೃತಿ) ಇವು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿಗಳು.

ಸಾವಿರದ ನೆರಳು ಕವನ ಸಂಕಲನಕ್ಕೆ 1982ರಲ್ಲಿ ಕೇರಳ ರಾಜ್ಯದ "ಆಶಾನ್ ಪಶಸ್ತಿ" ಬಂದಿದೆ. ಜೋಕುಮಾರಸ್ವಾಮಿ ನಾಟಕಕ್ಕೆ 1975ರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ

ಜೈಸಿದ ನಾಯಕ ನಾಟಕಕ್ಕೆ 1975ರಲ್ಲಿ ಪ್ರತಿಷ್ಠಿತ ವರ್ಧಮಾನ ಪ್ರಶಸ್ತಿ ಲಭಿಸಿದೆ. ಕಾಡುಕುದುರೆ, ಹರಕೆಯಕುರಿ ನಾಟಕಗಳು ಚಲನಚಿತ್ರವಾಗಿ "ರಾಷ್ಟ್ರೀಯ ಪ್ರಶಸ್ತಿ"ಗಳನ್ನು ಗಳಿಸಿವೆ.

ನಾಯೀಕತೆ ನಾಟಕ ಆಧರಿಸಿ ಬಂದ 'ಸಂಗೀತಾ' ಚಲನಚಿತ್ರ 5 ರಾಜ್ಯ ಪ್ರಶಸ್ತಿಗಳನ್ನು ಗಳಿಸಿದೆ. 1991ರಲ್ಲಿ ಸಿರಿಸಂಪಿಗೆ ನಾಟಕ "ಕೇಂದ್ರ ಸಾಹಿತ್ಯ ಅಕಾಡೆಮಿ" ಪ್ರಶಸ್ತಿ ಮತ್ತು 'ದೆಹಲಿಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿದೆ. 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿ 'ಸಿಂಗಾರೆವ್ವ' ಎಂಬ ಚಲನಚಿತ್ರವಾಗಿ "ಉತ್ತಮ ಪ್ರಾದೇಶಿಕ ಚಿತ್ರ" ಎಂಬ ರಾಷ್ಟ್ರೀಯ ಪ್ರಶಸ್ತಿ ಪಡೆಯಿತು. ಶಿಖರಸೂರ್ಯ ಕಾದಂಬರಿಗೆ 2009ರ ಪ್ರತಿಷ್ಠಿತ 'ಠಾಕೂರ್ ಸಾಹಿತ್ಯ ಪ್ರಶಸ್ತಿ' ಬಂದಿದೆ.

ರಂಗಭೂಮಿಯ ಅಭಿವೃದ್ಧಿಗಾಗಿ ಕಂಬಾರರ ಶ್ರಮವನ್ನು ಪರಿಗಣಿಸಿ 1990ರಲ್ಲಿ "ಶಂಕರೇಗೌಡ ಪ್ರಶಸ್ತಿ" ನೀಡಿ ಗೌರವಿಸಲಾಯಿತು. 1983ರಲ್ಲಿ ದೆಹಲಿಯ 'ಸಂಗೀತ ನಾಟಕ ಅಕಾಡೆಮಿಯ' ಪ್ರಶಸ್ತಿ, 1993ರಲ್ಲಿ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ' ಪ್ರಶಸ್ತಿ, 1995ರಲ್ಲಿ 'ಕನ್ನಡ ಸಾಹಿತ್ಯ ಪರಿಷತ್' ಸನ್ಮಾನ, 2002ರಲ್ಲಿ ಮಧ್ಯಪ್ರದೇಶದ 'ಕಬೀರ್' ಸನ್ಮಾನ್, ಅದೇ ವರ್ಷ 'ಬಸವಶ್ರೀ' ಪ್ರಶಸ್ತಿ ಕಂಬಾರರಿಗೆ ಲಭಿಸಿವೆ.

ಕೇಂದ್ರ ನಾಟಕ ಅಕಾಡೆಮಿಯಿಂದ 'ಶ್ರೇಷ್ಠ ನಾಟಕಕಾರ' ಪ್ರಶಸ್ತಿ, ಪದ್ಮಶ್ರೀ (2001), ಮಾಸ್ತಿ ಪ್ರಶಸ್ತಿ (1997), ಕಲ್ಕತ್ತಾದ 'ನಾಂದಿಕರ' ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಚಂದ್ರಶೇಖರ ಕಂಬಾರರ ಅದ್ವಿತೀಯ ಸಾಹಿತ್ಯ ಸಾಧನೆಗಾಗಿ 2010 ನೇ ಸಾಲಿನ ಜ್ಞಾನಪೀಠ ಪ್ರಶಸ್ತಿ 2011ರಲ್ಲಿ ಲಭಿಸಿದೆ. ಇದು ಕನ್ನಡಕ್ಕೆ ದೊರೆತ 8 ನೇ ಜ್ಞಾನಪೀಠ ಪ್ರಶಸ್ತಿಯಾಗಿದ್ದು ಕನ್ನಡಿಗರಿಗೆ ಹೆಮ್ಮೆಯ ಸಂಗತಿಯಾಗಿದೆ.

ಒಟ್ಟಿನಲ್ಲಿ ಕಾವ್ಯ, ಮಹಾಕಾವ್ಯ, ನಾಟಕ, ಕಾದಂಬರಿ, ಜಾನಪದ ಸಂಶೋಧನೆ, ರಾಜಕೀಯ, ಶಿಕ್ಷಣ, ಹೀಗೆ ವಿಭಿನ್ನ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡು ಐದು ದಶಕಗಳಿಗೂ ಹೆಚ್ಚುಕಾಲದಿಂದ ಬರೆಯುತ್ತಾ ಬಂದಿರುವುದು ಕಂಬಾರರ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಪ್ರತಿಯೊಂದು ಕೃತಿಗಳಲ್ಲೂ ಹೊಸತನ್ನು ಸಾಧಿಸಿದ್ದಾರೆ. ಗ್ರಾಮ್ಯ ಮತ್ತು ಶಿಷ್ಟ ಭಾಷೆಗಳೆರಡರ ಮೇಲೂ ಪ್ರಭುತ್ವ ಹೊಂದಿರುವ ಕಂಬಾರರು ಗ್ರಾಮೀಣ ಬದುಕಿನ ವಾಸ್ತವವನ್ನು

ಜಾನಪದ ತಂತ್ರದ ಜೊತೆಗೆ ನವ್ಯದ ಲಕ್ಷಣಗಳಿಗನುಗುಣವಾಗಿ ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಇವರ ಈ ಸೃಜನಶೀಲ ಸಾಮರ್ಥ್ಯವೇ ಅವರನ್ನು ಶ್ರೇಷ್ಠ ಬರಹಗಾರರ ಸಾಲಿನಲ್ಲಿ ನಿಲ್ಲಿಸುತ್ತವೆ.

ಎಲ್ಲಾ ಸೇರಿ ಸುಮಾರು 50 ಕ್ಕೂ ಹೆಚ್ಚು ಕೃತಿಗಳನ್ನು ಕಂಬಾರರು ರಚಿಸಿದ್ದಾರೆ. ಇಷ್ಟೆಲ್ಲಾ ಸಾಧನೆ ಮಾಡಿರುವ ಚಂದ್ರಶೇಖರ ಕಂಬಾರರು ಬೆಂಗಳೂರಿನ ಬನಶಂಕರಿಯಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ.

* * * * *

ಅಧ್ಯಾಯ –3

ಕನ್ನಡ ಕಾದಂಬರಿ ಸಾಹಿತ್ಯದ ಆರಂಭ ಮತ್ತು ವಿಕಾಶ

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಪ್ರಭಾವಶಾಲಿಯಾದ, ವಿಶೇಷವಾದ, ಜನಪ್ರಿಯವಾದ ಪ್ರಕಾರವಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಆಂಗ್ಲ ಸಾಹಿತ್ಯದ ಪ್ರಭಾವದಿಂದಾಗಿ ಹೊಸಗನ್ನಡ ಸಾಹಿತ್ಯದಲ್ಲಿ ಭಾವಗೀತೆ, ಸಣ್ಣಕಥೆ, ಪ್ರಬಂಧ, ಜೀವನಚರಿತ್ರೆ ಮೊದಲಾದ ಪ್ರಕಾರಗಳು ಕಾಣಿಸಿಕೊಂಡರೂ ಕಾದಂಬರಿ ಪ್ರಕಾರ ಹೆಚ್ಚು ಆಕರ್ಷಣೀಯವಾಯಿತು. ಕಾದಂಬರಿ ಪ್ರಕಾರ ಅಸಂಖ್ಯಾತ ಬರಹಗಾರರನ್ನು ಪಡೆದಂತೆ ಅಸಂಖ್ಯಾತ ಓದುಗರನ್ನೂ ಪಡೆಯಿತು. ಇದಕ್ಕೆ ಕಾರಣ ಕಾದಂಬರಿಗಳು ಎಲ್ಲಾ ವರ್ಗದ ಜನರ ಬದುಕನ್ನು ವಸ್ತುವಾಗಿಸಿಕೊಂಡದ್ದು ಒಂದಾದರೆ ಮತ್ತೊಂದು ಜನಸಾಮಾನ್ಯರ ಆಡುಭಾಷೆಯಲ್ಲಿ ರಚನೆಗೊಂಡದ್ದು. ಹಾಗಾಗಿ ಕಾದಂಬರಿಯನ್ನು ಆಧುನಿಕ ಜಗತ್ತಿನ ಸಾಹಿತ್ಯ ಪ್ರಕಾರ ಎಂದು ಕರೆಯಲಾಗುತ್ತದೆ.

ಗದ್ಯ ಬಗೆಯ ವಿಸ್ತೃತ ರೂಪವೇ ಕಾಂದಬರಿ. ಕಾದಂಬರಿಯನ್ನು ಆಂಗ್ಲಭಾಷೆಯಲ್ಲಿ "ನಾವೆಲ್" ಎಂದು ಕರೆಯಲಾಗುತ್ತದೆ. ಈ "ನಾವೆಲ್" ಎಂಬ ಪದ ಲ್ಯಾಟಿನ್ ಭಾಷೆಯ "ನೋವಸ್" ಎಂಬ ಪದದಿಂದ ನಿಷ್ಪನ್ನವಾಗಿದೆ. "ನೋವೆಸ್" ಎಂದರೆ ಹೊಸದು ಎಂದರ್ಥ. ಹೊಸದಾದ ಈ ಸಾಹಿತ್ಯ ಪ್ರಕಾರ "ನಾವೆಲ್", 'ನವಲಾ', 'ಕಾದಂಬರಿ' ಎಂದು ಕರೆಯಲ್ಪಟ್ಟದೆ. ಕನ್ನಡದಲ್ಲಿ ಈ ಪ್ರಕಾರವನ್ನು "ಕಾದಂಬರಿ" ಎಂದೇ ಕರೆಯಲಾಯಿತು. ಮರಾಠಿ ಸಾಹಿತ್ಯದಲ್ಲಿ 'ಕಾದಂಬರಿ' ಎಂದೇ ಕರೆದರೂ ಭಾಷಾಕೋಶದಲ್ಲಿ ಕಾದಂಬರಿಗೆ 'ಕಲ್ಪಿತ ಕಥೆ' ಎಂಬ ಅರ್ಥವನ್ನು ಸೂಚಿಸಲಾಗಿದೆ.

ಕಾದಂಬರಿ ಪ್ರಕಾರ ಬರುವುದಕ್ಕೆ ಮೊದಲೇ ಗದ್ಯ ಪರಂಪರೆ ಎಲ್ಲಾ ಸಾಹಿತ್ಯ ಪ್ರಕರಗಳಲ್ಲೂ ಇತ್ತು. ಆದರೆ ಕಾದಂಬರಿ ಹುಟ್ಟಿದ್ದು ಯುರೋಪಿನಲ್ಲಿ ನಡೆದ ಕೈಗಾರಿಕೀಕರಣ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಫಲವಾಗಿ. ಕೈಗಾರಿಕಾ ಕ್ರಾಂತಿಯ ಫಲವಾಗಿ ಮುದ್ರಣಯಂತ್ರ ಆವಿಷ್ಕಾರಗೊಂಡ ಪರಿಣಾಮವಾಗಿ ಕಾದಂಬರಿಗಳು ಹೆಚ್ಚು ಹೆಚ್ಚು ಮುದ್ರಣಗೊಂಡು ಪ್ರಚಾರಕ್ಕೆ ಬಂದವು. ನಂತರ 1917ರ ರಷ್ಯನ್ ಕ್ರಾಂತಿಯ ಮುನ್ನೋಟದಲ್ಲಿ ರಷ್ಯನ್ ಕಾದಂಬರಿಗಳು ಹುಟ್ಟಿ ಬೆಳೆದವು. ರಷ್ಯನ್ ಜನ ಸಮುದಾಯ 'ಝಾರ್' ಚಕ್ರಾಧಿಪತ್ಯ ಮತ್ತು ಶ್ರೀಮಂತ ಜಮೀನ್ದಾರರ

ಒಡಿತದಿಂದ ಬಿಡಿಸಿಕೊಂಡು ನೂತನ ಸಮತಾವಾದ ಸಮಾಜದ ನಿರ್ಮಾಣಕ್ಕೆ ಸಜ್ಜುಗೊಳ್ಳುತ್ತಿದ್ದ ಕಾಲದಲ್ಲಿ ರಷ್ಯಾದಲ್ಲಿ ಕಾದಂಬರಿ ಹುಟ್ಟಿತು.

ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಕಾದಂಬರಿ ಪ್ರಕಾರ ಮೊದಲು ಕಾಣಿಸಿಕೊಂಡದ್ದು ಮರಾಠಿ ಮತ್ತು ಬಂಗಾಳಿ ಸಾಹಿತ್ಯದಲ್ಲಿ. ನಂತರ ಕನ್ನಡದಲ್ಲಿ, ಕನ್ನಡಿಗರಿಗೆ ಮರಾಠಿ, ಬಂಗಾಳಿ ಭಾಷೆಗಳ ಪರಿಚಯ ಮತ್ತು ಪ್ರಭಾವವಿದ್ದ ಕಾರಣದಿಂದಾಗಿ ಕನ್ನಡದಲ್ಲಿ ಅನುವಾದ ಕಾದಂಬರಿಗಳು ಬಂದವು.

ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದಾಗಿ ಕಾದಂಬರಿ ಪ್ರಕಾರ ಕನ್ನಡಕ್ಕೆ ಬಂದಿತೆಂದು ಹೇಳುವಷ್ಟು ಈ ಪ್ರಕಾರ ಪ್ರಭಾವಿತವಾಗಿದ್ದರೂ, ಅದಕ್ಕೂ ಮೊದಲೇ 'ಕಾದಂಬರಿ' ಎಂದು ಕರೆಯಬಹುದಾದ ಮೂರು ಕೃತಿಗಳು ರಚನೆಯಾಗಿದ್ದವೆಂದು ಸಾಹಿತ್ಯ ಚರಿತ್ರಕಾರರು ಹೇಳುತ್ತಾರೆ. ಯಾದವನ 'ಕಲಾವತೀ ಪರಿಣಯ' (ಸುಮಾರು 1815), ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' (1821), ಕೆಂಪುನಾರಾಯಣನ 'ಮುದ್ರಾಮಂಜೂಷ' (1823), ಇವುಗಳ ನಂತರದಲ್ಲಿ 1842ರಲ್ಲಿ ಜಾನ್ ಬನ್‌ಯನ್‌ನ 'ದಿ ಪಿಲ್‌ಗ್ರಿಮ್ಸ್ ಪ್ರೋಗ್ರೇಸ್', 1857 ರಲ್ಲಿ ಡ್ಯಾನಿಯಲ್ ಡಪೋನ 'ರಾಬಿನ್‌ಸನ್ ಕ್ರೂಸೊ' ಕನ್ನಡಕ್ಕೆ ಅನುವಾದವಾದವು. ನಂತರ 1869ರಲ್ಲಿ ಮರಾಠಿಯಿಂದ ಪದಮಂಜಿಯವರ 'ಯಮುನಾ ಪರ್ಯಟನ', ಬಂಗಾಳಿಯಿಂದ 1885ರಲ್ಲಿ ಬಂಕಿಮಚಂದ್ರರ 'ದುರ್ಗೇಶನಂದಿನಿ' ಕಾದಂಬರಿಗಳು ಅನುವಾದವಾದವು. ಆದರೆ ಇವುಗಳನ್ನು ಕನ್ನಡದ ಸ್ವತಂತ್ರ ಕಾದಂಬರಿಗಳೆಂದು ಕರೆಯುವುದಿಲ್ಲ. 'ದುರ್ಗೇಶನಂದಿನಿ'ಗೆ ಬರೆದ ಇಂಗ್ಲಿಷ್ ಪೀಠಿಕೆಯಲ್ಲಿ ಬಿ.ವೆಂಕಟಾಚಾರ್ಯರು 'ನಾವೆಲ್' ಪದವನ್ನು 'ಕಾದಂಬರಿ' ಎಂಬರ್ಥದಲ್ಲಿ ಬಳಸಿದರು.

ಕನ್ನಡ ಸಾಹಿತ್ಯದಲ್ಲಿ 'ಕಾದಂಬರಿ' ಎಂಬ ಪದ ಹೊಸದೇನಲ್ಲ. 10ನೇ ಶತಮಾನದಲ್ಲಿ ಬಾಣನ ಕಾದಂಬರಿಯನ್ನು 1ನೇ ನಾಗವರ್ಮನು 'ಕರ್ನಾಟಕ ಕಾದಂಬರಿ' ಎಂದು ಬರೆದನು. ಇದನ್ನೇ ಆಧಾರವಾಗಿಟ್ಟುಕೊಂಡು 1857ರ ಸುಮಾರಿಗೆ ಶ್ರೀ ಗಂಗಾಧರ ಮಡಿವಾಳೇಶ್ವರ ತುರಮರಿಯವರು 'ಬಾಣ' ಕಾದಂಬರಿಯನ್ನು ಪ್ರಕಟಿಸಿದರು. ಇವರ ಶೈಲಿ ಹೊಸಗನ್ನಡ ಸಾಹಿತ್ಯಕ್ಕೆ ಸಮೀಪವಾಗಿದೆ. ಹಾಗೆಯೇ ಮುದ್ದಣ್ಣ 'ಗೋದಾವರಿ' ಎಂಬ ಕಾದಂಬರಿಯನ್ನು ಅರ್ಧಭಾಗದವರೆಗೆ ಬರೆದಿದ್ದನೆಂದು ಹೇಳಲಾಗುತ್ತದೆ.

"1892 ರಲ್ಲಿ ಪ್ರಕಟವಾದ ಲಕ್ಷ್ಮಣರಾವ್ ಗದಗಕರರ 'ಸೂರ್ಯಕಾಂತ' ಕನ್ನಡದ ಮೊದಲ ಸ್ವತಂತ್ರ ಕಾದಂಬರಿ ಎನ್ನಬಹುದು."[1] ಇದು ಐತಿಹಾಸಿಕ ಕಾದಂಬರಿ. "1823ರಲ್ಲಿ ರಚಿತವಾದ 'ಮುದ್ರಾಮಂಜೂಷ'ವನ್ನು ಪ್ರಥಮ ಐತಿಹಾಸಿಕ ಕಾದಂಬರಿ ಎನ್ನಬಹುದು."[2]

1897 ರಲ್ಲಿ ಪ್ರಕಟವಾದ ಎಂ.ವೆಂಕಟಕೃಷ್ಣಯ್ಯನವರ 'ಚೋರ ಗ್ರಹಣ ತಂತ್ರ' ಮೊದಲನೆಯ ಪತ್ತೇದಾರಿ ಕಾದಂಬರಿ. 1899ರಲ್ಲಿ ಬಂದಂತಹ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಕನ್ನಡದ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ. 1913ರಲ್ಲಿ ಪ್ರಕಟವಾದ ಗಳಗನಾಥರ 'ಕುಮುದಿನಿ' ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಮೊದಲ ಕಾದಂಬರಿ. 'ರೆಂಟ್ಲ ವೆಂಕಟಸುಬ್ಬರಾವ್' ಅವರಿಂದ ರಚಿತವಾದ ಮದರಾಸಿನಲ್ಲಿ 1895ರಲ್ಲಿ ಪ್ರಕಟವಾದ 'ಕೇಸರಿ ವಿಲಾಸ' ಕಾದಂಬರಿಯ ಲಕ್ಷಣಗಳನ್ನುಳ್ಳ ಕನ್ನಡದ ಪ್ರಥಮ ಸ್ವತಂತ್ರ ಕಾದಂಬರಿ ಎಂಬುದು ಗೋವಿಂದ ಪೈ ಅವರ ಅಭಿಪ್ರಾಯ.[3]

'ಇಂದಿರಾಬಾಯಿ'ಯ ನಂತರ ಸಾಹಿತ್ಯ ದೃಷ್ಟಿಯಿಂದ ಕಾದಂಬರಿ ಎನ್ನಬಹುದಾದ ಮೊಟ್ಟಮೊದಲ ಕೃತಿ 1915ರಲ್ಲಿ ಪ್ರಕಟವಾದ ಎಂ.ಎಸ್.ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ'. ವೆಂಕಟಚಾರ್ಯ, ಗಳಗನಾಥ, ಎಂ.ಎಸ್.ಪುಟ್ಟಣ್ಣ ಇವರಿಂದ ಕನ್ನಡ ಕಾದಂಬರಿ ಪ್ರಾರಂಭದಿಂದಲೇ ಕೇವಲ ಮನರಂಜನೆಯ ಸಾಧನವಾಗದೆ ಜೀವನವನ್ನು ಗಂಭೀರವಾಗಿ ಪರಿಗಣಿಸುವ ಕ್ರಿಯೆಯಾಯಿತು. 1925 ರವರೆಗೆ ಕನ್ನಡದಲ್ಲಿ ಸುಮಾರು 200 ಕಾದಂಬರಿಗಳು ಬಂದಿವೆ ಎಂದು ಹೇಳಲಾಗುತ್ತದಾದರೂ, ಇವೆಲ್ಲವನ್ನು ಅತ್ಯುತ್ತಮ ಕಾದಂಬರಿಗಳೆಂದು ಹೇಳಲಾಗುವುದಿಲ್ಲ. 20ನೇ ಶತಮಾನದ ಮೂರು ಮತ್ತು ನಾಲ್ಕನೇ ದಶಕದಿಂದ ಕನ್ನಡ ಕಾದಂಬರಿ ಕ್ಷೇತ್ರ ಹುಲುಸಾಗಿ ಬೆಳೆಯಿತು.

ಮಾನವ ಸಂಬಂಧಗಳ ಬಿರುಕುಗಳನ್ನು ಹಿಡಿದಿಡುವ ಶಕ್ತಿ ಇರುವುದು ಕಾದಂಬರಿಯಲ್ಲಿ ಸಾಮಾಜಿಕ ಬದುಕಿನ ಪ್ರತೀಕವಾಗಿ ಕಾದಂಬರಿಗಳಿವೆ. ಕನ್ನಡ ಕಾದಂಬರಿ ಪರಂಪರೆಯನ್ನು ಎರಡು ಭಾಗಗಳಾಗಿ ವಿಂಗಡಿಸುತ್ತಾರೆ.

1. ವ್ಯವಸ್ಥೆಯ ಸ್ಥಾಪಿತ ಮೌಲ್ಯಗಳನ್ನು ವೈಭವೀಕರಿಸಿತ್ತಾ ಅದ್ಭುತ ರಮ್ಯತೆಯಲ್ಲಿ ಸಾಗುವ ಪರಂಪರೆ.

---

1. ಎಲ್.ಸ್.ಶೇಷಗಿರಿರಾವ್ – ಹೊಸಗನ್ನಡ ಸಾಹಿತ್ಯ ಚರಿತ್ರೆ – ಪುಟ 143
2. ಹೆಚ್.ಉಮಾಮೂರ್ತಿ – ಕನ್ನಡದ ಐತಿಹಾಸಿಕ ಕಾದಂಬರಿಗಳು – ಪುಟ 134
3. ಪ್ರೊ. – ಕೆ.ಎನ್.ಗಂಗಾನಾಯಕ್ – ಹೊಸಗನ್ನಡ ಕಥೆಗಾರರು ಹಾಗೂ ಕಾದಂಬರಿಕಾರರು–ಪುಟ 2

2. ನೈತಿಕತೆಯ ಜೊತೆಗೆ ಸಾಮಾಜಿಕ, ರಾಜಕೀಯ, ಆರ್ಥಿಕತೆಯ ನೆಲೆಯ ಅನನ್ಯತೆಯನ್ನು ಉಳಿಸಿಕೊಂಡ ಪರಂಪರೆ.

ಕಾದಂಬರಿ ಪ್ರಕಾರವನ್ನು 'ಆಧುನಿಕ ಮಹಾಕಾವ್ಯ'ಎಂದು ಕರೆಯಲಾಗುತ್ತದೆ. 20ನೇ ಶತಮಾನವನ್ನು ಕಾದಂಬರಿ ಯುಗ ಎಂಬುದಾಗಿಯೇ ಕರೆಯುವಷ್ಟರ ಮಟ್ಟಿಗೆ ಈ ಪ್ರಕಾರ ಬೆಳೆದು ನಿಂತಿದೆ, ಬೆಳೆಯುತ್ತಿದೆ. ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರಗಳಲ್ಲೆಲ್ಲಾ ಕಾದಂಬರಿ ಮೊದಲ ಸ್ಥಾನವನ್ನು ಪಡೆದಿರುವುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಅದು ಸುಲಭವಾಗಿ ಓದು-ಬಲ್ಲವರಿಗೆ ಅರ್ಥವಾಗುವ ಆಕರ್ಷಕ ಗದ್ಯದಲ್ಲಿ ರಚಿತವಾಗಿರುವುದು. ಇದರ ವಸ್ತು ಸನ್ನಿವೇಶಗಳು ಕುತೂಹಲವನ್ನು ಕೆರಳಿಸುವಂತಿರುವುದು.

ಪಾತ್ರ ಸಂಭಾಷಣೆಗಳು ಜೀವಂತವಾಗಿದ್ದು, ಓದುಗರಿಗೆ ಆನಂದವನ್ನುಂಟು ಮಾಡುವಂತೆ ರಚನೆಗೊಂಡಿರುವುದು. ಬದುಕಿನಿಂದಲೇ ವಸ್ತುವನ್ನು ಆಯ್ದುಕೊಂಡು ಈ ಬದುಕನ್ನೇ ಚಿತ್ರಿಸುವ, ವಿಮರ್ಶಿಸುವ ಹೊಸ ಕಾಣ್ಕೆಯನ್ನು ನೀಡುವ ವಿಶೇಷ ಗುಣ ಕಾದಂಬರಿಗೆ ಇರುವುದರಿಂದ ಅದು ಅತ್ಯಂತ ಜನಪ್ರಿಯ ಪ್ರಕಾರವಾಗಿದೆ.

ಕಾದಂಬರಿಯನ್ನು ಅತ್ಯಂತ ಪ್ರಾಚೀನ ಪ್ರಕಾರಗಳಾದ ನಾಟಕ ಮತ್ತು ಮಹಾಕಾವ್ಯಗಳ ಜೊತೆ ಹೋಲಿಸಿ ವ್ಯತ್ಯಾಸಗಳನ್ನು, ಸಮಸ್ಯೆಗಳನ್ನು ಗುರುತಿಸುವ ಕೆಲಸವನ್ನು ವಿಮರ್ಶಕರು ಮಾಡಿದ್ದಾರೆ. ಸಾವಿರಾರು ವರ್ಷಗಳಲ್ಲಿ ಪ್ರಾಚೀನವಾದ ನಾಟಕ ಮತ್ತು ಮಹಾಕಾವ್ಯಗಳೆರಡನ್ನು ಇಂದು ಕಾದಂಬರಿ ತನ್ನೊಡಲಿನಲ್ಲಿ ಮೇಳೈಸಿಕೊಂಡು ಅವುಗಳ ಜನಪ್ರಿಯತೆಯನ್ನು ಹಿಂದೆ ಹಾಕಿ ಮುನ್ನುಗ್ಗುತ್ತಿರುವುದು ಸತ್ಯ ಸಂಗತಿಯಾಗಿದೆ. ಇದನ್ನು "ಕರತಲ ರಂಗಭೂಮಿ" ಎಂದು ಕರೆದಂತೆ ಕಾದಂಬರಿ "ಆಧುನಿಕ ಮಹಾಕಾವ್ಯ" ಎಂಬುದಾಗಿ ಸ್ತುತಿಸಿರುವುದುಂಟು. ಇದರ ಅರ್ಥ ಮತ್ತು ಔಚಿತ್ಯಗಳನ್ನು ಸಮಗ್ರವಾಗಿ ಕೆಳಗಿನಂತೆ ನೋಡಬಹುದು.

ಆಧುನಿಕ ಕಾಲಕ್ಕೆ ಮುನ್ನ ಜಗತ್ತಿನ ಭಾಷೆಗಳಲ್ಲೆಲ್ಲಾ ಅನೇಕ ಮಹಾಕಾವ್ಯಗಳು ರಚನೆಯಾಗಿರುವುದನ್ನು ಕಾಣುತ್ತೇವೆ. ಈ ಮಹಾಕಾವ್ಯಗಳಲ್ಲೆಲ್ಲಾ ಪದ್ಯದಲ್ಲಿ ಛಂದೋಬದ್ಧವಾಗಿ ಪ್ರೌಢಶೈಲಿಯನ್ನು ಉದಾತ್ತ ಕಥಾ ಶೈಲಿಯನ್ನು ತೆರೆದುಕೊಂದು ಬೃಹತ್ ಶಾಸ್ತ್ರದಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಆದರೆ, ಇಂದು ಜಗತ್ತಿನ ಯಾವುದೇ ಭಾಷೆಯಲ್ಲಾಗಲೀ ಬೆರಳೆಣಿಕೆಯಷ್ಟು ಮಹಾಕಾವ್ಯವು ರಚನೆಯಾಗುತ್ತಿಲ್ಲ. ಇದಕ್ಕೆ ಕರಣ ಏನೇ ಇರಲಿ ಆದರೆ, ಈ ಮಹಾಕಾವ್ಯಗಳ ಸ್ಥಾನವನ್ನು ಕಾದಂಬರಿಗಳು ಸಮರ್ಪಕವಾಗಿ ತುಂಬಿರುವುದು

ಮಾತ್ರ ಸತ್ಯ ಸಂಗತಿಯಾಗಿದೆ. ಆದೇನೆಂದರೆ, ಇಂದು ಗಾರ್ಕಿ, ಕುವೆಂಪು, ಕಾರಂತ, ಬಂಕಿಮ ಚಂದ್ರ ಚಟರ್ಜಿ ಮೊದಲಾದ ಹಲವು ಕಾದಂಬರಿಗಾರರ ವಸ್ತು ಹಳೆಯ ಮಹಾಕಾವ್ಯದ ವಸ್ತುವಿನಂತೆ ಮಹತ್ವವೂ, ಪ್ರಸ್ತುತವೂ, ಬದುಕಿಗೆ ಸಂಬಂಧಪಟ್ಟ ವಿಷಯವೂ ಆಗಿರುವುದನ್ನು ಕಾಣುತ್ತೇವೆ.

ಮಹಾಕಾವ್ಯದಲ್ಲಿ ಬರುವಂತೆ ಉದಾತ್ತ ಪಾತ್ರಗಳು ನೂರಾರು ಸಣ್ಣಪುಟ್ಟ ಪಾತ್ರಗಳು ಕಾದಂಬರಿಯಲ್ಲೂ ಬರುತ್ತವೆ.

ಮಹಾಕಾವ್ಯ ಪ್ರೌಢಶೈಲಿ ಮತ್ತು ಛಂದೋಬದ್ಧವಾಗಿ ರಚನೆಗೊಳ್ಳುತ್ತಿರುವುದರಿಂದ ಸಾಮಾನ್ಯರಿಗೆ ಅದು ನಿಲುಕದ ನಕ್ಷತ್ರವಾಗಿತ್ತು. ಆದರೆ ಮಹಾಕಾವ್ಯದ ವಸ್ತುವನ್ನೇ ತನ್ನ ಭಿತ್ತಿಯಲ್ಲಿ ಹೊಂದಿದ ಕಾದಂಬರಿಯು ಸೊಗಸಾದ ಗದ್ಯದಲ್ಲಿ ಅದನ್ನು ಚಿತ್ರಿಸುವುದರಿಂದ ಮಹಾಕಾವ್ಯಕ್ಕೆ ಇಲ್ಲದಿದ್ದ ಅನುಕೂಲ ಕಾದಂಬರಿಗೆ ಲಭ್ಯವಾಗುವುದನ್ನು ಕಾಣುತ್ತೇವೆ. ಮಹಾಕಾವ್ಯ ಬದುಕನ್ನು ಅದರ ಸಂಘರ್ಷಗಳನ್ನು ವ್ಯಕ್ತಿಯ ಒಳ ಹೊರಗನ್ನು, ಒಳಿತು ಕೆಡುಕುಗಳನ್ನು ಚಿತ್ರಿಸುತ್ತಾ ಸಾರ್ವಕಾಲೀಕ ಮೌಲ್ಯವನ್ನು ಹೇಳುತ್ತಿದ್ದಂತೆ ಇಂದು ಕಾದಂಬರಿಯು ಅದೇ ಕೆಲಸವನ್ನು ಗದ್ಯದ ರೂಪದಲ್ಲಿ ಅದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಮಾಡುತ್ತಿರುವುದನ್ನು ಕಾಣುತ್ತೇವೆ.

ವಾಲ್ಮೀಕಿಯ 'ರಾಮಾಯಣ', ಪಂಪನ 'ಮಹಾಭಾರತ', ಹೋಮರನ 'ಇಲಿಯಡ್', ಡಾಂಟೇಯ 'ಡಿವೈನ್ ಆಫ್ ಕಾಮಿಡಿ' ಮೊದಾಲಾದವು ಮಹಾಕಾವ್ಯಗಳಾದರೆ, ಇವುಗಳಿಗಿಂತ ಆಧುನಿಕ ಕಾಲದಲ್ಲಿ ರಚನೆಗೊಂಡಿರುವ 'ಟಾಲ್‌ಸ್ಟಾಯ್' ಯವರ 'ಯುದ್ಧ ಮತ್ತು ಶಾಂತಿ', 'ಪುನರುತ್ಥಾನ', ಗಾರ್ಗಿಯ 'ತಾಯಿ', ದಾಸ್ತೋವೆಸ್ಕಿಯ 'ಅಪರಾಧ ಮತ್ತು ಶಿಕ್ಷೆ', ಕುವೆಂಪುರವರ 'ಮಲೆಗಳಲ್ಲಿ ಮದುಮಗಳು', ಕಾರಂತರ 'ಮರಳಿ ಮಣ್ಣಿಗೆ', ಇವೇ ಮೊದಲಾದ ಕಾದಂಬರಿಗಳು ಯಾವ ಹಿನ್ನೆಲೆಯಿಂದ ನೋಡಿದರು ವಸ್ತುವಲ್ಲಾಗಲೀ, ಸನ್ನಿವೇಶ ಚಿತ್ರಣದಲ್ಲಾಗಲೀ, ಪಾತ್ರ ಸಂಭಾಷಣೆಯ ನಿರೂಪಣೆಯಲ್ಲಾಗಲೀ, ಜೀವನ ದರ್ಶನದಲ್ಲಾಗಲೀ ಕಡಿಮೆಯಾದವಲ್ಲ ಎಂದು ಖಚಿತವಾಗಿ ಹೇಳಬಹುದಾಗಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಕಾದಂಬರಿಯನ್ನು ಆಧುನಿಕ ಮಹಾಕಾವ್ಯವೆಂದು ಕರೆದಿರುವುದು ಸರಿ ಎನ್ನಿಸುತ್ತದೆ.

1928ರಲ್ಲಿ ಮಾಸ್ತಿಯವರು 'ಸುಬ್ಬಣ್ಣ' ಕಾದಂಬರಿಯನ್ನು ರಚಿಸಿದರು. ನವೋದಯ ಕಾಲದಲ್ಲಿ ಕನ್ನಡ ಕಾದಂಬರಿ ಪ್ರಕಾರದಲ್ಲಿ ಮಹತ್ವದ ರಚನೆ ಮಾಡಿದವರು ಶಿವರಾಮ ಕಾರಂತರು.

ಇವರು 34 ಕಾದಂಬರಿಗಳನ್ನು ರಚಿಸಿದ್ದಾರೆ. 1924ರಲ್ಲಿ ಪ್ರಕಟವಾದ 'ವಿಚಿತ್ರ ಕೂಟ' ಇವರ ಮೊದಲ ಕಾದಂಬರಿ. 1925ರಲ್ಲಿ 'ಭೂತ' ಪ್ರಕಟವಾಯಿತು. ಇವೆರಡೂ ಪತ್ತೇದಾರಿ ಕಾದಂಬರಿಗಳು "ನಿರ್ಭಾಗ್ಯ ಜನ್ಮ, ಸೂಳೆಯ ಸಂಸಾರ" ಕಾದಂಬರಿಗಳಲ್ಲಿ ಸಮಾಜದಲ್ಲಿನ ದಾರುಣ ಜೀವನದ ಚಿತ್ರಣವಿದೆ. 'ಮುಗಿಯದ ಯುದ್ಧ, ಬೆಟ್ಟದ ಜೀವ, ಕುಡಿಯರ ಕೂಸು, ಸ್ವಪ್ನದ ಹೊಳೆ, ಮೊಗ ಪಡೆದ ಮನ, ಇಳೆ, ಒಂಟಿದನಿ, ಅಳಿದ ಮೇಲೆ, ದೇವದೂತರು, ಕನ್ಯಾಬಲಿ, ಚೋಮನದುಡಿ, ಮರಳಿ ಮಣ್ಣಿಗೆ, 'ಮೂಕಜ್ಜಿಯ ಕನಸುಗಳು', ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ಪಡೆದರು.

ನವೋದಯ ಕಾಲದ ಮಹತ್ವದ ಎರಡು ಕಾದಂಬರಿಗಳೆಂದರೆ ಕುವೆಂಪು ರವರ 'ಕಾನೂರು ಹೆಗ್ಗಡತಿ' (1936), ಮತ್ತು 'ಮಲೆಗಳಲ್ಲಿ ಮದುಮಗಳು'(1966).

ಮಾಸ್ತಿ, ಶ್ರೀರಂಗ, ಕಾರಂತ, ಕುವೆಂಪು, ರಂ.ಶ್ರೀ.ಮುಗಳಿ, ರಾವ್‌ಬಹದ್ದೂರ್ ಮುಂತಾದವರು ನವೋದಯ ಕಾಲದ ಪ್ರಮುಖ ಕಾದಂಬರಿಕಾರರಾಗಿದ್ದು, ಸಾಮಾಜಿಕ ಜೀವನವನ್ನು ವಸ್ತುವಾಗಿರಿಸಿಕೊಂಡಿದ್ದರಿಂದ ಇವರ ಕಾದಂಬರಿಗಳು ಹೆಚ್ಚು ಗಮನಾರ್ಹವಾಗಿವೆ.

ನವೋದಯ ಕಾದಂಬರಿಕಾರರ ಜೊತೆಜೊತೆಗೆ ಪ್ರಗತಿಶೀಲರು ಕಾದಂಬರಿಗಳನ್ನು ರಚಿಸಿದರು. 1945ರ ನಂತರದ ಸುಮಾರು 8 ವರ್ಷಗಳ ಕಾಲಘಟ್ಟವನ್ನು 'ಪ್ರಗತಿಶೀಲ' ಎಂದು ಕರೆಯಲಾಗುತ್ತದೆ. ಪ್ರಗತಿಶೀಲರು ತಮ್ಮ ಬರಹವನ್ನು ಕಾದಂಬರಿಗಳ ಮೂಲಕವೇ ಆರಂಭಿಸಿದರು. ಈ ಕಾಲದ ಪ್ರಮುಖ ಬರಹಗಾರರೆಂದರೆ ಅ.ನ.ಕೃಷ್ಣರಾಯರು. ಇವರ 'ಜೀವನಯಾತ್ರೆ' ಮೊದಲ್ಗೊಂಡಂತೆ 112 ಕಾದಂಬರಿಗಳನ್ನು ರಚಿಸಿದ್ದಾರೆ."ಜೀವನದ ಯಾವ ಅನುಭವವನ್ನೇ ಆಗಲಿ ವೈಲಿಗೆ ಎಂದು ಅಶ್ಲೀಲ ಎಂದು ಸಾಹಿತ್ಯದಿಂದ ಹೊರಗಿಡಬಾರದೆನ್ನುತ್ತಾರೆ ಅ.ನ.ಕೃ."[4] "ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು, ಅಪರಂಜಿ" ಮೊದಲಾದವು ಅ.ನ.ಕೃ ಅವರ ಪ್ರಮುಖ ಕಾದಂಬರಿಗಳಾಗಿವೆ.

ಕಾರಂತರ "ದೇವದೂತರು, ಚೋವನದುಡಿ, ಸರಸಮ್ಮನ ಸಮಾಧಿ," ಪ್ರಗತಿಶೀಲ ಕಾದಂಬರಿಗಳೇ ಆಗಿವೆ. ತ.ರಾ.ಸು ಅವರ "ಹಂಸಗೀತೆ, ಬಿಡುಗಡೆಯ ಬೇಡಿ". ಬಸವರಾಜ ಕಟ್ಟೀಮನಿ ಅವರ "ಮೋಹದ ಬಲೆಯಲಿ, ಜರತಾರಿ ಜಗದ್ಗುರು, ಜ್ವಾಲಾಮುಖಿಯ ಮೇಲೆ, ಮಾಡಿ ಮಡಿದವರು," ನಿರಂಜನರ 'ಚಿರಸ್ಮರಣೆ', ಚದುರಂಗರ 'ಸರ್ವಮಂಗಳ, ಉಯ್ಯಾಲೆ, ವೈಶಾಖಿ, ಅಣ್ಣಾರಾಯರ 'ರಾಷ್ಟ್ರ ಪುರುಷ, ಅಶೋಕ ಚಕ್ರ, ಶ್ರೇಯಾಂಸ', ಅರ್ಚಕ ವೆಂಕಟೇಶರ 'ಅಸ್ಥಿಪಂಜರ' ಕಾದಂಬರಿಗಳು ಪ್ರಮುಖವಾಗಿವೆ.

---

4. ಎಲ್.ಎಸ್.ಶೇಷಗಿರಿರಾವ್ – ಹೊಸಗನ್ನಡ ಸಾಹಿತ್ಯ ಚರಿತ್ರೆ – ಪುಟ 157

ಎಸ್.ಎಲ್.ಭೈರಪ್ಪನವರು ಕಾದಂಬರಿ ಪ್ರಕಾರದಲ್ಲಿ ತಮ್ಮದೇಯಾದ ಛಾಪು ಮೂಡಿಸಿದ್ದಾರೆ. ಇವರ 'ದಾಟು' ಕಾದಂಬರಿ ಪ್ರಮುಖವಾದುದು. ಇವರ 'ಧರ್ಮಶ್ರೀ' ಕಾದಂಬರಿಯಿಂದ 'ಮಂದ್ರಾ' ಕಾದಂಬರಿಯವರೆಗೆ ಬಹುತೇಕ ಕಾದಂಬರಿಗಳು ಚರ್ಚೆಗೆ ಗ್ರಾಸವಾಗಿವೆ. ಇದೇ ಸಂದರ್ಭದಲ್ಲಿ ಪ್ರಸಿದ್ಧ ಕಾದಂಬರಿಕಾರ್ತಿ ತ್ರಿವೇಣಿಯವರ 'ಅಪಸ್ವರ, ಬೆಕ್ಕಿನ ಕಣ್ಣು, ದೂರದಬೆಟ್ಟ, ಶರಪಂಜರ, ಹೂವುಹಣ್ಣು, ಕಂಕಣ, ಬೆಳ್ಳಿಮೋಡ, ಹೃದಯಗೀತೆ, ಯಂತಹ ಕಾದಂಬರಿಗಳನ್ನು ರಚಿಸಿದರು. ಇವರ ಅನೇಕ ಕಾದಂಬರಿಗಳು ಚಲನಚಿತ್ರವಾಗಿ ಪ್ರೇಕ್ಷಕರನ್ನು ರಂಜಿಸಿವೆ.

ಪ್ರಗತಿಶೀಲರ ಜೊತೆಜೊತೆಗೆ ಬಂದ ಮತ್ತೊಂದು ಸಾಹಿತ್ಯ ಮಾರ್ಗ ನವ್ಯತೆ. ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ'ಯಿಂದಲೇ ನವ್ಯ ಕಾದಂಬರಿಯ ಉಗಮವನ್ನು ಗುರುತಿಸಲಾಗುತ್ತದೆ. ಹಾಗೆಯೇ "ಶಾಂತಿನಾಥ ದೇಸಾಯಿಯವರ 'ಮುಕ್ತಿ'ಯನ್ನು ಮೊದಲ ನವ್ಯ ಕಾದಂಬರಿ ಎಂದು ಹೇಳಲಾಗುತ್ತದೆ."[5]

ಕೆ.ವಿ.ಅಯ್ಯರ್ ಅವರ 'ರೂಪದರ್ಶಿ', 1956ರಲ್ಲಿ ಪ್ರಕಟವಾದ ಶಂಕರ ಮೊಕಶಿ ಪುಣೇಕರರ, 'ಗಂಗವ್ವ ಮತ್ತು ಗಂಗಾಮಾಯಿ', ಯಶವಂತ ಚಿತ್ತಾಲರ 'ಮೂರು ದಾರಿಗಳು, ಶಿಕಾರಿ, ಛೇದ', ಪಿ.ಲಂಕೇಶರ 'ಬಿರುಕು', ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ, ಭಾರತೀಪುರ', ಎ.ಕೆ.ರಾಮಾನುಜನ್ ಅವರ 'ಹಳದಿ ಮೀನು' ಮುಗಿಯದ ಕಥೆ, ನಾಲ್ಕನೆಯ ಆಯಾಮ', ತೇಜಸ್ವಿಯವರ 'ಸ್ವರೂಪ, ಕಾರ್ವಾಲೊ, ನಿಗೂಢ ಮನುಷ್ಯರು', ಶ್ರೀಕೃಷ್ಣ ಆಲನಹಳ್ಳಿಯವರ 'ಕಾಡು, ಪರಸಂಗದ ಗೆಂಡೆತಿಮ್ಮ', ಬಿ.ವೈಕುಂಠರಾಜು ಅವರ 'ಅಂತ್ಯ ಮತ್ತು ಆಕ್ರಮಣ', ಗೋಕಾಕರ 'ಸಮರಸವೇ ಜೀವನ', ಚಂದ್ರಶೇಖರ ಕಂಬಾರರ 'ಶಿಖರಸೂರ್ಯ' ಮುಂತಾದ ಅದ್ಭುತ ಕಾದಂಬರಿಗಳು ನವ್ಯ ಕಾಲಘಟ್ಟದಲ್ಲಿ ರಚನೆಯಾಗಿವೆ.

1920–1945ರ ಅವಧಿಯಲ್ಲಿ ಸುಮಾರು 80 ಕಾದಂಬರಿಗಳು ಪ್ರಕಟವಾದವೆಂದು ರಂ.ಶ್ರೀ.ಮುಗಳಿ ಹೇಳಿದ್ದಾರೆ. 1956–1965ರ ಅವಧಿಯಲ್ಲಿ 500ಕ್ಕೂ ಹೆಚ್ಚು ಕಾದಂಬರಿಗಳು ಪ್ರಕಟವಾದವು. "1973ರ 'ಸಾಹಿತ್ಯ ವಾರ್ಷಿಕ' 97 ಸ್ವತಂತ್ರ ಕಾದಂಬರಿಗಳನ್ನು ಪಟ್ಟಿ ಮಾಡಿದೆ".[6]

ಬಂಡಾಯ ಸಾಹಿತ್ಯವನ್ನು ಹುಟ್ಟು ಹಾಕಿದ ಬರಗೂರು ರಾಮಚಂದ್ರಪ್ಪ ಅವರ 'ನೆತ್ತರಲ್ಲಿ ನೆಂದ ಹೂವು, ಕಪ್ಪು ನೆಲದ ಕೆಂಪು ಕಾಲು, ಸೂರ್ಯ', ಕಾದಂಬರಿಗಳು ಮಹತ್ವದ್ದಾಗಿವೆ.

---

5. ಎಲ್.ಎಸ್.ಶೇಷಗಿರಿರಾವ್ – ಹೊಸಗನ್ನಡ ಸಾಹಿತ್ಯ ಚರಿತ್ರೆ – ಪುಟ 167
6. ಎಲ್.ಎಸ್.ಶೇಷಗಿರಿರಾವ್ – ಹೊಸಗನ್ನಡ ಸಾಹಿತ್ಯ ಚರಿತ್ರೆ – ಪುಟ 179

ದಲಿತರ ಧನಿಯಾಗಿ ನಿಂತಂತಹ ದೇವನೂರು ಮಹಾದೇವ ಅವರ 'ಒಡಲಾಳ, ಕುಸುಮಬಾಲೆ', ಕಾದಂಬರಿಗಳು ವಿಭಿನ್ನ ಕಥಾ ಹಂದರವನ್ನು ಭಾಷಾ ವೈಶಿಷ್ಟವನ್ನು ಹೊಂದಿದೆ.

ಕುಂ.ವೀರಭದ್ರಪ್ಪ ಅವರ 'ಕಪ್ಪು, ಬೇಲಿ ಮತ್ತು ಹೊಲ, ಬೇಲಿಯ ಹೂಗಳು, ಬೇಟೆ, ಪ್ರತಿಧ್ವನಿ, ಕೆಂಡದಮಳೆ', ಮ.ನ.ಜವರಯ್ಯ ಅವರ 'ಮಾಗಿ', ಬಿ.ಟಿ.ಲಲಿತಾನಾಯಕ್ ಅವರ 'ಗತಿ', ಫಕೀರ ಮಹಮ್ಮದ್ ಕಪ್ಪಾಡಿ ಅವರ 'ಸರಕುಗಳು' ಮುಖ್ಯವಾದ ಕಾದಂಬರಿಗಳಾಗಿವೆ.

ಬಂಡಾಯ ಸಾಹಿತ್ಯ ಮುಖ್ಯವಾಗಿ ಸಂವೇದನೆಗಳನ್ನು ಹುಟ್ಟು ಹಾಕಿದೆ. ಹೀಗಾಗಿ ದಲಿತ, ಸ್ತ್ರೀ, ಮುಸ್ಲಿಂ ಸಂವೇದನೆಗಳನ್ನೊಳಗೊಂಡ ಕಾದಂಬರಿಗಳು ರಚನೆಯಾಗಿವೆ. ಈ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ರಾಮಣ್ಣ, ಬರಗೂರು ರಾಮಚಂದ್ರಪ್ಪ, ಚೆನ್ನಣ್ಣವಾಲೀಕಾರ, ದೇವನೂರು ಮಹಾದೇವ, ಸಾರಾ ಅಬೂಬಕರ್, ಅರವಿಂದ ಮಾಲಗತ್ತಿ, ಮುಳ್ಳೂರು ನಾಗರಾಜ ಮುಂತಾದವರ ಕೃತಿಗಳು ಗಮನಾರ್ಹವಾಗಿವೆ. ದಲಿತ-ಬಂಡಾಯ ಸಾಹಿತ್ಯ ಮುಖ್ಯವಾಗಿ ಬದುಕಿನ ಅಸಮಾನತೆಗಳಾದ ಜಾತಿ, ಅಸ್ಪೃಶ್ಯತೆ, ಧರ್ಮ, ಪ್ರಭುತ್ವ, ಲಿಂಗಭೇದ ಮುಂತಾದವುಗಳನ್ನು ಕುರಿತು ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿತು.

ಸ್ತ್ರೀ ಮತ್ತು ಮುಸ್ಲಿಂ ಸಂವೇದನೆಗಳನ್ನು ಕೇಂದ್ರವಾಗಿರಿಸಿಕೊಂಡು ಸಾ.ರಾ ಅಬೂಬಕರ್ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ 'ಚಂದ್ರಗಿರಿಯ ತೀರದಲ್ಲಿ, ಸಹನಾ, ಚಪ್ಪಲಿಗಳು, ತಳಹೊಡೆದ ದೋಣಿಯಲಿ', ಕಾದಂಬರಿಗಳು ಸಾಹಿತ್ಯ ಲೋಕಕ್ಕೆ ಉತ್ತಮ ಕೊಡುಗೆಯಾಗಿವೆ.

1908ರಲ್ಲಿ ಪ್ರಕಟವಾದ ತಿರುಮಲಾಂಬ ಅವರ 'ಸುಶೀಲೆ' ಕಾದಂಬರಿಯಿಂದ ಮೊದಲ್ಗೊಂಡು ಅನೇಕ ಮಹಿಳಾ ಲೇಖಕಿಯರು ರಚಿಸಿದ ಕಾದಂಬರಿಗಳು ಪ್ರಕಟವಾಗಿವೆ. ಹೆಚ್.ವಿ.ಸಾವಿತ್ರಮ್ಮ, ವಾಣಿ, ಎಂ.ಕೆ.ಇಂದಿರಾ, ತ್ರಿವೇಣಿ, ಅನುಪಮಾ ನಿರಂಜನ, ಪದ್ಮಾಶೆಣೈ, ಲಲಿತಾಂಬಾ ಚಂದ್ರಶೇಖರ್, ಪ್ರೇಮಾಭಟ್, ಜಿ.ನ.ಮಂಗಳ, ಅನಸೂಯ ರಾಮರೆಡ್ಡಿ, ಗೀತಾ ಕುಲಕರ್ಣಿ, ಎ.ಪಂಕಜ, ನಳಿನಿಮೂರ್ತಿ, ಕೆ.ಆರ್.ಪದ್ಮಜ, ಪುಷ್ಪ, ಮುಂತಾದವರು ಪ್ರಮುಖರಾಗಿದ್ದು, ಅನೇಕ ಕೃತಿಗಳನ್ನು ರಚಿಸಿದ್ದಾರೆ.

ತಿರುಮಲಾಂಬ ಅವರ 'ಪ್ರಿಯಂವದಾ, ನಿರ್ಭಾಗ್ಯವನಿತೆ, ಸುಖಲತಾ' ಕಾದಂಬರಿಗಳು ಸ್ವಾತಂತ್ರ್ಯ ಪೂರ್ವದಲ್ಲಿ ರಚನೆಯಾದವು. 50ರ ದಶಕದ ಮತ್ತು ಅದರ ನಂತರದಲ್ಲಿ ಮಹಿಳಾ ಸಾಹಿತ್ಯ ಹೆಚ್ಚು ಸಂವೃದ್ಧವಾಯಿತು. ಈ ನಿಟ್ಟಿನಲ್ಲಿ ಹೆಚ್.ವಿ.ಸಾವಿತ್ರಮ್ಮ ಅವರ 'ನಿರಾಶ್ರಿತೆ, ಮರುಮದುವೆ, ಸರಿದ ಬೆರಳು, ಲಕ್ಷ್ಮೀ, ಪ್ರತೀಕ್ಷೆ, ಮದುವಣಗಿತ್ತಿ, ವಿಮುಕ್ತ' ಪ್ರಮುಖವಾಗಿವೆ.

ಹಾಗೆಯೇ ಜಯಲಕ್ಷ್ಮಿ ಶ್ರೀನಿವಾಸ ಅವರ 'ಪುಷ್ಪಹಾರ, ಪರಿಣಯ', ಎಂ.ಕೆ.ಜಯಲಕ್ಷ್ಮಿ ಅವರ 'ಕನಸಿನ ತಡೆ, ಸಂಸಾರದಲ್ಲಿ ಸಮರ, ಮೋಡ ಚದುರಿತು ಬಾಳು ಬೆಳಗಿತು', ಎಂ.ಕೆ.ಇಂದಿರಾ ಅವರ 'ತುಂಗಭದ್ರ, ಗೆಜ್ಜೆಪೂಜೆ, ಫಣಿಯಮ್ಮ', ವಾಣಿ ಅವರ 'ಬಿಡುಗಡೆ, ಅರ್ಪಣೆ, ಎರಡು ಕನಸು, ಮನೆಮಗಳು, ಚಿನ್ನದ ಪಂಜರ, ಅವಳ ಭಾಗ್ಯ, ಕಾವೇರಿಯ ಮಡಿಲಲ್ಲಿ, ಅಂಜಲಿ, ಹೊಸಬೆಳಕು, ಬಾಳೆಯ ನೆರಳು', ಪದ್ಮಾಶೆಣೈ ಅವರ 'ಸುಧಾ, ಸಂಧಿಕಾಲ, ಹರಿದ ಗಾಳಿಪಟ, ಅನಿಶ್ಚಿತ', ಲಲಿತಾಂಬಾ ಚಂದ್ರಶೇಖರ್ ಅವರ 'ರೇಖಾ ಭಾಗ-1 ಮತ್ತು ಭಾಗ-2, ಮುಕುಂದಚಂದ್ರ, ಸರಸ್ವತಿ ಸಂಹಾರ, ಪುನರ್ದತ್ತಾ ಸ್ವೀಕಾರ', ಆರ್ಯಾಂಬ ಪಟ್ಟಾಭಿಅವರ 'ಹೊಂಗನಸು, ಆರಾಧನೆ, ಸವತಿಯ ನೆರಳು, ಕಪ್ಪು-ಬಿಳುಪು, ನರಭಕ್ಷಕ, ಮರಳಿಗೂಡಿಗೆ, ಅಮರಪ್ರೇಮ', ಇಂದಿರಾ.ಹೆಚ್.ಆರ್ ಅವರ 'ಬಯಕೆಯ ಬಳ್ಳಿ, ಮರಳಿ ಹಳ್ಳಿಗೆ, ಲಕ್ಷ್ಮೀಕಟಾಕ್ಷ, ಕಲಾರತ್ನ, ಅಪಿತಕಿರಣ', ಎ.ಪಂಕಜ ಅವರ 'ನಾದಭಂಗ', ನೀಲಾದೇವಿಯವರ 'ಜೇಡಿ ಬಂದವಳು, ಬೇರಿನಿಂದ ಫಲಕ್ಕೆ, ಮೂಕರಾಗ, ಅನುರಾಧ, ಹೊಸಿಲು', ಮುಂತದ ಕಾದಂಬರಿಗಳು ಗಮನಾರ್ಹವಾಗಿವೆ.

'ಸಿಂಗಾರೆವ್ವ ಮತ್ತು ಅರಮನೆ, ವೈಶಾಖ, ಅಕ್ಕ, ನೆಲೆ-ಬೆಲೆ, ತಾಳಿದವರು, ಮುಂಜಾವು, ಘೋಷ, ಮುಕ್ತಿಚಿತ್ರ', ಮುಂತಾದ ಕಾದಂಬರಿಗಳು ಶೋಷಿತರ ಬದುಕಿನ ಚಿತ್ರಣವನ್ನು ನೀಡುತ್ತವೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಚಲನಗಳನ್ನು ಕಾದಂಬರಿಗಳು ಕಲಾತ್ಮಕವಾಗಿ ಅಭಿವ್ಯಕ್ತಿಸುತ್ತವೆ.

ಕನ್ನಡದಲ್ಲಿ ಪತ್ತೇದಾರಿ ಕಾದಂಬರಿಗಳು ವಿಪುಲವಾಗಿವೆ. ಬಿ.ಕೆ.ಸುಂದರರಾಜ ಅವರ 'ವಿಶ್ವಾಸ ಘಾತಕಿ, ಹುತ್ತದಲ್ಲಿನ ಹಾವು, ಬೆಂಕಿಯ ಪಂಜರ, ಪಾರ್ಸಿ ಹುಡುಗಿ, ಸ್ವಾರ್ಥಿಯ ದೌರ್ಜನ್ಯ, ಅಪರಾಧಿಯ ಹಂಬಲ', ಜಿಂದೆ ನಂಜುಂಡಸ್ವಾಮಿ ಅವರ 'ಜಂಟಿ ಪ್ರೇಯಸಿ, ಚಾಣುಕ್ಯರ ಸಂಘ, ರಕ್ತದಾಹದ ರಣಹದ್ದು, ನಾನೇ ಕೊಲೆಗಾರ, ಓಡಿಹೋದ ಗೂಢಚಾರ', ಎಂ.ಶಿವಾಜಿರಾವ್ ಅವರ 'ಟ್ರಂಕ್‌ಕಾಲ್, ಆಕ್ಟೋಪಸ್, ಅಪರಾಧಿಯಾರು, ದ್ವೀಪ', ಪುಲಿಕೇಶಿ ಅವರ 'ಕಣ್ಮರೆಯಾದ ಕಾಮಿನಿ, ರಹಸ್ಯ ಲಕ್ಷ್ಮಿ, ಸುಂದರಿಯ ಕೊಲೆ, ನಗರದಲ್ಲಿ ಗೂಢಚಾರಿ', ಶೇಷಾಚಲ ಅವರ 'ಭಯಂಕರ ಸ್ತ್ರೀ, ಯೌವನದ ರಕ್ತ, ಭಯಾನಕ', ಕೆ.ಆರ್.ಪದ್ಮಜೆ ಅವರ 'ರಕ್ತದ ಅರಮನೆ, ವಜ್ರದ ಹಿಡಿ', ರಮೇಶ್ ಅವರ 'ಕೊಂದವರು ಯಾರು, ಕುಟಿಲ ಕಾರಾಸ್ಥಾನ, ಬ್ಲ್ಯಾಕ್‌ಕ್ಯಾಟ್, ಚೋರ ಶಿಖಾಮಣಿ, ಕಳ್ಳರ ಕೈಚಳಕ', ನವಗಿರಿನಂದರ 'ಹಂತಕರು ಯಾರು, ಕಾಲಾಬಝಾರ, ಖಾಕೀ ಕೊಲೆಗಾರ', ವಿಜಯಾ ಸುಧಾಕರ್ ಅವರ 'ಮಾಯವಾದ ಹೆಣಗಳು, ಗೂಢಚಾರ-696, ಸುಂದರಿಯ ರಹಸ್ಯ, ಕಾಡುಬೆಕ್ಕು, ಅಬಲೆಗೆ ಬಂದ ಆಪತ್ತು', ಸಂಜೀವ

ಮೂರ್ತಿ ಅವರ 'ಲವ್ ಫೇಮ್, ಸೇಡಿನ ಕಿಡಿ, ದರೋಡೆಯ ರಾಣಿ, ಜಂಗಲ್ ಗರ್ಲ್', ಬಿ.ಪಿ.ಅನಂತರಾಮ್ ಅವರ 'ಅಪಾಯಕ್ಕೆ ಅಂಜಬೇಡ, ಏಟಿಗೆ ಎದಿರೇಟು, ಡೆತ್ ವಾರೆಂಟ್, ಸಂಚು', ಕಾಕೋಳು ರಾಮಯ್ಯನವರ 'ರಹಸ್ಯದ್ವೀಪ, ಸೇಡಿನ ಸರ್ಪ, ಮಾಯವಾದ ವಿಜ್ಞಾನಿ, ಕ್ಯಾತ್ಸಂದ್ರ ಚಂದ್ರಶೇಖರ್ ಅವರ 'ಅರ್ಧರಾತ್ರಿ ಅಪಾಯ, ಚಾಣಕ್ಯರ ತಂತ್ರ, ಅಪಾಯದ ಅಡಿಯಲ್ಲಿ ಗೂಢಚಾರ, ತೆರೆಯ ಮರೆಯಲ್ಲಿ, ಪ್ರೇತದ ಹಿಂದೆ ಮೃತ್ಯು' ಮುಂತಾದವು ಪ್ರಮುಖ ಪತ್ತೇದಾರಿ ಕಾದಂಬರಿಗಳಾಗಿವೆ.

ಹೀಗೆ ಕನ್ನಡ ಸಾಹಿತ್ಯ ಸಾಗರದಲ್ಲಿ ಕಾದಂಬರಿಗಳೆಂಬ ಅನರ್ಘ್ಯ ಮುತ್ತು ರತ್ನಗಳು ಸಾವಿರಾರು ಸಂಖ್ಯೆಯಲ್ಲಿಯೇ ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ಪತ್ತೇದಾರಿ, ರಾಜಕೀಯ, ಸ್ತ್ರೀನಿಷ್ಠ ಕಾದಂಬರಿಗಳು ಸೇರಿದಂತೆ ಹಲವು ವಿಧಗಳಿವೆ. ಈ ವಿಧಗಳಲ್ಲಿಯೇ ಅನೇಕ ಲೇಖಕ, ಲೇಖಕಿಯರು ತಮ್ಮ ವಿಶಿಷ್ಟ ಶೈಲಿಯ ಬರವಣಿಗೆ, ನಿರೂಪಣೆ, ತಂತ್ರಗಳ ಮೂಲಕ ಕಾದಂಬರಿಗಳನ್ನು ರಚಿಸಿ, ಕನ್ನಡ ಸಾಹಿತ್ಯದ ಗದ್ಯ ಪರಂಪರೆಗೆ ವಿಶಿಷ್ಟವಾದ ಕಾಣಿಕೆ ಸಲ್ಲಿಸಿದ್ದಾರೆ.

ಸಮಾಜದ ನಾನಾ ವಿಚಾರಗಳನ್ನು ಕಾದಂಬರಿಗಳು ದಾಖಲಿಸುತ್ತವೆ. ಅನೇಕ ಮೌಲ್ಯಯುತ ಮತ್ತು ಜನಪರ ನಿಲುವುಗಳನ್ನು ಸಮಾಜದ ಹಲವಾರು ಅನಿಷ್ಟ ಪದ್ಧತಿಗಳಾದ ಸ್ತ್ರೀಶೋಷಣೆ, ವರದಕ್ಷಿಣೆ, ಜಾತಿ ಪದ್ಧತಿ, ಕಾರ್ಮಿಕ ಶೋಷಣೆ, ಬಡವರ ಮೇಲಿನ ಶ್ರೀಮಂತರ ದಬ್ಬಾಳಿಕೆ ಮೊದಲಾದ ಅಂಶಗಳನ್ನು ವಸ್ತುವನ್ನಾಗಿಸಿಕೊಂಡು ಹೊರಬಂದಂತಹ ಕಾದಂಬರಿಗಳು ನೊಂದವರ ಧನಿಯಾಗಿ ನಿಂತವುಗಳಾಗಿವೆ.

ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳ ಜೊತೆಗೆ ಆಂಗ್ಲ ಹಾಗೂ ಬೇರೆ ಭಾಷೆಗಳ ಉತ್ತಮ ಕಾದಂಬರಿಗಳು ಕನ್ನಡಕ್ಕೆ ಅನುವಾದವಾಗಿವೆ. ಹಾಗಾಗಿ ಆ ಮೂಲಕ ಕಾದಂಬರಿಕಾರರು ಓದುಗರಲ್ಲಿ ವಿಭಿನ್ನ ಅಭಿರುಚಿಯನ್ನು ಹುಟ್ಟುಹಾಕಲು ಪ್ರಯತ್ನಿಸಿದ್ದು ಇಂದಿಗೂ ಆ ಕಾರ್ಯ ಮುಂದುವರೆಯುತ್ತಿದೆ. ಹೀಗಾಗಿ ಪಾಶ್ಚಾತ್ಯ ಹಾಗೂ ಇತರ ದೇಸೀ ಕಾದಂಬರಿಗಳ ಪರಿಚಯವನ್ನು ಸಾಹಿತ್ಯಾಸಕ್ತರು ಪಡೆಯುತ್ತಿದ್ದಾರೆ. ಯಂಡಮೂರಿ ವೀರೇಂದ್ರನಾಥ್ ಅವರ 'ವಂಶಿ' ಕಾದಂಬರಿ ಅನುವಾದದೊಂದಿಗೆ 'ಬೆಳದಿಂಗಳ ಬಾಲೆ'ಯಾಗಿ ಕನ್ನಡಕ್ಕೆ ಬಂದುದಲ್ಲದೇ ಸುನೀಲ್ ದೇಸಾಯಿ ಅವರ ನಿರ್ದೇಶನದಲ್ಲಿ ಅದೇ ಹೆಸರಿನಲ್ಲಿ ಚಲನಚಿತ್ರವಾಗಿ ಯಶಸ್ಸು ಕಂಡಿತು.

ಹಾಗೆಯೇ ಪಾಲೋ ಕೊಯೆಲ್ಹೋ ಅವರ 'ದ ಆಲ್ ಕೆಮಿಸ್ಟ್' ಕಾದಂಬರಿಯನ್ನು ಕಿರಣ್ ಕುಮಾರ್ ಟಿ.ಪಿ. ಕನ್ನಡಕ್ಕೆ ಅನುವಾದಿಸಿದರೆ, ಪೂರ್ಣಚಂದ್ರ ತೇಜಸ್ವಿ ಅವರು ಸ್ಲಾವೋಮಿರ್

ರಾಪಿಸ್ ಅವರ 'ದ ಲಾಂಗ್ ವಾಕ್' ಕೃತಿಯನ್ನು "ಮಹಾಪಲಾಯನ" ಕಾದಂಬರಿಯನ್ನಾಗಿ ಅನುವಾದಿಸಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಕಾದಂಬರಿ ಅತ್ಯಂತ ಸ್ವತಂತ್ರವಾದ ಸ್ವಚ್ಛಂದವಾದ ಸಾಹಿತ್ಯ ಪ್ರಕಾರ ಇಂತಹ ಕಾದಂಬರಿಯನ್ನು ರಾಷ್ಟ್ರಕವಿ ಕುವೆಂಪು "ಕರತಲ ರಂಗಭೂಮಿ" ಎಂದು ಕರೆದಿರುವುದು ಔಚಿತ್ಯ ಪೂರ್ಣವಾಗಿದೆ. ಕಾದಂಬರಿ ಎಂಬುದು ಘಟನೆಗಳು ಮತ್ತು ಕ್ರಿಯೆಗಳನ್ನು ಅನುಭವಿಸಿ ಮಾಡಿದ ಸಂಗತಿಗಳು ಇವು ಜನಜೀವನದಲ್ಲಿ ಮೊದಲು ಕಾಣಿಸಿಕೊಂಡು ಕಾದಂಬರಿಯ ಪಾತ್ರಗಳಾಗುತ್ತವೆ. ಕಾದಂಬರಿಗಳಲ್ಲಿ ಪಾತ್ರಗಳ ಸಂಭಾಷಣೆ, ಶೈಲಿ, ಜೀವನದ ಬಗೆಗಿನ ಒಂದು ನಿಶ್ಚಿತ ದೃಷ್ಟಿಯಿರುತ್ತದೆ. ಬದುಕಿನ ಕೆಲವು ಸಮಸ್ಯೆಗಳು ಅವಶ್ಯಕವಾಗಿ ನಿರೂಪಿಸಲ್ಪಡುತ್ತದೆ. ನಿರಂತರ ಓಘ, ನವಿರಾದ ನಿರೂಪಣೆ, ವಸ್ತುವನ್ನು ಸುಸಂಬದ್ಧವಾಗಿ ಪರಿಣಾಮಕಾರಿಯಾಗಿ ನಿರೂಪಿಸುವ ಮನಃಸ್ಥಿತಿ ಕಾದಂಬರಿಕಾರನಿಗಿದ್ದರೆ ಅದು ನಿಜವಾದ ಕಾದಂಬರಿಯಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ 19ನೇ ಶತಮಾನದಲ್ಲಿ ಅಧಿಕೃತವಾಗಿ ಆರಂಭಗೊಂಡ ಕಾದಂಬರಿ ಪ್ರಕಾರದ ಸಾಹಿತ್ಯ ಪರ್ವ ಇಂದಿಗೂ ಸಾಹಿತ್ಯವನ್ನು ಸಮೃದ್ಧವನ್ನಾಗಿ ಸುತ್ತಿರುವುದನ್ನು ಕಾಣಬಹುದು. ಸ್ವತಂತ್ರ ಹಾಗೂ ಅನುವಾದಿತ ಕಾದಂಬರಿಗಳು ಸೇರಿದಂತೆ ವಿವಿಧ ಮಜಲುಗಳಲ್ಲಿ ಸುಲಲಿತವಾಗಿ ಕಾದಂಬರಿಗಳು ರಚನೆಯಾಗುತ್ತಿವೆ.

* * * * *

ಅಧ್ಯಾಯ –4

ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆಯ ವಸ್ತು ವಿಶ್ಲೇಷಣೆ.

ತೌಲನಿಕ ಅಧ್ಯಯನ ಎಂಬುದು "ಎರಡು ಕೃತಿಗಳನ್ನು ಹೋಲಿಸಿ ಅವುಗಳನ್ನು ಮೌಲ್ಯ ಮಾಪನ ಮಾಡುವುದೇ ಆಗಿದೆ ಎನ್ನಬಹುದು. ಇಂಥ ಅಧ್ಯಯನದಿಂದ ಕೃತಿಯ ಸತ್ವವನ್ನು ನಾವು ಹೆಚ್ಚು ಹೆಚ್ಚು ಗ್ರಹಿಸಬಹುದಾಗಿರುತ್ತದೆ. ಎಲ್ಲಾ ಸಾಹಿತ್ಯ ಕೃತಿಗಳೂ ಒಂದರ್ಥದಲ್ಲಿ ವಿಶಿಷ್ಟವಾದವುಗಳೇ ಆದರೂ ಯಾವುದು ಯಾವುದಕ್ಕಿಂತ ಹೆಚ್ಚಾದುದು ಎಂಬ ಮಾತಂತೂ ಇದ್ದೇ ಇರುತ್ತದೆ. ಇಂಥ ನಿರ್ಣಯಕ್ಕೆ ಬರುವ ಒಂದು ಅಧ್ಯಯನದ ಪ್ರಕ್ರಿಯೆಯನ್ನೇ ನಾವು ತೌಲನಿಕ ಸಾಹಿತ್ಯ ಎಂದು ಕರೆಯುತ್ತೇವೆ." ಹೀಗೆ ಎರಡು ಸಾಹಿತ್ಯ ಕೃತಿಗಳನ್ನು ಒಂದರೊಡನೊಂದನ್ನು ಹೋಲಿಸಿ ಅಧ್ಯಯನ ಮಾಡುವುದು ತೌಲನಿಕ ಅಧ್ಯಯನವಾದರೂ, ಆ ಕೃತಿಗಳಲ್ಲಿರುವ ಸಾಮ್ಯತೆ-ಭಿನ್ನತೆಗಳನ್ನು ಗುರುತಿಸುವುದೂ ತೌಲನಿಕ ಅಧ್ಯಯನವಾಗುತ್ತದೆ.

ಈ ದೃಷ್ಟಿಯಿಂದ ಚಂದ್ರಶೇಖರ ಕಂಬಾರರ ಎರಡು ಕೃತಿಗಳಾದ 'ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ' ವಿಭಿನ್ನ ಕಥಾವಸ್ತುವನ್ನು ಹೊಂದಿದ್ದು ವಿಭಿನ್ನ ನೆಲೆಗಟ್ಟಿನಲ್ಲಿ ರಚನೆಯಾದವುಗಳಾಗಿದ್ದು ಹಲವಾರು ವೈದೃಶ್ಯಗಳನ್ನು ಹೊಂದಿರುವಂತೆ ಕೆಲವು ಸಾದೃಶ್ಯಾಂಶಗಳನ್ನು ಹೊಂದಿವೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಅ) ಶಿವನ ಡಂಗುರ ಕಾದಂಬರಿಯ ವಸ್ತು ವಿಶ್ಲೇಷಣೆ :-

ಭಾರತೀಯ ಸಮಾಜದಲ್ಲಿ ನಿಸ್ಸಂದೇಹವಾಗಿ ಶೋಷಣೆ, ಜಾತಿ ವ್ಯವಸ್ಥೆ, ಲಿಂಗಾಧಾರಿತ ಹಿಂಸೆ ಎಲ್ಲವೂ ಹಿಂದಿನಿಂದಲೂ ಪರಂಪರಾಗತವಾಗಿ ಬರುತ್ತಲಿವೆ. ಈ ಒಂದು ಕೃತಿಯಲ್ಲಿಯೂ ಶಿವಾಪುರ ಕಂಬಾರರ ಸೃಜನಶೀಲತೆಯ ಕೇಂದ್ರವೆಂದು, ಮತ್ತು ಆ ಗ್ರಾಮದ ಬಗ್ಗೆ ವರ್ಣನೆಯನ್ನು ಮಾಡುತ್ತಾರೆ. ಇಂತಹ ಶಿವಾಪುರಕ್ಕೆ ಅನ್ಯ ಸಂಸ್ಕೃತಿ ಎಂಬ ರಾಕ್ಷಸನ ಪ್ರವೇಶವಾಗುತ್ತದೆಂದು ಹೇಳುತ್ತಾರೆ.

ಶಿವನ ಡಂಗುರ ಕೃತಿಯಲ್ಲಿ ಬರುವ ಶಿವಾಪುರದ ಮುಖ್ಯ ಕೇಂದ್ರ ಬಿಂದು 'ಬಸಮೇಗೌಡ' ಗೌಡಾಳಿಕೆಯ ಮನೆತನದಲ್ಲಿ ಹುಟ್ಟಿದವನಾದ್ದರಿಂದ ಶಿವಾಪುರದ ಎಲ್ಲಾ ಚಟುವಟಿಕೆಗಳಲ್ಲೂ ಈತನ ಪಾತ್ರವಿದೆ. ಹಳ್ಳಿಯಲ್ಲಿ ಇವನನ್ನು ಎಲ್ಲಾ ಜನರು ನಂಬಿದ್ದೆ ಊರು ವಿನಾಶ ಹೊಂದಲು ಮುಖ್ಯ

ಕಾರಣ ಎನ್ನಬಹುದು. ಇವನ ವಿಲಾಸಿ ಜೀವನದಿಂದ ಅನೇಕ ಹೆಣ್ಣು ಮಕ್ಕಳನ್ನು ಕೊಕಿದ್ದು ಬಹಳಷ್ಟು ಜನ ಹೆಂಗಸರನ್ನು ಆಕರ್ಷಿಸಿದ್ದ. ಇಂತಹ ಗೌಡ ಪಾರೋತಿಯನ್ನು ಮದುವೆಯಾಗಿ ಅವರಗೆ ಹುಟ್ಟಿದ ಹೆಣ್ಣು ಮಹಳೇ ಭಾಗಿರ್ತಿ. ಜೋಗತಿ ತುಂಗವ್ವನನ್ನು ಪ್ರೀತಿಸಿ ಮದುವೆಯಾಗಿ ಅವಳಿಗೊಂದು ಮನೆಯನ್ನು ಹೊರಗೇರಿಯಲ್ಲಿ ಮಾಡಿಕೊಡುತ್ತಾನೆ. ಗೌಡ ಮತ್ತು ತುಂಗವ್ವಗೆ ಒಬ್ಬ ಮಗ ಹುಟ್ಟುತ್ತಾನೆ ಅವನೇ ಲಕ್ಷ್ಮಣ (ಲಸಮ) ಮೊದ ಮೊದಲು ಮಗ ಎಂದು ಒಪ್ಪಿಕೊಳ್ಳದ ಗೌಡ ತನ್ನ ಕೊನೆಯ ಕಾಲದಲ್ಲಿ ಲಸಮನನ್ನು ತನ್ನ ಮಗನೆಂದು ಒಪ್ಪಿಕೊಂಡು ತನ್ನ ಆಸ್ತಿಗೆ ಅವನು ವಾರಸುದಾರನೆಂದು ಹೆಳುತ್ತಾನೆ.

ಬರಮೇಗೌಡ ತನ್ನ ತಮ್ಮನ ಮಗನಾದ ಚೆಂಬಸವನು ದೇವದಾಸಿ ಎಂದು ಗೆಜ್ಜೆ ಕಟ್ಟಿಸಿಕೊಂಡಿದ್ದ ಶಾರವ್ವನನ್ನು ಪ್ರೀತಿಸಿ ಮದುವೆಯಾದಾಗ ಮೊದಲು ಒಪ್ಪದಿದ್ದರು ನಂತರ ಅದನ್ನು ಒಪ್ಪಿಕೊಂಡಿದ್ದ. ಶಿವಾಪುರವನ್ನು ಪ್ರೀತಿಸುತ್ತಿದ್ದ ದಿಟ್ಟತನದಿಂದ ತನ್ನ ಬಹಿರಂಗದ ಜೀವನವನ್ನು ರೂಢಿಸಿಕೊಂಡಿದ್ದ. ಬೀಜವಿಲ್ಲದ ಬೆಳೆಗಳನ್ನು ತಂದು ಒಂದಿಷ್ಟು ಹಣ ಬರುವ ಹಾಗೆ ದುಡ್ಡಿನ ಮಹತ್ವ ತಿಳಿಯುವ ಹಾಗೆ ಮಾಡಿದ್ದ ಜೊತೆಗೆ ಇಂಗ್ಲಿಷ್ ಶಾಲೆ, ಆಸ್ಪತ್ರೆಗಳನ್ನು ತೆರೆಯಬೇಕೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಡಿ.ಸಿ ಯಿಂದ 'ಮಲ್ಲೀಮಡು' ವನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಕೆಲಸಮಾಡಲು ಪ್ರಾರಂಭಿಸಲಾಯಿತು. ಆ ನಿಸರ್ಗದ ನಿರ್ಮಿತವಾದ ಮಲ್ಲೀಮಡುವನ್ನು ಸಮತಟ್ಟು ಮಾಡಲು ಅಲ್ಲಿಗೆ ತುಂಬುತ್ತಿದ್ದ ಕಲ್ಲು ಮಣ್ಣೆಲ್ಲ ವಿದೇಶಿ ಫ್ಯಾಕ್ಟರಿಯ ರಾಸಾಯನಿಕ ವಸ್ತುಗಳ ತ್ಯಾಜ್ಯವಸ್ತುಗಳು ತುಂಬುತ್ತಿದ್ದರು. ಬರಮೇಗೌಡ ಊರನ್ನು ಉದ್ಧಾರ ಮಾಡುವ ಯೋಜನೆ ಹೀಗೆ ಊರನ್ನು ಸ್ಮಶಾನ ಮಾಡುವ ಯೋಜನೆಯಾಗಿ ರೂಪಾಂತರವಾಯಿತು ಅವನ ಸದುದ್ದೇಶದ ಹಂಬಲ ಹೊರಗಿನ ಕುತಂತ್ರ ವ್ಯಕ್ತಿಗಳ ಕುಯುಕ್ತಿಯಿಂದಾಗಿ ಶಿವಾಪುರದಲ್ಲಿ ಅಪಾಯಕಾರಿ ರೋಗಗಳು, ನೆಲದ ಬಂಜರುತನ, ಶಿವಾಪುರ ಗಬ್ಬುವಾಸನೆಯಿಂದ ತುಂಬುತ್ತದೆ. ರುಚಿ ಕಳೆದುಕೊಂಡ ಹಣ್ಣುಗಳು, ವಿಕಾರ ರೂಪದ ಕರುಗಳು, ಅಂಗವಿಕಲ ಮಕ್ಕಳ ಜನನ ಇವೆಲ್ಲ ಇದರ ದುಷ್ಪರಿಣಾಮಗಳು.

ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರಯವ ಹಳ್ಳಿಗಳ ವಿನಾಶದ ಕಥೆಯಿದು ಶಿವಾಪುರದ ಪರಿಸ್ಥಿತಿಯನ್ನು ಸಮಕಾಲೀನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಸಮಾಜ ಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರ ಅಗತ್ಯವಿರುವುದಿಲ್ಲ ಅನಕ್ಷರಸ್ಥರಾದ ತುಂಗವ್ವನಂತಹ ಹೆಣ್ಣುಮಗಳು ಇದನ್ನು ಅರ್ಥಮಾಡಿಕೊಂದು ನಮಃಶ್ಶಿವಾಯ ಸ್ವಾಮಿಗೆ ಹೇಳುವ ಮಾತು ಮುಖ್ಯ. 'ನೀನಾದರೂ ಬುದ್ಧಿ ಹೇಳಬಾರದಾ ನನ್ನಪ್ಪಾ ಈ ಬುದ್ದಿಗೇಡಿ ಹೈವಾನರಿಗೆ? ಇವಕ್ಕೆಲ್ಲಾ ರೊಕ್ಕದ ಹಪಾಪಿ ಹತ್ತೇತಿ.

ರೊಕ್ಕದ ಬೆಳಿ ಅಂತ ಮಳೀ ನೀರು ಹೊಳೀ ನೀರು ಸಾಲವೊಲ್ದು! ರಸಗೊಬ್ಬರ ಸಾಲವೊಲ್ದು! ಸಾಲ ತಂದು ತಂದು ಹೊಲದಾಗ ಸುರುವ್ಯಾಕ ಹತ್ಯಾರ. ಕುಡಿದೇವಂದರ ನಮ್ಮ ಊರ ಹೊಳೀ ನೀರ ನಮಗ ಇಲ್ಲ. ಬೆಳೆದ ಬೇಳೀ ನಮ್ಮದಲ್ಲ! ಇವರು ಬೆಳೆದ ಬೆಳೆಗೆ ಯಾರೋ ದರಾ ಕಟ್ಟವರಂತ, ಯಾರೋ ಕೊಳ್ಳವರಂತ! ಅವರು ಕೊಟ್ಟಷ್ಟ ತಗೊಂಡು ಮನೀಗಿ ಸಪ್ಪ ಮೋತಿ ಹಾಕ್ಕೊಂಡು ಬರತಾವು! ಇವೆಂಥಾ ರೈತರೂ ಎಪ್ಪಾ? ಯಾಕೋ ಏನೋ ಮಲ್ಲೀಮಡು ಹೊಲಸ ನಾರತೈತಿ, ಯಾಕಂತ ನೋಡ್ರೋ ಮಕ್ಕಳ್ರಾ ಅಂದರ ಮಿಗ ಸತ್ತಿರಬೇಕ ಬಿಡಬೇ ಅಂತಾರು! ಮಿಗದ ಹೆಣಾ ಹೆಂಗ ನಾರತೈತಿ, ವಿಷ ಹೆಂಗ ನಾರತೈತಿ ಆಟೂ ತಿಳಿಯಾಣೆಲ್ಲೇನೋ ನನ್ನಪ್ಪಾ? ನಿನ್ನ ಮಠದಾಗ ಕೂಡ್ರಿಸಿಕೊಂಡ ಒಂದೀಟ ಬುದ್ಧೀ ಹೇಳಬಾರದಾ?"[1]

ಇದು ಸ್ಥಳೀಯ ವಿವೇಕ. ದೇಶಿಯ ಅಂತಃಸತ್ವ ಮಡ್ಡಿನ ಬೆಳೆಯ ಬೆನ್ನುಹತ್ತಿ ರೈತರು ತಮಗೆ ಅಗತ್ಯವಿದ್ದ ಬೆಳೆಗಳನ್ನು ನಿರ್ಲಕ್ಷಿಸಿದ್ದರು. ರೈತರು ತಾವು ಬೆಳೆದ ಧಾನ್ಯವನ್ನಾಗಲೀ ತರಕಾರಿಯನ್ನಾಗಲೀ ರಸಗೊಬ್ಬರದ ವಾಸನೆಯಿದೆಯೆಂದು ತಾವೇ ತಿನ್ನುತ್ತಿರಲಿಲ್ಲ. ಚೆನ್ನಾಗಿಲ್ಲವೆಂದು ತಾವೇ ನಂಬಿದ್ದನ್ನು ಬೇರೆಯವರಿಗೆ ಮಾರಬಾರದೆಂಬ ವಿವೇಕವೂ ಅವರಲ್ಲಿ ಉಳಿದಿರಲಿಲ್ಲ ಎಲ್ಲವೂ ಎಲ್ಲದರ ಉದ್ದೇಶವೂ ಗುರಿದಾರಿಗಳೆಲ್ಲವೂ ದುಡ್ಡು ಮಾಡುವುದಾಗಿತ್ತು. ಶಿವಾಪುರದಲ್ಲಿ ಊರಿನವರ ಪರಿಸ್ಥಿತಿ ಭಯಪಡಬೇಕಾದ ಸ್ಥಿತಿಗೆ ಬಂದಿದೆ. ಇದರ ಅರಿವು ತುಂಗವ್ವನಲ್ಲಿ ಎದ್ದು ಕಾಣುತ್ತದೆ. ಅವಳು ವಹಿಸುವ ಕಾಳಜಿ ತುಂಬ ಮುಖ್ಯ. ಮತ್ತೊಂದು ವಿಷಯವೆಂದರೆ ರೈತರು ತಾವು ದುಡಿದ ದುಡಿಮೆಯ ಶ್ರಮಕ್ಕೆ ಬೆಲೆ ಕಟ್ಟುವವರು ಹೊರಗಿನವರು. ಇದು ಆಧುನಿಕ ಅರ್ಥವ್ಯವಸ್ಥೆಯನ್ನು ನಿರೂಪಿಸುವಂತದ್ದು. ಶಿವಾಪುರದ ಈ ಸ್ಥಿತಿಗೆ ಕಾರಣ ಹೊರಗಿನಿಂದ ಬಂದ ವ್ಯಕಿಗಳೇ ಕುಂಟಿರಪ, ತಾರ, ಬಿಗ್‌ಬಾಸ್, ಜಾಕ್ಸನ್ ಕಂಪನಿಗಳೇ ಕಾರಣ ಎಲ್ಲವೂ ಶಿವಾಪುರದ ಬದಿಕಿನಲ್ಲಿ ಪ್ರವೇಶ ಮಾಡಲು ಕುಂಟಿರಪ ಕಾರಣ. ಕಾನೂನು ಕಲಿತವನಾದರೂ ವೈದ್ಯವೃತ್ತಿಯ ಹೆಸರಿನಲ್ಲಿ ಜನರ ದೌಬಲ್ಯವನ್ನು ಬಳಸಿಕೊಂಡು ಮಾಡಿತ್ತಿದ್ದುದ್ದು ವ್ಯಾಪಾರ. ಶಿವಾಪುರಕ್ಕೆ ಬಂದ ಇವನು ಬರಮೇಗೌಡನ ಹೆಂಡತಿ ಪಾರೋತಿಯ ಮಲತಾಯಿಯ ಮಗ. ಗೌಡನ ವಿಲಾಸೀ ಪ್ರವೃತ್ತಿಯ ದೌರ್ಬಲ್ಯ ಬಳಸಿಕೊಂಡು ಅವನನ್ನು ಹಿಂಚು ಹಿಂಚಾಗಿ ವಶಪಡಿಸಿಕೊಂಡು ತನ್ನ ಕಾರ್ಯ ಸಾಧಿಸಿಕೊಳ್ಳಲು ಮುಂದಾಗುತ್ತಾನೆ.

ಶಿವಾಪುರಕ್ಕೆ ರಾಜಕೀಯ ಪ್ರವೇಶವಾಗಿತ್ತದೆ. ಕುಂಟಿರಪ ಗೌಡನ ಹೆಸರಿವಲ್ಲಿ ಪದವಿಯನ್ನು ಪಡೆಯಲು ಮುಂದಾಗಿ ತನ್ನ ಹೆಂಡತಿ ಭಾಗಿರ್ತಿಯನ್ನು ಬಿಗ್‌ಬಾಸ್ ಗೆ ಒಪ್ಪಿಸಲು ಮುಂದಾಗುತ್ತಾನೆ. ರಾಜಕೀಯತೆಯಿಂದಾಗಿ ಊರಿನಲ್ಲಿ ನೆಲೆಸಿದ ಶಾಂತಿ ನಾಶವಾಗಿ ಅಲ್ಲಿ

1. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 154

ಅನ್ಯಾಯ, ಅಕ್ರಮಗಳು ತಾಂಡವವಾಡುತ್ತವೆ. ಊರು ರಣರಂಗವಾಗುತ್ತದೆ, ಕೊಲೆಗಳು ಅತ್ಯಾಚಾರಗಳು ನಡೆಯುತ್ತವೆ, ಸಂಚುಗಳು ರೂಪುಗೊಳ್ಳುತ್ತವೆ. ನಂಬಿಕೆ ಕುಸಿಯುತ್ತದೆ. ಹೊರಗಿನ ಶಕ್ತಿಗಳು ತಮ್ಮ ಕಾರ್ಯ ಸಾಧನೆಗಾಗಿ ಮುಗ್ಧ ಜನಗಳ ಮೇಲಿನ ದೌರ್ಜನ್ಯವೆಲ್ಲದರಿಂದ ಹಳ್ಳಿಯನ್ನೇ ಕೇಂದ್ರವಾಗಿಸಿಕೊಂಡು ಅಭಿವೃದ್ಧಿಯ ಹೆಸರಿನಲ್ಲಿ ವಿನಾಶ ಮಾಡಿ ಶಿವಾಪುರದ ಆತ್ಮವನ್ನೇ ನಾಶಮಾಡಿಬಿಡುತ್ತಾನೆ. ಹಳ್ಳಿಯು ವಿನಾಶವಾಗುತ್ತಿದ್ದಂತೆ ಮುಂದೆ ಏನಾಗಬಹುದು ಎಂಬುದು ತುಂಗವ್ವನಿಗೆ ಕನಸಿನ ರೂಪದಲ್ಲಿ ಅನಾವೃತದ ಎಚ್ಚರಿಕೆ ಮೂಡುತ್ತದೆ.

ಹಳ್ಳಿಯನ್ನು ಸುಧಾರಣೆಗೆ ತರಲು ಬರುವ ಮುಖ್ಯ ಪಾತ್ರವೆಂದರೆ ಚೆಂಬಸವ ಗೌಡಾಳಿಕೆಯ ಕುಟುಂಬದವನಾದರೂ ಜನಪದ ದೇವತೆಯಂತಿದ್ದ ಜೋಗತಿಯ ಎದೆಹಾಲು ಕುಡಿದು ಬೆಳೆದವನು. ಬಿ.ಎ ಕಲಿತಿದ್ದರೂ ಆಧುನಿಕ ಶಿಕ್ಷಣ ಸೃಷ್ಟಿಸಿದ ಪರಕೀಯತೆಯಿಂದ ಎಚ್ಚರದಿಂದ ಪಾರಗಿ ರೈತಾಪಿ ಜನರ ಜೊತೆ ಬದುಕಲು ಬಯಸಿದವನು. ಬೆಳಗಾವಿ ಪಟ್ಟಣದಲ್ಲಿ ಬೆಳೆದವನಾದರೂ ಹಳ್ಳಿಯ ಜೀವನಕ್ಕೆ ಜನಪದೀಯ ವ್ಯಕ್ತಿತ್ವಕ್ಕೆ ಹೊಂದಿಕೊಂಡವನು ರೂಢಿಗತ ಪರಂಪರೆ, ಸಂಸ್ಕೃತಿಯ ಕಟ್ಟಳೆಗಳನ್ನು ಮೀರಿ ಹಳ್ಳಿಯ ಉದ್ಧಾರಕ್ಕೆ ನಿಂತವನು. ಕುಂಟಿರಪ ಬರಮೇಗೌಡನನ್ನು ಮುಂದಿಟ್ಟುಕೊಂಡು ನಡೆಯುತ್ತಿದ್ದ ಎಲ್ಲಾ ಬಗೆಯ ಜೀವವಿರೋಧಿ ಚಟುವಟಿಕೆಗಳನ್ನು ವಿರೋಧಿಸುತ್ತಿದ್ದವನು. ಕಂಬಾರರು ಚೆಂಬಸವನನ್ನು ಕುಂಟಿರಪನ ಪರ್ಯಾಯವೆಂಬಂತೆ ಚಿತ್ರಿಸಿದ್ದಾರೆ.

ಚೆಂಬಸವನು ದುಷ್ಟಶಕ್ತಿಗಳನ್ನು ಕೊಲ್ಲುವ ಚಿತ್ರ ಕಾದಂಬರಿಯಲ್ಲಿ ಅತ್ಯಂತ ಧ್ವನಿಪೂರ್ಣವಾಗಿ ನಿಲ್ಲುತ್ತದೆ. ಹೊರಗಿನಿಂದ ಬಂದ ವ್ಯಕ್ತಿಗಳಿಂದ ನಡೆಯುತ್ತಿದ್ದ ಅನ್ಯಾಯಗಳಿಗೆ ಬಲಿಯಾದ ಶಿವಾಪುರವನ್ನು ರಕ್ಷಿಸಲು ಚೆಂಬಸವನು ಕೊಲೆಗಳನ್ನು ಮಾಡುತ್ತಾನೆ. ಇನ್ಸ್‌ಪೆಕ್ಟರ್, ಇಬ್ಬರು ಪೋಲೀಸರು, ರಾಡಿ ರಮೇಶಿ, ಕೇಡಿ ಗಣಪ ಈ ಐದು ಜನರನ್ನು ಕೊಂದು ತಾನೇ ನ್ಯಾಯಾಧೀಶರ ಮುಂದೆ ಶರಣಾಗುತ್ತಾನೆ. ಚೆಂಬಸವ ಕೊಲ್ಲುವುದು ಐದು ಜನರನ್ನು. ಈ ಐದು ಜನರನ್ನು ಕೊಂದಿದ್ದು ಮುಂದೆ ಶಿವಾಪುರ ಶುದ್ಧವಾಗಿರುತ್ತದೆ ಎಂಬ ಉದ್ದೇಶದಿಂದ ಇವನು ಕೊಲ್ಲಲು ಬಯಸಿದ್ದು ಊರಿಗೊದಗಿದ ಕೇಡನ್ನು. ಇಲ್ಲಿ ಚೆಂಬಸವನು ಕೊಲ್ಲುವುದು ತನ್ನೊಳಗಿನ ಮೃಗೀಯ ಶಕ್ತಿಯನ್ನು, ಸೇಡಿನಿಂದ ಹೊಸ ಸಮಾಜ ಕಟ್ಟಲು ಸಾಧ್ಯವಿಲ್ಲ. ಅದೇನಿದ್ದರು ಪ್ರೀತಿಯಿಂದ ಮಾತ್ರ ಸಾಧ್ಯ ಎಂಬುದು ಹರಿವಾಗುತ್ತದೆ.

ಕಾದಂಬರಿ ಹೀಗೆ ಹೊರಗಿನ ಕೇಡು, ಒಳಗಿನ ಕೇಡು ಎರಡನ್ನು ಏಕಕಾಲಕ್ಕೆ ಎದುರಿಸಿ ಹೊಸ ಸಮಾಜದ ಕಡೆಗೆ ತುಡಿಯುತ್ತದೆ ಎಂಬುದನ್ನು ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ.

ಭಾಗಿರ್ತಿ ಕುಂಟಿರಪನ ವಿಕೃತ ಸಂತಾನ 'ಮಾದೇವಿ' ನಮುಶ್ಶಿವಾಯನ ಕರುಣೆಯಿಂದ ಮಾಣಿಕ್ಯಮ್ಮನ ಆಸರೆಯಲ್ಲಿ ಶಾರವ್ವನ ಪಾರೈಕೆಯಲ್ಲಿ ಬೆಳೆಯುತ್ತಾಳೆ. ಅಂಗವಿಕಲೆಯಾದರೂ ಅವಳ ಚಾಣಾಕ್ಷತನ, ಮುಗ್ಧತೆ, ಯಾವುದಕ್ಕೂ ಕೊರತೆಯಿಲ್ಲ ಎಂಬುದಕ್ಕೆ ಒಮ್ಮೆ ನಾಲ್ಕು ಜಿಲ್ಲೆಗಳ ಅಂಗವಿಕಲ ಮಕ್ಕಳಿಗಾಗಿ ಏರ್ಪಡಿಸಿದ್ದ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡು ಅವಳು ತೋರಿದ ಜಾಣ್ಮೆಯನ್ನು ಕಂಬಾರರು ಈ ಹುಡುಗಿಯ ಪಾತ್ರದಲ್ಲಿ ಒಬ್ಬರನ್ನೊಬ್ಬರು ತುಳಿದು ಹಿಂದಿಕ್ಕುತ್ತಿರುವ ಸಮಾಜದಲ್ಲಿ ಎಲ್ಲರೂ ಒಟ್ಟಿಗೆ ಬೆಳೆಯುವ ಎಂಬುದನ್ನು ಚಿತ್ರಿಸಿದ್ದಾರೆ.

ಕಂಬಾರರು ಕಟ್ಟಿಕೊಡಲೆತ್ನಿಸುವ ಕನಸಿನ ಸಮಾಜ, ಒಬ್ಬರನ್ನೊಬ್ಬರು ಯಾವ ರೀತಿ ತುಳಿತಕ್ಕೆ ಒಳಪಡಿಸಿಕೊಳ್ಳುತ್ತಿದ್ದಾರೆಂಬುದನ್ನು, ಈ ಸ್ಪರ್ಧಾಜಗತ್ತಿನಲ್ಲಿ ಎಲ್ಲರೂ ಒಟ್ಟಿಗೆ ಬೆಳೆಯುವ ಪರಿಕಲ್ಪನೆಯನ್ನು ತಂದಿದ್ದಾರೆ. ದಿನಕ್ಕೊಂದು ಗಂಟೆ ಕೆಲಸ ಮಾಡಿ ಎಲ್ಲಾ ಸವಲತ್ತುಗಳ ಜೊತೆಗೆ ತಿಂಗಳಿಗೆ ಲಕ್ಷಾಂತರ ರೂಪಾಯಿ ಸಂಬಳ ಪಡೆಯುವ ಅಧಿಕಾರ ವರ್ಗ ಒಂದು ಕಡೆಯಾದರೆ, ದಿನವಿಡೀ ಕುಟುಂಬವೆಲ್ಲ ದುಡಿದರೂ ವರ್ಷಕ್ಕೆ ಲಕ್ಷ ಕಾಣದ ರೈತಾಪಿ ಜನರ ಬದುಕು ಮತ್ತೊಂದು ಕಡೆ. ಇಂಥ ಸಮಾಜದ ಪರಿಕಲ್ಪನೆಯನ್ನು ಕೊಡುತ್ತಾರೆ ಕಂಬಾರರು.

ಚೆಂಬಸವನು ಜೈಲಿನಿಂದ ಹೊರಬಂದು ಅಮ್ಮನ ಗುಡ್ಡದಲ್ಲಿ ಗುಡ್ಡದಯ್ಯ ಹೇಳಿದ ಹಾಗೆ ನೀನು ಮತ್ತೆ ಶಿವಾಪುರಕ್ಕೆ ಮರಳಿ ಹೊಸ ಶಿವಾಪುರ ಕಟ್ಟು ಎಂದು ಆದೇಶ ಮಾಡಲಾಗಿ ಅವನು ಮಾಣಿಕ್ಯಮ್ಮನ ಆಶ್ರಮದಲ್ಲಿದ್ದ ಶಾರವ್ವ ಮತ್ತು ಮಾದೇವಿಯೊಂದಿಗೆ ಶಿವಾಪುರಕ್ಕೆ ತೆರಳುತ್ತಾನೆ. ಇಲ್ಲಿಗೆ ಶಿವಾಪುರಕ್ಕೆ ಹಂಟಿದ ವಸಾಹತುಶಾಹಿ ಎನ್ನುವ ಭೂತ ಹೋಡಿಹೋಯಿತು ಎಂದು ಹೇಳಿ ಕಥೆ ಮುಗಿಸುತ್ತಾರೆ.

ಕೃತಿಯಲ್ಲಿ ಮೊದಲೇ ನಿರೂಪಿತವಾಗಿರುವಂತೆ ಕುಲವಂತರ ಕೇರಿ ಮತ್ತು ದಲಿತರ ಹೊರಕೇರಿ ಎಂದು ಭಾಗಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಜಾತಿ ವ್ಯವಸ್ಥೆಯ ಚಿತ್ರಣ ಮೂಡುತ್ತದೆ. ಕೆಳವರ್ಗ, ಮೇಲ್ವರ್ಗಗಳ ಸಂಘರ್ಷವನ್ನು ಕಾಣಬಹುದು. ಕುಲವಂತರು ಏನು ಬೇಕಾದರೂ ಮಾಡಬಹುದು. ಅವರು ಮಾಡಿದ್ದೇ ಸರಿ ಎಂಬಂತೆ ಬರಮೇಗೌಡ ಊರಿನ ಕೆಲವು ಹೆಣ್ಣುಗಳ ಜೊತೆ ಸಂಬಂಧ ಇಟ್ಟುಕೊಂಡಿದ್ದರು ಅದನ್ನು ಕೇಳುವವರಿಲ್ಲ ಕಾರಣ ಅವರು ಕುಲವಂತರೆಂಬುದಕ್ಕೆ ಅದೇ ರೀತಿ ಕೆಳಜಾತಿಯ ತುಂಗವ್ವನನ್ನು ಮದುವೆಯಾದರೂ ಅವಳು

ಮೇಲ್ಜಾತಿಯವರ ಕೇರಿಯಲ್ಲಿರುವಂತಿಲ್ಲ ಅದಕ್ಕೆ ಅವಳನ್ನು ಹೊರಕೇರಿಯಲ್ಲಿ ಮನೆ ಮಾಡಿಸಿ ಇರಿಸುತ್ತಾನೆ. ಅವರಿಗೆ ಹುಟ್ಟಿದ ಮಗ ಲಸಮನನ್ನು ತನ್ನ ಮಗನೆಂದು ಒಪ್ಪಿಕೊಳ್ಳುವುದಿಲ್ಲ ನಂತರ ಮುಗ್ಧ ರೈತರ ಹತ್ತಿರ ಜಮೀನನ್ನು ಬರೆಸಿಕೊಂಡು ಅವರ ಮೇಲೆ ಕೊಲೆ ಆರೋಪ ದಾಖಲಾಯಿತ್ತೆಂದು ಹೆದರಿಸುತ್ತಿದ್ದ ಜೊತೆಗೆ ನಾಲ್ಕು ಜನ ದಲಿತ ರೈತರ ಜಮೀನನ್ನು ವಶಪಡಿಸಿಕೊಂಡು ತನ್ನ ಕೆಟ್ಟ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದ.

ಭಾಗಿರ್ತಿ ತನಗೆ ಇಷ್ಟ ವಿಲ್ಲದಿದ್ದರೂ ತಾಯಿ-ತಂದೆಯ ಬಲವಂತದಿಂದ ಕುಂಟಿರಪನನ್ನು ಮದುವೆಯಾಗುವ ಸ್ಥಿತಿ ಬರುತ್ತದೆ. ಅವನ ಬಗ್ಗೆ ತಿಳಿದಿದ್ದರು ಮದುವೆಯನ್ನು ವಿರೋಧಿಸುವುದಿಲ್ಲ. ಎಲ್ಲಾ ಕಷ್ಟಗಳನ್ನು ತಾನೇ ಅನುಭವಿಸುತ್ತಾಳೆ. ನಂತರ ಶಾರವ್ವ ಚೆಂಬಸವನನ್ನು ಮದುವೆಯಾದರೂ ಅವಳಿಗೆ ಶೋಷಣೆ ತಪ್ಪಿದ್ದಲ್ಲಿ ಅನ್ಯಾಯಕ್ಕೆ ಒಳಗಾಗಿ ಆಶ್ರಮ ಸೇರಿದಾಗ ಪ್ರತಿ ದಿನ ಚೆಂಬಸವನಿಗಾಗಿ ವಿರಹ ವೇದನೆಯಿಂದ ಕಾಲ ಕಳೆಯುತ್ತಾಳೆ. ಚೆಂಬಸವನ ಬರುವಿಕೆಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಾಳೆ.

ರಮೇಶಿ ಗಣಪರು ನೀಲಗಂಗುವಿನ ಮೇಲೆ ಮಾಡಿದ ಆಕ್ರಮಣದಿಂದ ನೀಲಗಂಗುವಿನ ಸಾವು, ಇದರಿಂದ ಕಲ್ಲವ್ವನ ರೋಧನ ಮುಗಿಲು ಮುಟ್ಟುವಂತದ್ದು. ಗೌಡನ ದೌರ್ಜನ್ಯದಿಂದ ಬಲವಂತನ ಸಾವು ಇದರಿಂದ ಹಳ್ಳಿಯಲ್ಲಿನ ವಾತವರಣವೇ ಬದಲಾಗುತ್ತದೆ. ಊರಿಗೆ ಪೋಲೀಸಿನವರು ಬರುವಂತಾಗುತ್ತದೆ. ಕಾಯುವವರೆ ಕೊಲ್ಲುವಂತಾಗುತ್ತದೆ.

ಶಾಲೆ ಕಾಲೇಜುಗಳನ್ನು ತೆರೆಯುತ್ತೇನೆಂದು ಮಲ್ಲೀಮಡುವನ್ನು ಸಂಪೂರ್ಣ ವಿನಾಶದ ಹಂತಕ್ಕೆ ತಲುಪುವಂತೆ ಮಾಡುತ್ತಾರೆ. ಇದರಿಂದ ಇಡೀ ಶಿವಾಪುರವೇ ಗಬ್ಬುನಾರುತ್ತದೆ. ಇದರ ಪರಿಣಾಮವಾಗಿ ವಿಕಾರ ರೂಪದ ಕರುಗಳು, ವಿಕಲಾಂಗ ಮಕ್ಕಳ ಜನನ, ರುಚಿಗುಂದಿದ ಹಣ್ಣುಗಳು, ಅನೇಕ ರೋಗಗಳು ಹೀಗೆ ಸಂಪೂರ್ಣ ಊರೇ ವಿಷಕಾರಿಯಾಗುತ್ತದೆ. ಆಧುನಿಕತೆಯ ಬೆನ್ನತ್ತಿ ಊರು ವಿನಾಶದ ಹಂಚನ್ನು ತಲುಪುತ್ತದೆ. ಒಂದು ಸಂಸ್ಕೃತಿಯ ಬೆನ್ನಲ್ಲೇ ವಾಸಿಸುವಂತಹ ಜನ ತಮ್ಮ ಸುತ್ತ ಮುತ್ತಲಿನ ಪರಿಸರ ಎಲ್ಲದರ ಬಗ್ಗೆಯೂ ಕಾಳಜಿ ವಹಿಸುತ್ತಾರೆ. ಈ ರೀತಿಯ ಜನಗಳು ಮತ್ತೊಂದು ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಹೋಗಿ ತಮಗೆ ತಾವೇ ತೊಂದರೆಗೆ ಸಿಲುಕುತ್ತಾರೆ. ಜೊತೆಗೆ ಅಭಿವೃದ್ಧಿಯ ಹೆಸರಿನಲ್ಲಿ ಹಳ್ಳಿ ವಿನಾಶದ ಹಂಚಿಗೆ ತಲುಪುವ ದೃಶ್ಯ ಇಲ್ಲಿ ಕಂಡುಬರುತ್ತದೆ. ಮತ್ತೆ ಶಿವಾಪುರವನ್ನು ಕಟ್ಟಲು ಅನೇಕ ಸಾವು, ನೊವು, ಚಳುವಳಿಗಳು ಜರುಗಿಹೊಗುತ್ತವೆ.

ಇಂದು ಆಧುನಿಕ ಅರ್ಥವ್ಯವಸ್ಥೆಯ ಸ್ವರೂಪ. ಶಿಕ್ಷಣ ಪಡೆದ ವಿದ್ಯಾವಂತರ ದುಡಿಮೆಗು, ರೈತರ ದುಡಿಮೆಯ ಶ್ರಮಕ್ಕೆ ಸಿಗುವ ಪ್ರತಿಫಲ ಸಮವಾಗದು. ಶ್ರಮದ ಬೆಲೆಯ ಮಾನದಂಡವನ್ನು ನಿರ್ಧರಿಸುತ್ತಿರುವವರು ವಿದ್ಯಾವಂತರು. ಇಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಮೂಲ ಕಾರಣ ಇಲ್ಲಿದೆ. ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕುತ್ತಿಲ್ಲ. ತುಂಗವ್ವನ ವಿವೇಕ ಇಂದು ನಮ್ಮ ಜನಗಳಿಗೆ ಇಲ್ಲದಿರುವುದು ಮೂಲ ಕಾರಣ ಶಿವಾಪುರದ ಈ ಸ್ಥಿತಿಗೆ ಕಾರಣವಾಗಿರುವ ಸಂಗತಿಗಳಾವುವು? ಪರಿಹಾರವಿದೆಯೇ? ಇಂಥ ಪ್ರಶ್ನೆಗಳು 'ಶಿವನ ಡಂಗುರ' ಕಾದಂಬರಿಯಲ್ಲಿ ನಿರೂಪಿಸಲಾಗಿದೆ.

ಹಳ್ಳಿಯೊಂದರ ಬದುಕನ್ನು ಚಿತ್ರಿಸುತ್ತಾ ಜಾಗತೀಕರಣದ ಅಪಾಯ, ನಗರಕೇಂದ್ರಿತ ಪ್ರಗತಿಯ ಪರಿಕಲ್ಪನೆ, ಜನಪದರ ಆತ್ಮನಾಶ, ಆಸ್ವಾಕ್ರಮಣ ನಮ್ಮ ಸೃಜನಶೀಲತೆಯನ್ನೇ ಕೊಲ್ಲುತ್ತಿರುವ ದುರಂತತೆ, ಅಭಿವೃದ್ಧಿಯ ಹೆಸರಿನಲ್ಲಿ ಈ ನೆಲದ ಅಂತಃಸತ್ವವನ್ನೇ ಹೀರುತ್ತಿರುವ ಆಮದು ಯೋಜನೆಗಳ ದುಷ್ಪರಿಣಾಮ ಹೀಗೆ ಅನೇಕ ಸಂಗತಿಗಳನ್ನು ಈ ಕಾದಂಬರಿಯಲ್ಲಿ ಚರ್ಚಿಸಲಾಗಿದೆ. ನಮ್ಮ ಜಾನಪದ ಜಗತ್ತು ಮೂಲ ಪ್ರೇರಣೆ. ಜಾನಪದರ ಸೃಜನಶೀಲತೆಯ ಬಗ್ಗೆ ಕಂಬಾರರಿಗೆ ಅಪಾರ ವಿಶ್ವಾಸ ಈ ದೃಷ್ಟಿಯಿಂದ 'ಶಿವನ ಡಂಗುರ' ಕೃತಿ ವಿಶಿಷ್ಟವಾಗುತ್ತದೆ.

ಪ್ರಾರಂಭದಲ್ಲಿ ಬರುವ ಆಲದ ಮರದ ಸಂಕೇತ ಪುರಾತನ ಕಾಲದಿಂದಲೂ ಹಳ್ಳಿಯ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಆದರೆ ಒಂದು ಜಾನಪದ ಹಳ್ಳಿಯಲ್ಲಿ ಯಾವ ರೀತಿ ಹರಡಿಕೊಂಡಿದೆ ಎಂಬುದು ಜೊತೆಗೆ ನಿಸರ್ಗದ ವರ್ಣನೆ ಅದ್ಭುತವಾಗಿದೆ. ನದಿಯ ನೀರು ಹರಿಯುವ ಜಾಗದಲ್ಲಿ ನೀರಿನ ಕೆಳಗೆ ಕಲ್ಲುಗಳು ಕಾಣುತ್ತವೆ. ಇದರ ಸಂಕೇತ ಹಳ್ಳಿಗಳ ಜನರ ಮನಸ್ಸು ನಿರ್ಮಲವಾದದ್ದು ಅದನ್ನು ಕಲಕಲು ಚಿಕ್ಕದೊಂದು ಕಲ್ಲು ಸಾಕು ಎಂಬುದಕ್ಕೆ ಶಿವನ ಡಂಗುರ ಕಾದಂಬರಿ ಉದಾಹರಣೆಯಾಗಿದೆ. ಈ ಕಾದಂಬರಿಯ ವಸ್ತುವೇ ಊರು ವಿನಾಶ ವಾಗುವಾಗ ಅದನ್ನು ಮರಳಿ ಕಟ್ಟುವ ಪ್ರಯತ್ನ ಜೊತೆಗೆ ಆ ಹಳ್ಳಿ ಎದುರಿಸುವ ಸಮಸ್ಯೆಗಳೇ ಆಗಿದೆ. ಆಳುವವನಿಂದ ಅನ್ಯಾಯಕ್ಕೆ ಒಳಗಾಗುವ ಸಮುದಾಯ ಒಂದು ಕಡೆಯಾದರೆ, ಆಧುನಿಕತೆ ಮತ್ತೊಂದು ಕಡೆ, ಇವೆರಡುಗಳ ಮಧ್ಯೆ ಮೂಢನಂಬಿಕೆ, ಸಂಪ್ರದಾಯ ಸೇರುತ್ತವೆ.

ಒಟ್ಟಾರೆಯಾಗಿ 'ಶಿವನ ಡಂಗುರ' ಕಾದಂಬರಿಯಲ್ಲಿ ಪ್ರಸ್ತುತ ಸಮಾಜದಲ್ಲಿ ಬರುವಂತಹ ಸಮಸ್ಯೆಗಳು ಶ್ರೀ ಸಾಮಾನ್ಯನನ್ನು ಯಾವರೀತಿ ಕಾಡುತ್ತಿವೆ ಎಂಬುದು ಆ ಸಮಸ್ಯೆಗಳನ್ನು

ಎದುರಿಸುವ ಬಗೆಯನ್ನು ಚರ್ಚಿಸಲಾಗಿದೆ. ಈ ಅಧ್ಯಾಯನದಿಂದ ಇದೊಂದು ಹೋರಾಟದ ಕಾದಂಬರಿ ಎಂದರೂ ತಪ್ಪಾಗಲಾರದು ಎಂಬುದು ನನ್ನ ಅಭಿಪ್ರಾಯ.

ಆ) ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯ ವಸ್ತು ವಿಶ್ಲೇಷಣೆ :-

ಚಂದ್ರಶೇಖರ ಕಂಬಾರರ ಕೃತಿಗಳಲ್ಲಿ 1982ರಲ್ಲಿ ಪ್ರಕಟವಾದ "ಸಿಂಗಾರೆವ್ವ ಮತ್ತು ಅರಮನೆ" ಕಾದಂಬರಿ ಪ್ರಮುಖವಾಗಿದೆ. ಈ ಕಾದಂಬರಿಗೆ "ರಾಜ್ಯ ಸಾಹಿತ್ಯ ಅಕಾಡೆಮಿ" ಪ್ರಶಸ್ತಿ ಲಭಿಸಿದ್ದು 'ಸಿಂಗಾರೆವ್ವ' ಹೆಸರಿನ ಚಲನಚಿತ್ರವಾಗಿ "ಉತ್ತಮ ಪ್ರಾದೇಶಿಕ ಚಿತ್ರ" ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದೆ. ಶ್ರೀಮತಿ ಲಕ್ಷ್ಮೀ ಚಂದ್ರಶೇಖರ ಈ ಕಾದಂಬರಿಯನ್ನು ಆಂಗ್ಲ ಭಾಷೆಗೆ ಅನುವಾದಿಸಿದ್ದಾರೆ. ಇದು ಮಲಯಾಳಂ ಭಾಷೆಗೂ ಅನುವಾದಗೊಂಡಿದೆ.

"ಸಿಂಗಾರೆವ್ವ ಮತ್ತು ಅರಮನೆ" ಕಾದಂಬರಿ ಉತ್ತರ ಕರ್ನಾಟಕದ ಒಂದು ಹಳ್ಳಿಯ ಸಂಪ್ರದಾಯದ ಚೌಕಟ್ಟಿನಲ್ಲಿ, ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹೆಣ್ಣಿನ ತಾಕಲಾಟಗಳನ್ನು ಎಳೆಎಳೆಯಾಗಿ ಬಿಚ್ಚಿಡುತ್ತದೆ. ಈ ಕಾದಂಬರಿ ಒಂದು ಹೆಣ್ಣಿನ ಕಥೆಯೂ, ಒಂದು ಅರಮನೆಯ ಕಥೆಯೂ ಆಗಿರುವಂತೆ ಹಳೆಯ ಮೌಲ್ಯಗಳ ವಿರುದ್ಧ ಹೊಸ ಮೌಲ್ಯಗಳನ್ನು ಸೃಷ್ಟಿಸುತ್ತಿರುವ ಕಥೆಯೂ ಆಗಿದೆ. ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರವೊಂದು ನಿರೂಪಕಿಯಾಗಿರುವುದು ಈ ಕಾದಂಬರಿಯ ವೈಶಿಷ್ಟ್ಯ.

'ಅರಮನೆ' ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಾಗಿದ್ದು, ಸ್ವಪ್ರತಿಷ್ಠೆ, ಅಹಂಕಾರ, ಕ್ರೌರ್ಯಗಳಿಂದ ಮೆರೆದು ತನ್ನ ದೌರ್ಬಲ್ಯಗಳಿಂದಾಗಿ ತಾನೇ ನಾಶವಾಗುವ ಚಿತ್ರಣ ಕಾದಂಬರಿಯಲ್ಲಿದೆ. ಅರಮನೆಯಲ್ಲಿನ ಸ್ವಾರ್ಥ ಮತ್ತು ಕ್ರೂರತೆಯನ್ನು ಅನಾವರಣಗೊಳಿಸುತ್ತದೆ. ಶ್ರೀಮಂತಿಕೆ ಮತ್ತು ಅದರ ಅವನತಿ, ಸಾಂಪ್ರದಾಯಿಕ ಸಮಾಜದಲ್ಲಿನ ಹೆಣ್ಣಿನ ಶೋಷಣೆ ಹಾಗೂ ಆಕೆಯ ತೊಳಲಾಟ, ಮತ್ತು ಪ್ರತಿಭಟನೆಯೇ ಕಾದಂಬರಿಯ ಮುಖ್ಯವಸ್ತು.

ಕಾದಂಬರಿಯ ನಾಯಕಿ "ಸಿಂಗಾರೆವ್ವ" ನಂದಗಾಂವಿಯ ಪಂಡರೀಗೌಡನ ಏಕೈಕ ಪುತ್ರಿ. ಸಿಂಗಾರೆವ್ವ ಮೃದು ಮನಸ್ಸಿನ ಅಂತಃಕರುಣಿಯಾದ ಚೆಲುವೆ ಪಂಡರೀಗೌಡ ಆಸ್ತಿಯ ಆಸೆಗಾಗಿ ತನ್ನ ತಂಗಿಯ ಮಗನಾದ ಶಿರಟ್ಟಿಯ ಗೌಡನ ಕ್ಷಯರೋಗದಿಂದ ಸತ್ತ ಮಗನೊಂದಿಗೆ ಬಾಲ್ಯ ವಿವಾಹ ಮಾಡುತ್ತಾನೆ. ನಂತರ ಅದೇ ದುರಾಸೆಯಿಂದ ಕುಡುಕ, ನಿರ್ವೀರ್ಯನಾದ ಶಿವಾಪುರದ ಅರಮನೆಯ ರಾಜನಾದ ಸರಗಂ ದೇಸಾಯಿಯೊಂದಿಗೆ ಸಿಂಗಾರೆವ್ವನಿಗೆ ಪುನರ್ವಿವಾಹ

ಮಾಡುತ್ತಾನೆ. ಸಿಗಾರೆವ್ವಳಿಗೆ ಎರಡು ಮದುವೆ ಮಾಡಿದ ಗೌಡ ಮಗಳನ್ನು ಆಸ್ತಿಯ ಅಸ್ತ್ರವಾಗಿ ಬಳಸಿಕೊಳ್ಳುವುದು ಸಿಂಗಾರೆವ್ವ ಬದುಕಿನ ಅತೀ ದೊಡ್ಡ ದುರಂತವೇ ಸರಿ.

ಸಿಂಗಾರೆವ್ವ ಮತ್ತು ದೇಸಾಯಿಯದು ವಿಷಮ ದಾಂಪತ್ಯ. ಇದೇ ಸಿಂಗಾರೆವ್ವ ಮಕ್ಕಳ ಅಪೇಕ್ಷೆಯಿಂದ ಅರಮನೆಗೆ ಜಂಗಮರ ಪ್ರವೇಶ ನಿಷಿದ್ಧವಾದರೂ ಹುಚ್ಚಯ್ಯನೆಂಬ ಜಂಗಮನನ್ನು ಕರೆಸಿ ರಾತ್ರಿ ಗುಪ್ತ ಪೂಜೆ ಏರ್ಪಡಿಸುತ್ತಾಳೆ. ಅದೇ ಸಂದರ್ಭಕ್ಕೆ ಅರಮನೆಗೆ ಬಂದ ದೇಸಾಯಿಗೆ ವಿಷಯ ತಿಳಿಯಬಾರದೆಂದು ಹುಚ್ಚಯ್ಯನನ್ನು ಗಾದಿಯಲ್ಲಿ ಸುತ್ತಿಡುತ್ತಾರೆ. ದುರಾದೃಷ್ಟವೆಂಬಂತೆ ಆತ ಅಲ್ಲಿಯೇ ಸಾಯುತ್ತಾನೆ. ಅವನ ಹೆಣ ಸಾಗಿಸಲು ಶೀನಿಂಗವ್ವ ಹೊಲಗೇರಿಗೆ ಹೋಗಿ ಒಬ್ಬ ಆಳನ್ನು ಕರೆತರುತ್ತಾಳೆ. ಅವನೇ ಮರ್‍ಯಾ ಆತ ಸಿಂಗಾರೆವ್ವನ ತವರು ಮನೆಯ ಜೀತದಾಳು, ಮರ್‍ಯಾನ ತಾಯಿಯೊಂದಿಗೆ ಸಿಂಗಾರೆವ್ವನ ತಂದೆ ಪಂಡರೀಗೌಡ ಅನೈತಿಕ ಸಂಬಂಧವಿರುತ್ತದೆ. ಈ ವಿಷಯ ತಿಳಿದ ಮರ್‍ಯಾ ತಾಯಿಯನ್ನು ಕೊಂದು ತಲೆಮರೆಸಿಕೊಂಡಿರುತ್ತಾನೆ. ಅರಮನೆಗೆ ಬಂದ ಈತ ಸಿಂಗಾರೆವ್ವ ತನ್ನೊಂದಿಗೆ ಮಲಗಿದರೆ ಮಾತ್ರ ತಾನು ಹುಚ್ಚಯ್ಯನ ಹೆಣವನ್ನು ಹೊರಗೆ ಸಾಗಿಸುವುದಾಗಿ ಕರಾರು ಹಾಕುತ್ತಾನೆ. ಕಾರಣ ಮರ್‍ಯಾನಿಗೆ ಸಿಂಗಾರೆವ್ವನ ಮೇಲೆ ಮೊದಲಿನಿಂದಲೂ ಮನಸ್ಸಿರುತ್ತದೆ.

ಸಿಂಗಾರೆವ್ವ ಇದಕ್ಕೆ ಒಪ್ಪದಿದ್ದಾಗ ಮರ್‍ಯಾ ಅವಳನ್ನು ಬಲತ್ಕಾರಿಸುತ್ತಾನೆ. ನಂತರ ಹುಚ್ಚಯ್ಯನ ಹೆಣವನ್ನು ಕುಮುದವ್ವನ ಗುಡಿಯ ಪಕ್ಕದ ಗುಡಿಸಲಿಗೆ ಒಯ್ದು ಪದ್ಮಾಸನದಲ್ಲಿ ಕೂರಿಸಿ ಬರುತ್ತಾನೆ. ಮರುದಿನ ಹುಚ್ಚಯ್ಯನ ಹೆಣವನ್ನು ಕಂಡ ಊರವರು ಮಳೆಗಾಗಿ ತಪಸ್ಸು ಮಾಡುತ್ತಾ ಹುಚ್ಚಯ್ಯ ಕೈಲಾಸವಾಸಿಯಾಗಿದ್ದಾನೆಂದು ತಿಳಿದು ಹೆಣವನ್ನು ಮೆರವಣಿಗೆ ಮಾಡಿ ಸಂಸ್ಕಾರ ಮಾಡುತ್ತಾರೆ.

ಸಿಂಗಾರೆವ್ವ ಮರ್‍ಯಾನನ್ನು ಕೊಲ್ಲಲು ನಿರ್ಧರಿಸಿದರೂ ಮತ್ತೆ ತಾನೇ ಆ ನಿರ್ಧಾರವನ್ನು ಕೈ ಬಿಡುತ್ತಾಳೆ. ದೇಸಾಯಿಯ ಚಟಗಳಿಂದಾಗಿ ಮನೆತನದ ಸಾಲ ಅಧಿಕವಾಗುತ್ತಾ ಹೋಗುತ್ತದೆ. ಪರಮಶೆಟ್ಟಿ ದೇಸಾಯಿಗೆ ಸಾಲಕೊಟ್ಟು ಆಸ್ತಿ ಬರೆಸಿಕೊಳ್ಳುವ ಉಪಾಯ ಹೂಡುವುದು ಒಂದೆಡೆಯಾದರೆ ಮತ್ತೊಂಡೆದೆ ಸಿಂಗಾರೆವ್ವನ ತಂದೆ ಕೂಡಾ ದೇಸಾಯಿ ಮನೆತನದ ಆಸ್ತಿಯ ಮೇಲೆ ಕಣ್ಣಿಟ್ಟು ದೇಸಾಯಿ ಸಾಯುವ ಗಳಿಗೆಗಾಗಿ ಕಾದಿರುತ್ತಾನೆ. ಸಿಂಗಾರೆವ್ವ ದೇಸಾಯಿಯನ್ನು ಸರಿ ದಾರಿಗೆ ತರಲು ಬಹಳಷ್ಟು ಪ್ರಯತ್ನಿಸಿದರೂ ದೇಸಾಯಿ ಚಿಮಣಾಳನ್ನು ನೋಡಿ ಬೇಹೋಶ್ ಆಗುವ ತನ್ನ ಚಟವನ್ನು ಬಿಡುವುದಿಲ್ಲ. ತನ್ನ ಪ್ರಯತ್ನವೆಲ್ಲಾ ವಿಫಲವಾದಾಗ ದೇಸಾಯಿಯ ಮೇಲಿನ ಸೇಡಿಗಾಗಿ ಎನ್ನುವಂತೆ ಸಿಂಗಾರೆವ್ವ ತಾನೇ ಮರ್‍ಯಾನನ್ನು ಕೂಡಿ ಬಸಿರಾಗುತ್ತಾಳೆ.

ಸಿಂಗಾರೆವ್ವನ ಈ ರೀತಿಯ ಅನೈತಿಕ ಬಸಿರು ದೇಸಾಯಿಯನ್ನು ಚುಚ್ಚಲಾರಂಭಿಸುತ್ತದೆ. ಹೀಗಾಗಿ ತನ್ನ ಸಾವಿಗೆ ವ್ಯಭಿಚಾರಿಯಾದ ತನ್ನ ಹೆಂಡತಿಯೇ ಕಾರಣವೆಂದು ಪತ್ರ ಬರೆದಿಟ್ಟು ದೇಸಾಯಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ನಂತರ ತನ್ನ ಅಪರಾಧವನ್ನು ಒಪ್ಪಿಕೊಂಡು ಜೈಲು ಸೇರುವ ಸಿಂಗಾರೆವ್ವ ಅಲ್ಲಿಯೇ ಗಂಡು ಮಗುವಿಗೆ ಜನ್ಮ ನೀಡಿ ಸಾಯುತ್ತಾಳೆ. ಇದಾದ ಮೂರು ದಿನಕ್ಕೆ ಸಿಂಗಾರೆವ್ವನ ಮೇಲಿನ ಪ್ರೀತಿಯಿಂದ ಮರ್‍ಯಾ ತಾನೇ ಉದ್ದೇಶಪೂರ್ವಕವಾಗಿ ಹಾವಿನಿಂದ ಕಚ್ಚಿಸಿಕೊಂಡು ಸಾಯುತ್ತಾನೆ. ಹೀಗೆ ದುರಂತಗಳಲ್ಲಿಯೇ ಕಾದಂಬರಿ ತುಂಬಿದೆ.

ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿ ಪ್ರಾರಂಭವಾಗುವುದು. ಶಿವಾಪುರದ ಅರಮನೆಯನ್ನು ಹರಾಜು ಹಾಕಲು ಅರಮನೆಯ ಹಕ್ಕುದಾರನಾದ ಸಿಂಗಾರೆವ್ವಳ ಮಗನಾದ 'ರವಿಚಂದ್ರ' ನಿರ್ಧರಿಸಿದ್ದಾನೆಂದು ಲೇಖಕರಿಗೆ ಆವರ ಗೆಳೆಯ ತಿಳಿಸುವುದರೊಂದಿಗೆ ಆಗ ಲೇಖಕರಿಗೆ ಸ್ನೇಹಿತನ ಸಲಹೆಯಂತೆ ನಿಗೂಢವಾದ ಆ ಅರಮನೆಯ ಕಥೆಯನ್ನು ಬರೆದಿರಿಸಬೇಕೆನಿಸುತ್ತದೆ. ಆದಕ್ಕಾಗಿ ಶಿವಾಪುರಕ್ಕೆ ಹೋಗಿ, ಅರಮನೆಯಲ್ಲಿ ಉಳಿದಿಪ್ಪ ಸಿಂಗಾರೆವ್ವಳ ಗೆಳತಿ, ಶೀನಿಂಗವ್ವಳನ್ನು ಒಪ್ಪಿಸಿ ಅವಳಿಂದ ಕಥೆಯನ್ನು ಹೇಳಿಸುತ್ತಾರೆ. ಕಾದಂಬರಿ ಬಹುಭಾಗ ಶೀನಿಂಗವ್ವನಿಂದಲೇ ನಿರೂಪಿಸಲ್ಪಟ್ಟಿದೆ.

ಕಾದಂಬರಿಯನ್ನು ಕುರಿತು ಕಂಬಾರರು ಕಾದಂಬರಿಯಲ್ಲಿ ಅಡಗಿರುವ ಸತ್ಯಾಸತ್ಯತೆಗಳನ್ನು ಕುರಿತು ಹೀಗೆ ಹೇಳುತ್ತಾರೆ. "ಕಾದಂಬರಿಯ ಮುಖ್ಯವಾದ ಸತ್ಯವೆಂದರೆ ನಮ್ಮ ಗತವನ್ನು ವರ್ತಮಾನದಲ್ಲಿ ಹಾಗೂ ಭವಿಷ್ಯದಲ್ಲಿ ನಾವು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದನ್ನು ಕುರಿತಾದದ್ದು ಕಾದಂಬರಿಯಲ್ಲಿ ನಮ್ಮ ಪಾಳೇಯಗಾರರು ವಾಸ ಮಾಡುತ್ತಿದ್ದಂಥ ಅರಮನೆ ಈಗ ಅವನತಿಯ ಹಾದಿ ಹಿಡಿದಿದೆ. ಸಮಸ್ಯೆ ಎಂದರೆ ಅದನ್ನೇ ಹೇಗೆ ಬಳಸಿಕೊಳ್ಳಬಹುದು ಎಂಬುದು. ಗುಡಿಸಲಾಗಿರಲಿ, ಮಹಲಾಗಿರಲಿ ಅದು ಮುಡಿಪಾಗಿರಬೇಕಾದದ್ದು ಮಕ್ಕಳಿಗಾಗಿ ನಪುಂಸಕನಾದ ಶ್ರೀಮಂತ ಮಹಲಿನ ಒಡೆಯನಿದ್ದಾನೆ; ಗರ್ಭಿಣಿಯಾಗಲಾರದ ಹೆಂಡತಿ ಅಲ್ಲಿ ಇದ್ದಾಳೆ. ಅವರು ಕಾಲವಾದ ಬಳಿಕ ಮಹಲನ್ನು ಶಾಲೆಯಾಗಿ ಪರಿವರ್ತಿಸುತ್ತಾರೆ. ಮತ್ತು ಅಲ್ಲಿ ನೂರಾರೂ ಮಕ್ಕಳ ಕಿಲಕಿಲ ನಗು ತುಂಬುತ್ತದೆ; ಮಹಲು ಮಕ್ಕಳಿಗಾಗಿಯೇ ಎಂಬುದು ನನಗೆ ಬಹಳ ಸ್ಪಷ್ಟವಾಗಿದೆ."[2] ಇಲ್ಲಿ ಕಾದಂಬರಿಗಳಲ್ಲಿ ಅಡಕವಾಗಿರುವಬ ಅಂಶಗಳು ಮತ್ತು ಅರಮನೆಯ ಉಪಯೋಗ ಯಾರಿಗೆ ಆಗಬೇಕು ಎಂಬ ಸ್ಪಷ್ಟ ನುಡಿಗಳಿವೆ.

2. ಚಂದ್ರಶೇಖರ ಕಂಬಾರರ ದೇಶೀಯ ಚಿಂತನೆ – ಪುಟ 128

ಕಾದಂಬರಿಯಲ್ಲಿ ಓದುಗರ ಮನಸ್ಸನ್ನು ತೀವ್ರವಾಗಿ ಕಲಕುವುದು ಕಥೆಯ ನಾಯಕಿಯಾದ 'ಸಿಂಗಾರೆವ್ವ'ನ ಪಾತ್ರ. ಯಾವ ದೃಷ್ಟಿಕೋನದಿಂದ ನೋಡಿದರೂ ಇವಳೊಬ್ಬ ದುರಂತ ನಾಯಕಿಯಾಗಿ ಕಂಡುಬರುತ್ತಾಳೆ. ಸಿಂಗಾರೆವ್ವನ ಪಾತ್ರವನ್ನು ಯಾವುದೇ ಶ್ರೇಷ್ಠ ಕೃತಿಯ ದುರಂತ ಪಾತ್ರದೊಂದಿಗೆ ಹೋಲಿಸಬಹುದು. "ಸಿಂಗಾರೆವ್ವ ತುಂಬ ಮೃದು ಸ್ವಭಾವದವಳು. ಹೂವಿನಂಥ ಮನಸ್ಸಿನವಳು, ಯಾರಿಗೂ ನೋವುಂಟು ಮಾಡದವಳು, ತನ್ನ ಸುತ್ತಲು ಯಾರಾದರೂ ಸ್ವಲ್ಪ ವ್ಯಥೆಗೊಂಡರೂ ತಾನೂ ದುಃಖಿಸುವವಳು. ಆಕೆ ಮರ್‍ರ್ಯಾನ ಬಗ್ಗೆ ಕರುಣೆಗೊಳ್ಳಲು ಈ ಸ್ವಭಾವವೇ ಕಾರಣ. ಪ್ರತೀವರ್ಷ ಕೋಗಿಲೆಯ ಸ್ವರವನ್ನು ಅವಳೇ ಮೊದಲು ಕೇಳಬೇಕೆನ್ನುವುದು. ಕಿಟಕಿಯಿಂದ ಹುಣಸೇ ಮೆಳೆಯನ್ನು ನೋಡುವುದು, ತೋಟಕ್ಕೆ ಹೋದಾಗ ನಿಸರ್ಗದ ಹಸಿರಿನಲ್ಲಿ ಆನಂದಪಡುವುದು ಅವಳದು ಕವಿ ಹೃದಯ ಎನ್ನುವುದಕ್ಕೆ ಸಾಕ್ಷಿಯಾಗಿವೆ."

ಇಷ್ಟೆಲ್ಲಾ ಕೋಮಲ ವ್ಯಕ್ತಿತ್ವದ ಗಣಿಯಾದ ಸಿಂಗಾರೆವ್ವ ಜೀವನದುದ್ದಕ್ಕೂ ಅನುಭವಿಸಿದ್ದು ಹಿಂಸೆ ಯಾತನೆಗಳನ್ನು ಮಾತ್ರ. ಬಾಲ್ಯದಲ್ಲಿ ಅವಳಿಗೆ ದಾಂಪತ್ಯದ ಆಟವೆಂದರೆ ತುಂಬಾ ಖುಷಿ. ಶೀನಿಂಗವ್ವ ಗಂಡನಾಗಿ ತಾನು ಹೆಂಡತಿಯಾಗಿ ಹಲವು ಮಕ್ಕಳನ್ನು ಹೆತ್ತಂತೆ, ಅವುಗಳನ್ನು ಪ್ರೀತಿಯಿಂದ ಸಲಹಿದಂತೆ, ಗಂಡನ ಮುಂದೆ ಮಕ್ಕಳ ತಕರಾರು ಹೇಳಿದಂತೆ ಆಟವಾಡುವ ಸಿಂಗಾರೆವ್ವ ಮುಂದೆ ಸಹಜ ದಾಂಪತ್ಯ ಜೀವನದಿಂದ ವಂಚಿತಳಾಗುತ್ತಾಳೆ. ಮೊದಲ ಮದುವೆ ತಂದೆಯ ಅತಿಯಾದ ದುರಾಸೆಯಿಂದ ಹೆಣದೊಂದಿಗೆ ನಡೆದರೆ, ಎರಡನೇ ಮದುವೆ ಬೇಹೋಶ್ ಆಗುವ, ಕುಡುಕನಾದ ನಪುಂಸಕನಾದ ವರನೊಂದಿಗೆ ನಡೆಯುತ್ತದೆ. ಇಲ್ಲಿ ವರ ಜೀವಂತವಿದ್ದ ಎಂಬುದೇ ಅವಳಿಗೆ ನೆಮ್ಮದಿಯ ವಿಷಯ ಆದರೆ ಆತ ಬದುಕಿದ್ದರೂ ಜೀವಂತ ಶವದಂತ್ತಿದ್ದ.

ಸಿಂಗಾರೆವ್ವಳ ಮಕ್ಕಳಾಗಬೇಕೆಂಬ ಮಾನಸಿಕ ತುಡಿತ ಅವಳು ನಂಜಿಯ ಬಸಿರು ಹೊಟ್ಟೆಯನ್ನು ಮುಟ್ಟಿ ನೋಡುವಲ್ಲಿ, ಕಪಿಲೆ ಎಂಬ ಹಸು ಕರು ಹಾಕಿದಾಗಿನ ಅವಳ ಸಂಭ್ರಮದಲ್ಲಿ ವ್ಯಕ್ತವಾಗಿದೆ. ಸಿಂಗಾರೆವ್ವ ಅರಮನೆಗೆ ದೊರೆಸಾನಿಯಾಗಿ ಪ್ರವೇಶಿಸಿದಾಗ ಅದು ಅವ್ಯವಸ್ಥೆಯ ಆಗರವಾಗಿತ್ತು. ತನ್ನ ಜಾಣತನದಿಂದ ಅದನ್ನು ವ್ಯವಸ್ಥೆಗೊಳಿಸಿ ನಿಜವಾದ ದೊರೆಸಾನಿ ಎನಿಸಿದಳು. ತನ್ನ ಗಂಡನಿಂದ ದೊರೆಯಬೇಕಾದ ದಾಂಪತ್ಯ ಸುಖ ಗಗನ ಕುಸುಮ ಎನಿಸಿದಾಗ ಮೊದಲಿನ ಲವಲವಿಕೆ ಕಳೆದುಕೊಂಡು ಗಂಭೀರೆಯಾಗುತ್ತಾ ಹೆಚ್ಚು ಏಕಾಂಗಿಯಂತಿರಲು ಬಯಸುತ್ತಾಳೆ. ನಂತರದಲ್ಲಾಗುವ ಮರ್‍ರ್ಯಾನ ಪ್ರವೇಶ ಸಿಂಗಾರೆವ್ವನ ಜೀವನದ ಹಲವು ಆಯಾಮಗಳಿಗೆ ಕಾರಣವಾಗುತ್ತದೆ. ಅವನ ಬಲತ್ಕಾರ ಅವಳಲ್ಲಿಯ ರತಿಭಾವವನ್ನು ಉದ್ದೀಪನಗೊಳಿಸುವುದರ

ಜತೆಗೆ ಆಘಾತ–ಭಯಗಳನ್ನು ಅವಳಲ್ಲಿ ಹುಟ್ಟಿಸುತ್ತದೆ. ಆತನೊಂದಿಗಿನ ಸಂಬಂಧದಿಂದಾಗಿ ತಾನು ಗರ್ಭಿಣಿಯಾದಾಗ ತನ್ನ ಮನಸ್ಸಿನ ಹೊಯ್ದಾಟಗಳಿಗೆ ಪೂರ್ಣ ವಿರಾಮ ಹಾಕುತ್ತಾಳೆ.

ಕಾದಂಬರಿಯಲ್ಲಿ ಬಹಳ ಮುಖ್ಯವಾದ ಪಾತ್ರ ಮರ್‍ಯಾನದು ಈತನಲ್ಲಿ ಎರಡು ವ್ಯಕ್ತಿತ್ವಗಳು ಮನೆ ಮಾಡಿಕೊಂಡಿವೆ. ಒಂದು ಗೌಡನ ಮೇಲಿನ ದ್ವೇಷದಿಂದ ಸೇಡು ತೀರಿಸಿಕೊಳ್ಳಲು ಸಿಂಗಾರೆವ್ವನ ಬೆನ್ನು ಹತ್ತುವುದು, ಮತ್ತೊಂದು ಆತನ ಮನಸ್ಸಿನಲ್ಲಿರುವ ಸಿಂಗಾರೆವ್ವನ ಮೇಲಿನ ಅದಮ್ಯ ಪ್ರೀತಿ ಮರ್‍ಯಾ ದರಿದ್ರದವನಂತೆ ತಾಯಿಯನ್ನೇ ಕೊಂದರೂ ಕಟುಕನಂತೆ ಕಾದಂಬರಿಯಲ್ಲೆಲ್ಲೂ ಕಾಣುವುದಿಲ್ಲ. ಮದುವೆಗೆ ಮೊದಲು, ನಂತರ ಗಂಡನ ಮನೆಗೆ ಹೋದಾಗಲೂ ಆಕೆಗೊದಗಿದ ಅಸಹಾಯಕತೆಯ ಪೂರ್ಣ ಪ್ರಯೋಜನ ಪಡೆದುಕೊಂಡ ಮರ್‍ಯಾ ತನ್ನ ತೃಷೆಯನ್ನು ತೀರಿಸಿಕೊಳ್ಳುತ್ತಾನೆ. ಗೌಡನ ಮೇಲಿನ ದ್ವೇಷದಿಂದಲೇ ಆತ ಸಿಂಗಾರೆವ್ವನ ಬೆನ್ನು ಹತ್ತಿದನೆಂಬುದಕ್ಕೆ ಕುಮುದವ್ವನ ಗುಡಿಯಲ್ಲಿ ಸಿಂಗಾರೆವ್ವ ಸಿಕ್ಕಿ ಬಿದ್ದಾಗ ಅವಳನ್ನು ಹಸಿದ ನಾಯಿಯಂತೆ ನೆಕ್ಕುವ ಮರ್‍ಯಾ ಆಕೆ ಕಿರುಚಿದಾಗ "ಕಂಡಿರಾ ಗೌಡನ" ಎಂದು ಪ್ರಶ್ನಿಸುವುದರಿಂದ ರುಜುವಾತಾಗುತ್ತದೆ.

ಹಾಗೆಯೇ ಮರ್‍ಯಾ ಸಿಂಗಾರೆವ್ವಳನ್ನು ಭೇಟಿಯಾಗದಿದ್ದಾಗ ಚಡಪಡಿಸುವುದು ಅವಳು ವಿಧವೆಯಾದಾಗ ತಾನು ಆಳು ಮೋರೆ ಮಾಡಿಕೊಳ್ಳುವುದು. ಅವಳಿಗೆ ಆರೋಗ್ಯ ಹದಗೆಟ್ಟಾಗ ಇಣಚಿಯನ್ನು ತಂದುಕೊಡುವುದು, ಅರಮನೆ ಪರಮಶೆಟ್ಟಿ ಪಾಲಾಗದಂತೆ ಎಚ್ಚರ ವಹಿಸುವುದು. ಕೊನೆಗೆ ಸಿಂಗಾರೆವ್ವ ಸತ್ತಾಗ ಸರ್ಪವನ್ನೇ ಸಿಂಗಾರೆವ್ವಳೆಂದು ಭ್ರಮಿಸಿ ಕಚ್ಚಿಸಿಕೊಂಡು ಸಾಯುವುದು ಸಿಂಗಾರೆವ್ವನ ಮೇಲಿನ ಪ್ರೀತಿಯ ಗಾಢತೆಯನ್ನು ತೋರಿಸುತ್ತದೆ. ಆದರೆ ಆತನ ಪ್ರೀತಿ ವ್ಯಕ್ತವಾಗಿದ್ದು ಮಾತ್ರ ಒರಟಾಗಿಯೇ ಸಿಂಗಾರೆವ್ವನ ಸಹವಾಸದಿಂದಾಗಿ ಕಲ್ಲಿನಂತಿದ್ದ ಮರ್‍ಯಾನ ಹೃದಯ ಸುಂದರ ಶಿಲೆಯಂತಾಗುತ್ತದೆ.

"ಸರಗಂ ದೇಸಾಯಿ" ತನ್ನ ಚಟಗಳಿಂದಲೇ ದುರಂತವನ್ನು ಕಂಡವನು ಸಿಂಗಾರೆವ್ವನ ಎರಡನೇ ಗಂಡನಾದ ಈತ ವಾಸ್ತವವಾಗಿ ಶಿವಾಪುರ ಅರಮನೆಯ ವಂಶದ ಕೊನೆಯ ಪಾಳೇಗಾರ ತನ್ನ ಬಯಲಾಟದ ಆಸೆಗೆ ದುಂದು ಖರ್ಚಿಗೆ ತನ್ನ ವಂಶದ ಆಸ್ತಿಯನ್ನು ಸ್ವಲ್ಪ ಸ್ವಲ್ಪವಾಗೇ ಮಾರುತ್ತಾ ಬದುಕಿದವನು ಆದರೆ ಈತನಿಗೆ ತಾನೊಬ್ಬ ಕಲಾವಿದನೆಂಬ ಹೆಮ್ಮೆ ಇತ್ತು. ಹೆಣ್ಣಿನ ಪಾತ್ರ ಮಾಡಲು ಲಾಯಕ್ಕಾಗಿದ್ದರೂ ದೇಶಗತಿಯ ಅಹಂಕಾರವನ್ನು ಪ್ರದರ್ಶಿಸಲು ಸದಾ ರಾಜನ ಪಾತ್ರವನ್ನು ಮಾಡುತ್ತಿದ್ದ. ಈತನ ವ್ಯಕ್ತಿತ್ವ ಕುರಿತು ಶೀನಿಂಗವ್ವ ಈ ರೀತಿ ಹೇಳುತ್ತಾಳೆ:

"ತಾನು ದೇಸಾಯಿಯೆಂಬ ಈ ಅರಮನೆಯ ಯಜಮಾನನೆಂಬ ಒಂದು ಕಾಲದ ವೈಭವಕ್ಕೆ ತಾನು ಮಾಲೀಕನೆಂಬ ಹೆಮ್ಮೆ ಇವನ ಒಳಗೊಳಗೆ ಇತ್ತು. ಸಾಧ್ಯವಿದ್ದರೆ ಅದನ್ನು ಚಲಾಯಿಸಲು ಈಗಲೂ ಸಿದ್ಧನೇ. ಆದರೆ ಅದರ ಪ್ರಭಾವದಿಂದ ಏನನ್ನೂ ಸಾಧಿಸಲಿಕ್ಕೆ ಆಗುವುದಿಲ್ಲ ಎಂಬ ಕೊರಗು ಮಾತ್ರ ಅವನ ಮುಖದಲ್ಲಿ ಕಾಣುತ್ತಿತ್ತು. ಹೀಗಾಗಿ ಚಲಾವಣೆ ಇಲ್ಲದ ನಾಣ್ಯಗಳ ದೊಡ್ಡ ನಿಧಿಯ ಯಜಮಾನನಂತಿದ್ದ".[3] ತನ್ನ ವಂಶದ ಹಿಂದಿನವರ ಗುಣಗಳನ್ನಲ್ಲದಿದ್ದರೂ ಅವರ ರೋಗವನ್ನು ತನ್ನ ಜೊತೆಗೆ ಹೊತ್ತು ತಂದವನು ಈ ದೇಸಾಯಿ ಎನ್ನುತ್ತಾರೆ ಲೇಖಕರು.

ದೇಸಾಯಿಯ ಈ ರೋಗವೇ ಆತ ಸಿಂಗಾರೆವ್ವನ ಬಗೆಗಿನ ತನ್ನ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ವಿಫಲನಾಗಲೂ ಕಾರಣ. ಗಂಡ ಹೆಂಡತಿಗೆ ತೋರುವ ಕನಿಷ್ಠ ಕಾಳಜಿಯನ್ನೂ ದೇಸಾಯಿ ತೋರಲಿಲ್ಲ. ತನ್ನ ದೌರ್ಬಲ್ಯಗಳಿಂದಾಗಿಯೇ ದೇಸಾಯಿ ಶೆಟ್ಟಿಯ ಆಮಿಷಗಳಿಗೆ ಒಳಗಾಗಿ ಅರಮನೆಯ ಹರಾಜಿಗೂ ಸಿದ್ಧನಾಗುತ್ತಾನೆ. ಹಾಗೆಯೇ ಮರ್‍ಯಾನ ಆಮಿಷಕ್ಕೂ ಒಳಗಾಗುತ್ತಾನೆ. ಅರಮನೆಯಂತೆ ಸಿಂಗಾರೆವ್ವ ಕೂಡಾ ದೇಸಾಯಿಗೆ ಅಭಿನಯದ ವಸ್ತು. ಹಾಗಾಗಿಯೇ ಫೌಜುದಾರ ದೊರೆಸಾನಿಯನ್ನು ಕರೆಸಬೇಕೆಂದಾಗ ಪ್ರತಿಭಟಿಸುತ್ತಾನೆ. ಹೀಗಾಗಿ ದೊರೆಸಾನಿ ತನಗಲ್ಲದೆ ಬೇರೆಯವರಿಗೆ ಬಸಿರಾದುದನ್ನು ಕಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ದೇಸಾಯಿ ದೊಡ್ಡ ಮನೆತನದಲ್ಲಿ ಹುಟ್ಟಿದ ನರ ದೌರ್ಬಲ್ಯನಾದರೂ ಉದಾತ್ತ ಮನುಷ್ಯನನ್ನಾಗಿ ಕಂಬಾರರು ಚಿತ್ರಿಸಿದ್ದಾರೆ. ತನ್ನ ಹೆಂಡತಿ ಸಿಂಗಾರೆವ್ವಳ ಮೇಲಿನ ಪ್ರೀತಿಯಿಂದ ಪೋಲೀಸರು ಬಂದಾಗ ಮಾವನಿಗೆ ಘರ್ಜಿಸುತ್ತಾನೆ. "ಖಬರ್‌ದಾರ್, ಮಾವನವರ ಅವರು ನಿಮ್ಮ ಮಗಳಾಗಿರಬಹುದು. ಆದರೆ ಅವರು ಈ ಅರಮನೆಯ ದೊರೆಸಾನಿ. ದೊರೆಸಾನಿಯವರ ಮಾತು ಇನ್ನೊಮ್ಮೆ ಈ ಮಂದ್ಯಾಗ ಎತ್ತಿದರ.... ನಿಮಗೆ ಏನೇನೋ ಅಂದರ ಏನೇನೋ ಹೇಳಬೇಕಾಗತದ ನಮ್ಮ ಅರಮನ್ಯಾಗ ಏನ ಆದರೂ ನೋಡಿಕೊಳ್ಳಾಕ ನಾವಿದ್ದೀವಿ. ನಿಮಗ್ಯಾರ ಸಹಾಯ ಬೇಕಿಲ್ಲ"[4] ಎಂಬ ಮಾತುಗಳಲ್ಲಿ ಆ ಪ್ರೀತಿ ವ್ಯಕ್ತವಾಗಿದೆ ಇದಲ್ಲದೆ ಮತ್ತೊಂದು ಸನ್ನಿವೇಶದಲ್ಲೂ ದೇಸಾಯಿಯ ಉದಾರ ವ್ಯಕ್ತಿತ್ವ ಬಿಂಬಿತವಾಗಿದೆ. ತನ್ನ ತಾಯಿ ಸತ್ತ ನಂತರ ಆಕೆಯ ದಿವಸದ ಕಾರ್ಯಕ್ಕಾಗಿ ಬಂಗಾರದ ಬಳೆಗಳನ್ನು ಅಡವಿಟ್ಟು ತಂದಿದ್ದ ಹಣವನ್ನು ಊರಿನ ಪಂಚರು ಬಂದು ಹುಚ್ಚಯ್ಯನ ಸಮಾಧಿ ಕಟ್ಟಿಸುತ್ತೇವೆ ಎಂದಾಗ ಉದಾರವಾಗಿ ದಾನ ಮಾಡಿದ. ಕಾರಣ ಆತನಿಗೆ ದೇಸಗತಿಯ ಹಿರಿಮೆ ಕಾಪಾಡುವುದು ಮುಖ್ಯವಾಗಿತ್ತು. ಆದರೂ ಈತ ತನ್ನ ದೌರ್ಬಲ್ಯ, ಅಸಹಾಯಕತೆಗಳಿಂದಲೇ ನರಳಿ ದುರಂತವನ್ನು ಕಾಣುತ್ತಾನೆ.

---

3. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ – ಪುಟ 24
4. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ – ಪುಟ 113

ನಂದಗಾವಿಯ ಗೌಡನಾದ ಪಂಡರೀಗೌಡ ಸಿಂಗಾರೆವ್ವಳ ತಂದೆ. ಈತ ಕೊಳಕು ಮನಸ್ಸಿನ, ಅತಿಯಾಸೆ ಹೊಂದಿದ ವ್ಯಕ್ತಿ. ತನ್ನ ಸ್ವಾರ್ಥಕ್ಕಾಗಿ ತನ್ನ ಒಬ್ಬಳೇ ಮಗಳಾದ ಸಿಂಗಾರೆವ್ವನ ಇಡೀ ಬದುಕನ್ನು ದುರಂತಕ್ಕೆ ಈಡುಮಾಡಿದನು. ಆಸ್ತಿಯಾಸೆಯಿಂದ ಸಿಂಗಾರೆವ್ವನಿಗೆ ಮೊದಲು ತನ್ನ ತಂಗಿಯ ಮಗನ ಹೆಣದೊಂದಿಗೆ ಮದುವೆ ಮಾಡುತ್ತಾನೆ. ಎರಡನೆಯ ಮದುವೆಯನ್ನು ಕೂಡ ದೇಸಾಯಿ ಬಹುಬೇಗ ಸಾಯುತ್ತಾನೆ ಆಸ್ತಿ ತನ್ನದಾಗುತ್ತದೆ ಎಂಬ ನಂಬಿಕೆಯಿಂದಲೇ ರೋಗಗ್ರಸ್ಥನಾದ ಸರಗಂ ದೇಸಾಯಿಯೊಂದಿಗೆ ಮಾಡುತ್ತಾನೆ. ಆದರೆ ಆತನಿಗೆ ಈ ಆಸೆ ಮಾತ್ರ ನಿರಾಸೆಯಾಯಿತು. ಹಾಗಾಗಿ ದೇಸಾಯಿ ಸಾಯಲಿಲ್ಲ. ಮಕ್ಕಳು ಆಗಲಿಲ್ಲ ಮುಂದೆ ಆಗುವುದು ಸಾಧ್ಯವಿಲ್ಲವೆಂಬುದನ್ನು ತಿಳಿದು ತನಗೆ ಹೊಸದಾಗಿ ಹುಟ್ಟಿದ ಮಗನಿಗೆ ಆಸ್ತಿ ಮಾಡಲಿ ಎಂಬ ಆಸೆಯಿಂದ ತನ್ನ ಮಗನನ್ನು ದತ್ತು ತೆಗೆದುಕೊಳ್ಳುವಂತೆ ಹೇಳುತ್ತಾನೆ. ಆದರೆ ಸಿಂಗಾರೆವ್ವ ಅದನ್ನು ನಿರಾಕರಿಸಿ ಪ್ರತಿಭಟಿಸುತ್ತಾಳೆ.

ಹೇಗಾದರೂ ಮಾಡಿ ಮಕ್ಕಳನ್ನು ಪಡೆದು ಗೌಡನಿಗೆ ನಿರಾಸೆ ಮಾಡಬೇಕೆಂದು ಸಿಂಗಾರೆವ್ವ ಹಠ ಮಾಡುತ್ತಾಳೆ. ಆಗಾಗ ಕರೆಯದಿದ್ದರೂ ಅರಮನೆಗೆ ಬರುವ ಗೌಡ, ಮಗಳ ಈ ಹಠ ಇನ್ನೂ ದೃಢವಾಗಲು ಕಾರಣನಾಗುತ್ತಾನೆ. ಗೌಡನಲ್ಲಿ ಎಳ್ಳಷ್ಟಾದರೂ ಮಾನವೀಯತೆ, ಮಗಳೆಂಬ ಮಮಕಾರವಿದ್ದಿದ್ದರೆ ಸಿಂಗಾರೆವ್ವನ ಇಡೀ ಜೀವನ ದುರಂತವೇ ಆಗುತ್ತಿರಲಿಲ್ಲ ಎನಿಸುತ್ತದೆ. ಮರ್‍ಯಾನ ಹೊಲವನ್ನು ದೋಚಿ ಅವನ ತಾಯಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡು ಅವಳ ಸಾವಿಗೆ ಕಾರಣವಾದುದಲ್ಲದೆ ಮುಂದೆ ಮರ್‍ಯಾನೊಂದಿಗೆ ದ್ವೇಷ ಸಾಧಿಸಲು ಹೋಗಿ ಕೊಲೆಯಾಗಿತ್ತಾನೆ.

ಪಂಡರೀಗೌಡನ ವ್ಯಕ್ತಿತ್ವ ಕುರಿತು ಶೀನಿಂಗವ್ವ ಹೀಗೆ ಹೇಳುತ್ತಾಳೆ. "ಗೌಡ ದಪ್ಪ ಹೊಟ್ಟೆಯ ಅಷ್ಟೇನೂ ಎತ್ತರವಲ್ಲದ ಅಸಾಮಿ. ಪುಟ್ಟ ಕಾಲುಗಳು. ಬೊಜ್ಜು ತುಂಬಿಕೊಂಡು ಬೆವರು ಸುರಿಸುವ ಕೈ, ಕೊರೆದಂತಿರುವ ಮೀಸೆ. ಅವನ ಚಿಕ್ಕ ಚಂಚಲ ಕಣ್ಣು ಬಹಳ ಹೊತ್ತು ಒಂದು ವಸ್ತುವಿನ ಮೇಲೆ ಕೂರುತ್ತಲೇ ಇರಲಿಲ್ಲ. ಅವನು ಯಾವಾಗಲೂ ವಿಚಾರ ಮಾಡುತ್ತಿದ್ದುದು ಒಂದೇ. ಯಾರ ಬಳಿ ತುಪ್ಪ ಇದೇ? ಮತ್ತು ಆ ತುಪ್ಪದಲ್ಲಿ ತನ್ನ ರೊಟ್ಟಿಗೆ ಹ್ಯಾಗೆ ಜಾರಿ ಬೀಳಬೇಕು? ಹಾಗೆ ಜಾರಿ ಬೀಳದಿದ್ದರೆ ಆ ತುಪ್ಪವನ್ನು ಹೇಗೆ ಅಪಹರಿಸಬೇಕು? ಅದೊಮ್ಮೆ ಗೊತ್ತದರಾಯ್ತು ಖಂಡಿತ ಅದರಲ್ಲಿ ಯಶಸ್ಸು ಗಳಿಸುತ್ತಿದ್ದ ಅದಕ್ಕೆ ಅವನು ತನ್ನ ಅದೃಷ್ಟದಲ್ಲಿ ಭಾರೀ ನಂಬಿಕೆಯಿಟ್ಟಿದ್ದ...ಇಷ್ಟು ತಿಳಿಯಪ್ಪ; ನರ ಮನುಷ್ಯನಿಗೆ ಹಣಬೇಕು; ಆಸ್ತಿಬೇಕು ಮತ್ತು ಅದಕ್ಕಾಗಿ ಎಂಥ ಹೀನ ಕೆಲಸ ಮಾಡಿದರೂ, ಕೊಂದರೂ ತಪ್ಪಿಲ್ಲ ಎನ್ನುವುದು ಆತ ಒಳಗೊಳಗೇ ನಂಬಿದ್ದ

ಸಿದ್ಧಾಂತವಾಗಿತ್ತು........"[5] ಶೀನಿಂಗವ್ವನ ಈ ಮಾತುಗಳು ಕಥೆಯಲ್ಲಿಯ ಅವನ ಮೇಲಿನ ಮಾತುಗಳನ್ನೇ ಸಮರ್ಥಿಸುತ್ತವೆ.

ಕಾದಂಬರಿಯಲ್ಲಿ ಬರುವ ಅರಮನೆ ಮತ್ತು ಹುಣಸೇಮೆಳೆ ಎರಡು ಪ್ರಮುಖವಾದವುಗಳಾಗಿವೆ. ಈ ಎರಡು ಪರಿಸರಗಳ ಬಗ್ಗೆ ಕಾದಂಬರಿಕಾರರಿಗೆ ನೇರವಾದ ಅನುಭವವಿರುವುದರಿಂದ ಕಾದಂಬರಿಯಲ್ಲಿ ವಿಶಿಷ್ಟವಾಗಿ ಮೂಡಿ ಬಂದಿವೆ. "ಇಲ್ಲಿಯ ಅರಮನೆಯ ಪಾತ್ರ ತುಂಬಾ ವಿಚಿತ್ರವಾದದ್ದು. ಪ್ರಾರಂಭದಲ್ಲಿ ಜಂಗಮರ ಶಾಪಕ್ಕೆ ಈಡಾಗಿ, ದೇಸಾಯಿಯರ ಆಳ್ವಿಕೆಯ ಸ್ಥಳವಾಗಿ ತನ್ನಲ್ಲಿ ನಡೆಯುವ ಎಲ್ಲಾ ಘಟನೆಗಳಿಗೆ ಕೇಂದ್ರವಾಗಿ, ಸಾಕ್ಷಿಯಾಗಿ ಕೊನೆಗೆ ಹೈಸ್ಕೂಲಾಗಿ ಪರಿವರ್ತನೆ ಹೊಂದುವ ತನಕ ಬೆಳೆಯುತ್ತದೆ. ಈ ಅರಮನೆ ಶಿವಾಪುರದಲ್ಲಿದ್ದರೂ ಆ ಊರಿನ ಪ್ರತಿಕ್ರಿಯೆಗಳು ಮಾತ್ರ ಬರುತ್ತವೆ. ಹೀಗಾಗಿ ಅರಮನೆ ಮತ್ತು ಆ ಅರಮನೆಗೆ ಬಂದ ಕೊನೆಯ ಸೊಸೆ ಸಿಂಗಾರೆವ್ವಳ ಕಥೆಯೇ ಇಲ್ಲಿ ಪ್ರಧಾನವಾಗಿದೆ."[6] ಈ ಅರಮನೆಯೊಳಗಿನ ನಿಗೂಢ ಬದುಕಿನ ಅನಾವರಣವೇ ಕಾದಂಬರಿಯಲ್ಲಿದೆ.

ಕಾದಂಬರಿಯಲ್ಲಿ ಅರಮನೆ ಊಳಿಗಮಾನ್ಯ ವ್ಯವಸ್ಥೆಯ ಕುರುಹಾಗಿರುವಂತೆ, ಕಾದಂಬರಿಕಾರರೇ ಹೇಳುವ ಹಾಗೆ ತನ್ನ ಮಡಿಲಲ್ಲಿ ಅನೇಕ ನಿಗೂಢವಾದ ಸತ್ಯಗಳನ್ನು ಹೊಂದಿರುವ ರಹಸ್ಯದ ತಾಣವಾಗಿದೆ. ಇದು ಶಿವಾಪುರದಲ್ಲಿನ ಸಮಾಜದ ಶ್ರೇಣಿಕೃತ ವ್ಯವಸ್ಥೆಯ ಮುಖವಾಡವನ್ನು ತೋರಿಸುತ್ತದೆ. ಶ್ರೀಮಂತಿಕೆಯ ಪ್ರತೀಕವಾಗಿ ಅರಮನೆ ಗೋಚರವಾದರೆ ಮಣ್ಣಿನ ಮನೆಗಳು ನಿರ್ಲಕ್ಷತೆಯ ಪ್ರತೀಕಗಳಾಗಿವೆ.

ಕಾದಂಬರಿಯಲ್ಲಿ ಓದುಗರನ್ನು ಹೆಚ್ಚು ಆಕರ್ಷಿಸುವುದು ಶಿವಾಪುರದ ಪಶ್ಚಿಮಕ್ಕಿರುವ ಕುಮುದವ್ವನ ಗುಡಿಯ ಪಕ್ಕದಲ್ಲಿರುವ ಹುಣಸೇಮೆಳೆ ಈ ಮೆಳೆ ಕೂಡ ನಿಗೂಢತೆಯ ಕೇಂದ್ರವಾಗಿದೆ. ಸಾವಿರಾರು ಮರಗಳಿಂದ ಕೂಡಿದ ಬೃಹತ್ ಪರಿಸರ ಭಯವನ್ನುಂಟು ಮಾಡುವ ಶಕ್ತಿಯನ್ನು ಹೊಂದಿದೆ. ಲೇಖಕರು ಇದು ಎಲ್ಲರ ಆಕರ್ಷಣೆಯ ಕೇಂದ್ರವೆಂದು ವಿವರಿಸುತ್ತಾರೆ.

"ನೀವು ನಮ್ಮೂರಿಗೆ ಬಂದರೆ ಈ ಮೆಳೆ ನಿಮ್ಮನ್ನು ಆಕರ್ಷಿಸದೇ ಇರುವುದು ಸಾಧ್ಯವೇ ಇಲ್ಲ. ಯಾಕೆಂದರೆ ಸುತ್ತ ಬೋಳು ಬೋಳಾದ ಬಯಲಿನಲ್ಲಿ ಹಸಿರೆಂಬೋದು ಒಟ್ಟಾಗಿ ಕಾಣೋದು ಅಲ್ಲಿಯೇ ಒಮ್ಮೆ ಆ ಮೆಳೆಯನ್ನು ಪ್ರವೇಶಿಸಿರೋ ನಿಮ್ಮ ಆಯಾಸ ದಣಿವುಗಳು ಪರಿಹಾರವಾಗಿ ಅಲ್ಲಿಯ ವಿಚಿತ್ರ ಗುಂಭಶಾಂತಿ ನಿಮ್ಮ ಸಹಜ ಇಂದ್ರಿಯಗಳ ಮುಚ್ಚಿ, ತನ್ನ ಸೌಂದರ್ಯವನ್ನು ಆಸ್ವಾಧಿಸುವಂಥ ಹೊಸ ಇಂದ್ರಿಯಗಳನ್ನು ಸೃಷ್ಟಿಸುತ್ತದೆ. ನೀವು ನಿಂತಲ್ಲಿ

5. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ – ಪುಟ 17
6. ಕಮಲ ಹಂಪನರವರ ಲೇ. ಸಿಂಗಾರೆವ್ವ ಮತ್ತ ಅರಮನೆ–ಶಿವಪುರ ಕಂಬಾರರ ನಮಸ್ಕಾರ – ಸಂಪಾದಕರು ಜಯಪ್ರಕಾಶ್ ಮಾವಿನಕುಳಿ – ಪುಟ 138

ಬಿಸಿಲಿಲ್ಲ. ಆದರೆ ಮರಗಳ ತುದಿಯಲ್ಲಿ ಬಿಸಿಲು ಬಂಗಾರ ಬಣ್ಣದ ಕ್ಷಿತಿಜಗಳನ್ನು ಕೊರೆಯುತ್ತದೆ. ಈ ಹೊಸ ಕ್ಷಿತಿಜ ಗಾಳಿಯ ಮರ ಅಲುಗಾಡುತ್ತಲ್ಲ ಆದರಿಂದ ಮರದಿಂದ ಮರಕ್ಕೆ ನೆಗೆಯತೊಡಗುತ್ತದೆ. ಕಣ್ಣರಳಿಸಿ ನಿಂತ ನೀವು ಹೊರಗಿನಿಂದ ಸಂಬಂಧ ಕಡಿದುಕೊಂಡು ಈಗ ಪೂರ್ತಿ ಮೆಳೆಯ ವಶವಾಗುತ್ತೀರಿ"[7] ಎಂದು ಲೇಖಕರು ನೀಡುವ ಮೆಳೆಯ ವಿವರಣೆ ಮೆಳೆಯ ಸುಂದರವಾದ ಚಿತ್ರಣವನ್ನು ನೀಡುವುದರ ಜೊತೆಗೆ ಆ ಸುಂದರ ಜಗತ್ತು ಹೊಂದಿರುವ ಭಯಂಕರತೆಯನ್ನು ತಿಳಿಸುತ್ತದೆ.

ಈ ಹುಣಸೇ ಮೆಳೆಯನ್ನು ನೋಡಿದವರಿಗೆಲ್ಲರಿಗೂ ಒಂದೊಂದು ರೀತಿಯಲ್ಲಿ ಕಾಣುತ್ತವೆ. ಕೆಲವರಿಗೆ ಭಯಂಕರವಾಗಿ ಕಂಡರೆ ಮತ್ತೆ ಕೆಲವರಿಗೆ ಆಕರ್ಷಣೀಯವಾಗಿ ಕಾಣುತ್ತದೆ. ಇಡೀ ಭಾಗದ ದೆವ್ವ ಪಿಶಾಚಿಗಳೆಲ್ಲಾ ಈ ಮೆಳೆಯಲ್ಲೇ ವಾಸ ಮಾಡುತ್ತಿದ್ದರೂ ಸಿಂಗಾರೆವ್ವನಿಗೆ ಈ ಮೆಳೆ ಆಕರ್ಷಣೀಯವಾಗಿ, ಚೆಂದಾಗಿ ಕಾಣುತ್ತದೆ. ಹೀಗೆ ಒಬ್ಬೊಬ್ಬರಿಗೊಂದೊಂದು ಥರ ಕಾಣುವುದೂ ಕುಮುದವ್ವನ ಮಹಿಮೆಯೇ ಇರಬೇಕು ಎನ್ನುತ್ತಾರೆ ಲೇಖಕರು. ಹೀಗೆ ನಿಗೂಢವಾಗಿ ಕಾಣುವ ಭಯಂಕರ ವರ್ಣನೆಯನ್ನು ಕಾದಂಬರಿಕಾರರು ಅದ್ಭುತವಾಗಿ ಚಿತ್ರಿಸಿದ್ದಾರೆ.

ಕುಮುದವ್ವ ಶಿವಾಪುರದ ಗ್ರಾಮದೇವತೆ. ಕುಮುದವ್ವನ ಮೂರ್ತಿ ವಿಚಿತ್ರವಾಗಿದೆ. ಕುಮುದವ್ವ ಎಂದರೆ ತೊಡೆಗೀಸಿ ಕುಳಿತ ಬೆತ್ತಲೆ ಹೆಣ್ಣಿನ ಮೂರ್ತಿ ಇದಕ್ಕೆ ತಲೆಯಿಲ್ಲ ಬದಲಾಗಿ ತಲೆಯ ಭಾಗದಲ್ಲಿ ಅರಳಿದ ಕಮಲವಿದೆ. ಎರಡೂ ಕೈಗಳಲ್ಲಿ ಕಮಲಗಳಿವೆ ಹೀಗೆ ವಿಚಿತ್ರವಾಗಿರುವ ಕುಮುದವ್ವನ ಸಂಕೇತವನ್ನು ಕಾದಂಬರಿಯ ಮುಖ್ಯ ಆಶಯವನ್ನು ಸ್ಥಾಪಿಸುವಲ್ಲಿ ಪ್ರಧಾನವಾಗಿ ತೆಗೆದುಕೊಳ್ಳಬೇಕು. ನಿಗೂಢವಾದ ಹುಣಸೇಮೆಳೆಯ ಮಧ್ಯದಲ್ಲೇ ಈ ಗುಡಿ ಇರುವುದು. ಹುಣಸೇಮೆಳೆಯಲ್ಲಿ ಅಪಿತಂತಿರುವ ಈ ಗುಡಿಯ ವಿಚಿತ್ರಗಳನ್ನು ಲೇಖಕರು ಕಾದಂಬರಿಯಲ್ಲಿ ವಿವರಿಸುತ್ತಾರೆ. ಈ ಗುಡಿಯ ವೈಶಿಷ್ಟ್ಯತೆಯೆಂದರೆ ಕುಮುದವ್ವನ ಗುಡಿಗೆ ಹೆಂಗಸರ ಪ್ರವೇಶ ನಿಷಿದ್ಧ. ಇದು ಗುಡಿಯ ನಿಗೂಢತೆಯನ್ನು ಸೂಚಿಸುತ್ತದೆ. ಹೆಂಗಸರು ಹರಕೆ ಹೊತ್ತರೂ, ಬೇಡಿಕೊಂಡರೂ ಸೇವೆ ಸಲ್ಲಿಸುವುದು ಮಾತ್ರ ಗಂಡಸರ ಮೂಲಕವೇ. ಹಾಗೆಯೆ ಇಲ್ಲಿಗೆ ಸಲ್ಲಿಸುವ ಹರಕೆ ಸ್ವಂತದ್ದಾಗಿರಬಾರದು ಬದಲಿಗೆ ಯಾರಿಗೂ ತಿಳಿಯದ ಹಾಗೆ ಜಾತ್ರೆಯಿಂದ ಕದ್ದು ತಂದದ್ದಾಗಿರಬಹುದು. ಈ ಜನ ಕದಿಯುವುದು ಯಾರಿಗೂ ತಿಳಿಯದಿರುವುದು ಇಲ್ಲಿನ ಮತ್ತೊಂದು ವಿಚಿತ್ರ. ಆದರೆ ತಮ್ಮ ಊರಿನಲ್ಲಿ ಕಳ್ಳತನ ಮಾಡಬಾರದೆಂಬ ನಿರ್ಬಂಧ ಇದೆ. ಒಳ ಅರ್ಥದಲ್ಲಿ ಈ ಪದ್ದತಿ ದೇಸಗತಿಯ ರಕ್ಷಣೆಗಾಗಿ ಆಚರಿಸಿಕೊಂಡು ಬಂದ ಪದ್ದತಿಯಾಗಿ ಕಾಣಿಸುತ್ತದೆ.

7. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ – ಪುಟ 149

ಕಾದಂಬರಿಯಲ್ಲಿ ಶೀನಿಂಗವ್ವ ನಿರೂಪಕಿಯಾಗಿರುವಂತೆ ಪಾತ್ರವೂ ಆಗಿದ್ದವಳು. ಇವಳು ಸಿಂಗಾರೆವ್ವನ ನೆರಳಿನಂತೆ ಕಾದಂಬರಿಯಲ್ಲಿ ಚಿತ್ರಿತವಾಗಿದ್ದಾಳೆ ಶೀನಿಂಗವ್ವ ಸಿಂಗಾರೆವ್ವನ ಜೀವನದ ಹೊಳಹುಗಳನ್ನು ಬಿಚ್ಚಿಡುತ್ತಾಳೆ. ಆದರೆ ಸ್ವತಃ ಶೀನಿಂಗವ್ವನ ವೈಯಕ್ತಿಕ ವಿಷಯ ಅಭಿವ್ಯಕ್ತಗೊಳ್ಳುವುದು. ಅವಳು ಮರ್‍ಯಾನನ್ನು ಕೊಟ್ಟಿಗೆಯಲ್ಲಿ ಭೇಟಿಯಾದ ಸಂದರ್ಭದಲ್ಲಿ ಮಾತ್ರ ಅದನ್ನು ಅವಳ ಮಾತಿನಲ್ಲೇ ಹೇಳುವುದಾದರೆ "ಹಾಗೇನಾದರೂ ಅವನು ಕೆನ್ನೆ ಕಚ್ಚಿದರೆ ಕಚ್ಚಲೆಂದೇ ಅಂದುಕೊಂಡೆ. ಅಯ್ಯೋ ಇವನ್ಯಾಕ ಕಚ್ಚಲಿಲ್ಲ ಎಂದು ಅನಿಸಿತು. ಮುಂದೆ ಬಂದು ಅವನ ಕೈ ಹಿಡಿದುಕೊಂಡೆ. ಹಸಿ ಮರದ ಹಾಗೆ ತೇವಾಗಿತ್ತು. ಹಾಗೇ ಅವನ ಕೈ ಹಿಡಿದುಕೊಂಡು ನನ್ನ ಎದೆಗೆ ಒತ್ತಿಕೊಂಡೆ. ಅವನು 'ಥೂ ಹಾದರಗಿತ್ತಿ' ಎಂದು ಹೇಳಿ ನನ್ನನ್ನು ನೂಕಿದ".[8] ಇದನ್ನು ಹೊರತು ಪಡಿಸಿದರೆ ಮುಂದೆಲ್ಲೂ ಅವಳ ವೈಯಕ್ತಿಕ ನಡಾವಳಿ ತಿಳಿಯುವುದಿಲ್ಲ. ಶೀನಿಂಗವ್ವ ಸಿಂಗಾರೆವ್ವ ಬಾಲ್ಯದಿಂದ ಅವಳ ಸಾವಿನವರೆಗೂ ಸೇವಕಿಯಾಗಿ ಜೊತೆಗಿದ್ದವಳು ಅಷ್ಟೇ. ಹೀಗಾಗಿ ಸಿಂಗಾರೆವ್ವನ ಪಾತ್ರದೊಂದಿಗೆ ಶೀನಿಂಗವ್ವನ ಪಾತ್ರ ಬೆಳೆಯುವುದಿಲ್ಲ. ಕಥೆ ಇವಳಿಂದ ಹೇಳಲ್ಪಡುವ ಸಂದರ್ಭಕ್ಕೆ ಈಕೆ ಮುದುಕಿಯಾಗಿದ್ದಾಳೆ. ಕುಡಿದು ಉಲ್ಲಾಸಿತಳಾಗಿ ಕಥೆ ಹೇಳುವ ಇವಳು ವಾಸ್ತವಗಳ ಪಾತಳಿಯಿಂದ ಹಿಂದೆಸರಿಯುತ್ತಾಳೆ.

ಹಾಗೆಯೇ ಹಿರಿಯ ದೊರೆಸಾನಿ ತನ್ನ ಸೊಸೆ ಬಸಿರಾದರೆ ಆಕೆಗೆ ತನ್ನ ಚಿನ್ನದ ನಡುಪಟ್ಟಿ ನೀಡುತ್ತೇನೆ ಎನ್ನುವುದು ಅವಳ ವಂಶ ಬೆಳೆಯಬೇಕೆಂಬ ಹಂಬಲವನ್ನು ಸೂಚಿಸುತ್ತದೆ. ತನ್ನ ಸೊಸೆ ಬಸಿರಾಗದಿದ್ದರೂ ಆಕೆ ಬಸಿರಾಗಿದ್ದಾಳೆಂದು ತಿಳಿದು ಆ ನಡುಪಟ್ಟಿಯನ್ನು ಸಿಂಗಾರೆವ್ವನಿಗೆ ಕೊಟ್ಟು ಸಾಯುತ್ತಾಳೆ. ಈ ಸಂಗತಿ ಕೂಡ ಸಿಂಗಾರೆವ್ವನಿಗೆ ಮಕ್ಕಳನ್ನು ಪಡೆಯಬೇಕೆಂಬ ಪುಷ್ಟಿ ನೀಡುತ್ತದೆ.

ಹೀಗೆ ಸಿಂಗಾರೆವ್ವ, ಶೀನಿಂಗವ್ವ, ಮರ್‍ಯಾ, ಗೌಡ, ಸರಗಂ ದೇಸಾಯಿ, ಹಿರಿಯ ದೊರೆಸಾನಿ, ಹುಚ್ಚಯ್ಯ, ಪರಮಶೆಟ್ಟಿ ಮುಂತಾದ ಪಾತ್ರಗಳೇ ಕಾದಂಬರಿಯಲ್ಲಿ ಮುಖ್ಯವಾದ ವುಗಳಾಗಿದ್ದರೂ, ಚಿಮಣಾ, ನಿಂಗವ್ವ ಗೌಡ್ತಿ, ರವಿಚಂದ್ರ, ಊರಿನ ಪಂಚರು ಮುಂತಾದ ಸಣ್ಣಪುಟ್ಟ ಪಾತ್ರಗಳು ಕಾದಂಬರಿಯ ವಸ್ತು ವಿಶ್ಲೇಷಣೆಯ ಸಂದರ್ಭದಲ್ಲಿ ಪ್ರಮುಖವಾಗುತ್ತದೆ.

ಒಟ್ಟಿನಲ್ಲಿ 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿ ಕೇವಲ ಒಂದು ಹೆಣ್ಣಿನ ಮತ್ತು ಅರಮನೆಯ ಕಥೆ ಮಾತ್ರ ಆಗಿರದೆ ಹಳೆಯ ಮೌಲ್ಯಗಳು ನಶಿಸಿ ಹೊಸ ಮೌಲ್ಯಗಳ ಉದಯದ ಸಂಕೇತವಾಗಿದೆ. ಕಾದಂಬರಿಯಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಸ್ವಪ್ರತಿಷ್ಠೆ, ಅಹಂಕಾರ, ಕ್ರೌರ್ಯಗಳು

8. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ – ಪುಟ 38

ತನ್ನ ದೌರ್ಬಲ್ಯಗಳಿಂದಲೇ ದುರಂತಗಳ ಸರಮಾಲೆಯನ್ನು ಸೃಷ್ಟಿಸಿ ಅವನತಿ ಹೊಂದಿದ್ದೇ ಈ ಕಥೆಯ ಮೂಲವಸ್ತು.

ಇ) ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಗಳ ತೌಲನಿಕ ಅಧ್ಯಯನ :-

ಕಾದಂಬರಿಗಳೆರಡು ರಾಜಕೀಯ ವಿಚಾರಗಳನ್ನು ಕುರಿತು ಹೇಳುತ್ತವೆ. ಕಂಬಾರರ ಎರಡು ಕೃತಿಗಳಲ್ಲಿಯೂ ಊಳಿಗಮಾನ್ಯ ವ್ಯವಸ್ಥೆ ತನ್ನ ಸ್ವಪ್ರತಿಷ್ಠೆ, ಅಹಂಕಾರ, ಕ್ರೌರ್ಯಗಳಿಂದ ಮೆರೆದು ತನ್ನ ಅತಿಯಾದ ದೌರ್ಬಲ್ಯದಿಂದಾಗಿಯೇ ಕೊಳೆತು ನಾಶವಾಗುವ ಚಿತ್ರಣವನ್ನು ನೀಡುತ್ತವೆ. ಶಿವನ ಡಂಗುರದಲ್ಲಿ ಆಧುನಿಕ ರಾಜಕೀಯತೆ, ಚುನಾವಣೆ ಮಾನವ ಸಂಬಂಧಗಳ ಸುತ್ತ ಹೇಗೆ ಹೆಣೆದುಕೊಂಡು ಊರನ್ನು ಉದ್ಧಾರ ಮಾಡುವ ಹೆಸರಿನಲ್ಲಿ ನಾಶಮಾಡುವ ವ್ಯಕ್ತಿಗಳ ಕುತಂತ್ರತೆ ಕಂಡುಬರುತ್ತದೆ. ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ರಾಜಕೀಯ ಮಾನವನನ್ನು ಹೇಗೆ ನಿಯಂತ್ರಿಸುತ್ತದೆಂಬುದನ್ನು ಚರ್ಚಿಸಲಾಗಿದೆ.

ಕಾದಂಬರಿಗಳೆರಡರಲ್ಲೂ ಸ್ತ್ರೀ ಶೋಷಣೆಯನ್ನು ಕುರಿತಂತಹ ವಿಚಾರಗಳನ್ನು ದಾಖಲಿಸುತ್ತವೆ. ಶಾರವ್ವ, ಭಾಗೀರ್ತಿ, ನೀಲಗಂಗು, ಸಿಂಗವ್ವ, ತುಂಗವ್ವ, ಸಿಂಗಾರೆವ್ವ, ಶೀನಿಂಗವ್ವ ಇನ್ನು ಅನೇಕ ಸ್ತ್ರೀ ಪಾತ್ರಗಳು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾದವು. ಆದರೆ ಶೋಷಣೆಗೊಳಿಸಿದ ವ್ಯಕ್ತಿಗಳು ಮಾತ್ರ ವಿಭಿನ್ನ.

ಭಾಗೀರ್ತಿ ತನ್ನ ತಂದೆ ಬರಮೇಗೌಡನಿಂದ ಶೋಷಣೆಗೆ ಒಳಗಾಗುತ್ತಾಳೆ. ಊರಿನ ಗೌಡನಾದರೂ ಒಳ್ಳೆಯ ವರನಿಗೆ ಕೊಟ್ಟು ಮದುವೆ ಮಾಡುವ ತಾಕ್ಕೆ ಇದ್ದರೂ ಯಾವುದನ್ನು ಲೆಕ್ಕಿಸದೆ ತನ್ನ ಹೆಂಡತಿ ಪಾರೋತಿ ಸಾಯುವುದರೊಳಗೆ ಮಗಳ ಮದುವೆ ಮಾಡಿ ಮುಗಿಸಬೇಕೆಂದು ಪಾರೋತಿಯ ಮಲತಾಯಿಯ ಮಗ, ಇರಪಣಗೌಡ (ಕುಂಟರಪ)ನಿಗೆ ಕೊಟ್ಟು ಮದುವೆ ಮಾಡುತ್ತಾರೆ. ವರ ವಿದ್ಯಾವಂತ, ಬುದ್ಧಿವಂತ ನೆಂದು ತಿಳಿಯುತ್ತಾರೆ. ಈ ಮದುವೆ ಸ್ವಲ್ಪವೂ ಇಷ್ಟವಿಲ್ಲದ ಭಾಗೀರ್ತಿ ಬೇಡವೆನ್ನುವ ಧನಿ ಎತ್ತುವುದಿಲ್ಲ. ಕಾರಣ ತಂದೆ ತಾಯಿಗೆ ಎದುರು ಮಾತನಾಡುವ ಸ್ಥಿತಿಯಲ್ಲಿರುವುದಿಲ್ಲ.

ಇದೇ ರೀತಿಯ ಪ್ರಸಂಗ ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯಲ್ಲಿಯೂ ನಡೆಯುತ್ತದೆ. ಯಾರ ಮಾತನ್ನು ಕೇಳದ ಪಂಡರೀಗೌಡ ತನ್ನ ಮಗಳನ್ನು ಹಣದ ಆಸೆಯಿಂದಾಗಿ ಶಿರಟ್ಟಿಯ ಗೌಡನ ಮಗನ ಜೊತೆ ಮದುವೆ ಮಾಡಿಸುತ್ತಾನೆ. ಇಲ್ಲಿ ಸತ್ತ ಹೆಣದಜೊತೆ ಮದುವೆ

ಶಾಸ್ತ್ರಮುಗಿದಿರುತ್ತದೆ. ಸಿಂಗಾರೆವ್ವ ಇಲ್ಲಿ ಯಾವುದನ್ನು ಆಲಿಸುವ ಸ್ಥಿತಿಯಲ್ಲಿರಲಿಲ್ಲ ಯಾಕೆಂದರೆ ಅವಳಿಗಿನ್ನು ಮದುವೆಯ ವಯಸ್ಸಾಗಿರಲಿಲ್ಲ ಆಂದರೆ ಊರಿನ ಗೌಡನೇ ಬಾಲ್ಯವಿವಾಹ ಮಾಡಿಸುತ್ತಾನೆ. ನಂತರ ಸರಗಂ ದೇಸಾಯಿಯ ಜೊತೆ ಎರಡನೇಯ ಮದುವೆಯು ಆಯಿತು. ಇಲ್ಲಿಯು ಕೂಡ ಸಿಂಗಾರೆವ್ವನಿಗೆ ತಕ್ಕ ವರನನ್ನು ಹುಡುಕುವ ಪ್ರಯತ್ನ ಮಾಡುವುದಿಲ್ಲ. ಕೇವಲ ಆಸ್ತಿ, ಹಣ, ಅಧಿಕಾರಕ್ಕೆ ತನ್ನ ಮಗಳ, ಮನೆಯವರ ನಿರ್ಧಾರವನ್ನು ಕೇಳದೆ ಯವುದನ್ನು ಲೆಕ್ಕಿಸದೆ ಎರಡನೆಯ ಮದುವೆಯನ್ನು ಮಾಡಿ ಮುಗಿಸುತ್ತಾನೆ.

ಈ ಎರಡು ಸ್ತ್ರೀ ಪಾತ್ರಗಳು ತಮಗೆ ಅನ್ಯಾಯವಾಗುತ್ತಿದೆ. ಎಂದು ಗೊತ್ತಿದ್ದರೂ ಅದನ್ನು ಪ್ರತಿಭಟಿಸುವಂತಹ ಮನಸ್ಸಿದ್ದರೂ ಅದನ್ನು ತೋರ್ಪಡಿಸಿಕೊಳ್ಳಲಿಲ್ಲ. ತಂದೆ ತಾಯಿಗೆ ಎದುರುಮಾತನಾಡುವಂತಹ ಶಕ್ತಿ ಅವರಲ್ಲಿಲ್ಲ ಎಂದಲ್ಲ, ತಂದೆ ತಾಯಿಯ ಮೇಲಿನ ಭಕ್ತಿಯಿಂದ ಯಾವುದನ್ನು ವಿರೋಧಿಸಲು ಸನ್ನದ್ದರಾಗುವುದಿಲ್ಲ ಎಂದೇ ಹೇಳಬೇಕು. ಕಾರಣ ಈ ದೃಷ್ಟಿಕೋನ ಭಾರತೀಯ ಸಂಸ್ಕೃತಿಯಲ್ಲಿ ಅನಾಧಿಕಾಲದಿಂದಲೂ ಬಂದಿರುವಂತಹ ಒಂದು ವ್ಯವಸ್ಥೆಯಾಗಿದೆ, ಹಿಂದಿನಿಂದಲೂ ಸ್ತ್ರೀ ಎಂಬುವಳು ದೊಡ್ಡವರ ಮಾತಿಗೆ ಮರ್ಯಾದೆ ಕೊಡಬೇಕೆಂಬುದನ್ನು ಪುರುಷ ಪ್ರಧಾನ ಸಮಾಜದಲ್ಲಿ ರೂಢಿಸಿಕೊಂಡು ಬಂದಂತಹ ಸಂಪ್ರದಾಯವಾಗಿದೆ. ಎಂದು ಹೇಳಬೇಕು ಆ ಒಂದು ನಿಲುವಿನಲ್ಲಿಯೇ ಇಲ್ಲಿ ಬರುವಂತಹ ಸ್ತ್ರೀ ಶೋಷಿತ ಪಾತ್ರಗಳು ಯಾವುದನ್ನು ವಿರೋಧಿಸುವ ಗುಂಗಿಗೆ ಹೋಗುವುದಿಲ್ಲ. ಎಲ್ಲವನ್ನು ಸ್ವೀಕರಿಸಿಕೊಳ್ಳುತ್ತಲೇ, ಕಷ್ಟಗಳ ಸರಮಾಲೆಯಲ್ಲೆ ಬದುಕನ್ನು ನಡೆಸಲು ಮುಂದಾಗುತ್ತಾರೆ.

ಭಾಗಿರ್ತಿಯೂ ತನ್ನ ತಂದೆ ಬರಮೇಗೌಡ, ತಾಯಿ ಪಾರ್ರೋತಿ, ತನ್ನ ಗಂಡ ಕುಂಟಿರಪ ನಿಂದ ಶೋಷಣೆಗೆ ಒಳಗಾದವರೆ, ಸಿಂಗಾರೆವ್ವ ತನ್ನ ತಂದೆ ಪಂಡರೀಗೌಡ, ಪತಿ ಸರಗಂ ದೇಸಾಯಿ, ಮನೆಯ ಕೆಲಸದಾಳು ಮರ್‍ಯಾನ ಮೂಲಕ ಶೋಷಣೆಗೆ ಒಳಗಾಗುತ್ತಾಳೆ. ಈ ಶೋಷಣೆಯಿಂದ ಭಾಗಿರ್ತಿ ತನ್ನ ಮಗಳನ್ನು ಕಳೆದುಕೊಂಡು ದೂರವಾದರೆ, ಸಿಂಗಾರೆವ್ವ ಜೈಲುವಾಸ ಅನುಭವಿಸುವಂತಾಗುತ್ತದೆ. ಶಾರವ್ವ ಶೋಷಿತ ವರ್ಗದಿಂದ ಬಂದ ಹೆಣ್ಣು ಮಗಳು ಇವಳನ್ನು ಸಮಾಜ ಮೊದಲು ಗುರುರ್ತಿಸುವುದು 'ದೇವದಾಸಿ' ಎಂದು ನಂತರ ತುಂಗವ್ವನ ಮನೆ ಸೇರಿದ ನಂತರ ಚೆಂಬಸನ ಪ್ರೇಮಕ್ಕೆ ಸಿಲುಕಿ ಇಬ್ಬರು ಪ್ರೀತಿಸಿ ಕೆಲವು ವಿರೋಧಗಳ ನಡುವೆಯು ಮದುವೆಯಾಗುತ್ತಾರೆ. ಈ ದೇವದಾಸಿ ಎಂಬಂತಹ ಒಂದು ಕೆಟ್ಟ ಸಂಪ್ರದಾಯ ತಲೆ ತಲಾಂತರದಿಂದಲೂ ನಡೆದುಕೊಂಡು ಬಂದಿದೆ. ದೇವರ ಹೆಸರಿನಲ್ಲಿ ಹಾದರ ಮಾಡುವಂತಹ ಸ್ಥಿತಿ ಇದಾಗಿದೆ. ಪ್ರಸ್ತುತವಗಿ ಉತ್ತರ ಕರ್ನಾಟಕದ ಕೆಲವೊಂದು ಹಳ್ಳಿಗಳಲ್ಲಿ ಈ ರೀತಿಯ

ಸಂಪ್ರದಾಯವನ್ನು ಪಾಲಿಸಿಕೊಂಡು ಬರುವಂತಹ ವರ್ಗಗಳು ಇಂದು ನಮ್ಮ ಕಣ್ಣುಮುಂದೆ ನಿಲ್ಲುತ್ತವೆ.

ಚೆಂಬಸನು ತುಂಗವ್ವನ ಸಾಕು ಮಗನಾದ್ದರಿಂದ ಚಿಕ್ಕಂದಿನಲ್ಲಿಯೇ ತಂದೆ, ತಾಯಿ ಕಳೆದುಕೊಂಡು ತುಂಗವ್ವನ ಹತ್ತಿರ ಬೆಳೆದ ಹುಡುಗ "ತುಂಗವ್ವನ ಹಾಲು ಕುಡಿದವನು ನಮ್ಮನ್ನೆಲ್ಲ ತನ್ನವರಂತೇ ಕಾಣುವನೆಂದು" ಶಾರವ್ವನ ನಂಬಿಕೆ ಜೊತೆಗೆ ವಿದ್ಯಾವಂತ, ಗುಣವಂತನಾದ್ದರಿಂದ ಶಾರವ್ವನ ಒಲವು ಚೆಂಬಸನ ಕಡೆಗೆ ತಿರುಗುತ್ತದೆ. ಹಳ್ಳಿಗಳಲ್ಲಿ ಸಂಪ್ರದಾಯಬದ್ಧ ಕುಟುಂಬಗಳಿದ್ದರು ಇವರಿಬ್ಬರ ಸಂಬಧದ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು ದೇವದಾಸಿಯಲ್ಲವೆ ಅವಳಿಗೆ ಗೌಡರೇ ದಾರಿ ಎಂದು ಹೇಳಿ ಸುಮ್ಮನಾದರು.

ಮಲ್ಲೀಮಡುವಿನಲ್ಲಿ ನಡೆಯುತ್ತಿದ್ದ ಅನ್ಯಾಯದ ವಿರುದ್ಧ ದಂಗ್ಗೆ ಎದ್ದ ರೈತರ ಚಳುವಳಿಯನ್ನು ನಿಯಂತ್ರಿಸಲು ಬಂದ ಪೋಲಿಸಿನವರು ಅಂದೊಂದು ರಾತ್ರಿ ಶಾರವ್ವ ಮತ್ತು ಅವಳ ತಾಯಿ ಯಮುನಕ್ಕನ ಮೇಲೆ ಆಕ್ರಮಣ ಮಾಡಿ ಶಾರವ್ವನ ಮೇಲೆ ಅತ್ಯಾಚಾರ ವೆಸಗುತ್ತಾರೆ. ಈ ತರಹದ ಅನ್ಯಾಯಗಳನ್ನು ತಡೆಯುವ ಸಾಮರ್ಥ್ಯ ಯಾರಲ್ಲಿಯೂ ಇಲ್ಲ 'ಕಾಯುವವರೆ ಕೊಲ್ಲುವವರಾದರೆ' ಈ ರೀತಿಯ ಬಡಪಾಯಿಗಳ ಮೇಲಿನ ಆಕ್ರಮಣ ನಿರಂತರವಾಗಿ ನಡೆಯುತ್ತಲೆ ಇರುತ್ತದೆ. ಈ ರೀತಿ ತಮ್ಮ ಅಸಹಾಯಕತೆಯಿಂದಾಗಿಯೇ ಶೋಷಣೆಗೆ ಒಳಗಾದವರೂ ಎರಡು ಕೃತಿಗಳಲ್ಲಿಯು ಕಂಡುಬರುತ್ತಾರೆ.

ಉಳಿಗಮಾನ್ಯ ವ್ಯವಸ್ಥೆಯ ಪ್ರತೀಕವಾದ ಅರಮನೆ ಸಂಪ್ರದಾಯಬದ್ಧ ಮೌಲ್ಯಗಳ ಉಸಿರುಗಟ್ಟಿಸುವ ವಾತಾವರಣದಲ್ಲಿ ಶೋಷಣೆಯನ್ನು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆಯಿಂದ ಶೋಷಣೆಯನ್ನು ಒಪ್ಪಿಕೊಂಡು ಬದುಕುತ್ತಾರೆ. ಬರಮೇಗೌಡ ಉಳಿಗಮಾನ್ಯ ವ್ಯವಸ್ಥೆಯಲ್ಲಿ ಉಳುವವನೇ ಭೂಮಿಯ ಒಡೆಯನೆಂಬ ಕಾನೂನು ಬಂದರೂ ತನ್ನ ಅತಿಯಾದ ದುರಾಶೆಯಿಂದ ನೆಪಮಾತ್ರಕ್ಕೆ ಅದನ್ನು ಪಾಲಿಸುವವನಂತೆ ಮಾಡಿ ಮತ್ತೆ ಹಿಂಪಡೆಯುವಂತಹ ವ್ಯವಸ್ಥೆಯನ್ನು ಶಿವನ ಡಂಗುರದಲ್ಲಿ ಚರ್ಚಿಸಲಾಗಿದೆ.

ಎರಡು ಕೃತಿಗಳು ನವ್ಯೋತ್ತರ ಕಾಲಘಟ್ಟದಲ್ಲಿ ರಚನೆಯಾದವುಗಳಾಗಿದ್ದರೂ ನವ್ಯದ ಕೆಲವು ಅಂಶಗಳನ್ನು ಕೂಡ ಕಾದಂಬರಿಯಲ್ಲಿ ಕಾಣಬಹುದು. ನವ್ಯದ ಮುಖ್ಯ ಲಕ್ಷಣವಾದ ಅಸ್ತಿತ್ವವಾದ ಮತ್ತು ಅನಾಥಪ್ರಜ್ಞೆ ಈ ಕಾದಂಬರಿಗಳಲ್ಲಿವೆ.

ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯಲ್ಲಿ ಸಿಂಗಾರೆವ್ವ "ದೇವರು ಇಷ್ಟುದೊಡ್ಡ ಶಿಕ್ಷ್ಯಾ ನನಗ್ಯಾಕಾ ಕೊಡಬೇಕು", ಎಂದು ಕೇಳುವ ಅಸಂಗತ ಪ್ರಶ್ನೆಗೆ ಉತ್ತರವಿಲ್ಲ. ಯಾವುದೇ ತಪ್ಪನ್ನು ಮಾಡಿದೆಯೂ ಪಾಪ ಪ್ರಜ್ಞೆಯನ್ನು ಅನುಭವಿಸುವಂತೆ ಕೊರಗುತ್ತಾ ಸಾಯುವ ಸಿಂಗಾರೆವ್ವನ ಪ್ರಶ್ನೆ ಅಸ್ತಿತ್ವವಾದಿ ಪ್ರಶ್ನೆಯೇ ಆಗಿದೆ. ಎಲ್ಲರೂ ಇದ್ದೂ ಇಲ್ಲದ ಅನಾಥಪ್ರಜ್ಞೆ ಸಿಂಗಾರೆವ್ವನನ್ನು ಕಾಡುತ್ತದೆ. ಇಂಥಹ ಪರಿಸ್ಥಿತಿ ಶಾರವ್ವ ಅನ್ಯಾಯಕ್ಕೆ ಒಳಗಾಗಿ ತಪ್ಪಿಸಿಕೊಂಡು ಬಂದು ಸಮರ್ಥಿವಾಯುಸ್ವಾಮಿಯ ನೆರವಿನಿಂದ ಕಸ್ತೂರ ಬಾ ಅನಾಥಾಶ್ರಮ ಸೇರಿದಾಗ ಪ್ರತಿದಿನ ತನ್ನವರೆಲ್ಲರನ್ನು ನೆನೆಸಿಕೊಂಡು ರೋಧಿಸುವುದು ಇವಳಲ್ಲಿ ಅನಾಥಪ್ರಜ್ಞೆ ಕಾಡುತ್ತದೆ. ಎಲ್ಲರೂ ಇದ್ದು ತನ್ನವರಿಲ್ಲದ ಪ್ರದೇಶದಲ್ಲಿ ವಾಸಿಸುವುದು ಕಷ್ಟವಾದರೂ ಮಾದೇವಿಯ ಮುಖಾಂತರ ತನ್ನ ದುಃಖ ಮರೆಯುತ್ತಾಳೆ.

ದೇಸಾಯಿ ಮನೆತನದ ಒಡೆಯನಾದ ಸರಗಂ ದೇಸಾಯಿ ತನ್ನ ತನದಿಂದ ಅಸ್ಥಿತ್ವವನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಹೆಣ್ತಿನ ಜೆತ್ತಲೆ ಶರೀರವನ್ನು ಕಂಡೊಡನೆ ಮೂರ್ಛೆ ಹೋಗುವವನು ತನ್ನ ಹೆಂಡತಿ ಬಸುರಾಗಿದ್ದಾಳೆ ಎಂಬ ವಿಷಯ ತಿಳಿದು ಬೇಹೋಶ್ ಆಗುತ್ತಾನೆ. ತನ್ನ ಅಸ್ಥಿತ್ವಕ್ಕೆ ದಕ್ಕೆ ಬರುತ್ತದೆಂದು ತಾನೇ ಬಾವಿಸಿ ಗುಂಡಿಗೆ ಶರಣಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಶಿವನ ಡಂಗುರದಲ್ಲಿ ತನ್ನ ಅಸ್ಥಿತ್ವವನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಿದ ಬರಮೇಗೌಡ ಚುನಾವಣೆಗೆ ಟಿಕೇಟ್ ಸಿಕ್ಕಲಿಲ್ಲವೆಂಬ ಕಾರಣಕ್ಕೆ ಒಳಗೊಳಗೆ ಕುಗ್ಗಿಹೋಗುತ್ತಾನೆ.ತಾನು ಹಿಂದೆ ಮಾಡಿದ ತಪ್ಪಿನ ಹರಿವಾಗಿ ಬದಲಾಗುತ್ತಾನೆ. ಆದರೆ ಕುಂಟೆಪ್ಪ ಮಾತ್ರ ತನ್ನ ಕುತಂತ್ರದಿಂದ ಮಂತ್ರಿ ಪದವಿಯನ್ನು ಪಡೆದುಕೊಂಡು ಬೆಳಗಾವಿಯಲ್ಲಿ ವಾಸಿಸುತ್ತಾನೆ. ಮತ್ತೆ ಊರ ಕಡೆ ಮುಖಮಾಡಿ ನೋಡುವುದಿಲ್ಲ.

ಕಾದಂಬರಿಗಳಲ್ಲಿ ದಲಿತ ಪ್ರಜ್ಞೆಯನ್ನು ಗುರುತಿಸಬಹುದಾಗಿದೆ. ಭೂಮಿಯ ಶಪಿತರ ವರ್ಗಕ್ಕೆ ಸೇರಿದವರಂತೆ ನೋಡುವ ರೀತಿ ವಿಪರ್ಯಾಸವೇ ಸರಿ 'ಶಿವನ ಡಂಗುರ'ದಲ್ಲಿ ಬರುವ ತುಂಗವ್ವ, ಲಸಮ, ಶಾರವ್ವ, ಯಮುನಕ್ಕ, ಕಲ್ಲವ್ವ, ಬಲವಂತ, ನೀಲಗಂಗು, ನಾಲ್ಕು ಜನ ದಲಿತ ರೈತರು, ಇವರೆಲ್ಲರು ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಾರೆ. ಶೋಷಿಸುವ ಸಮಾಜದ ವಿವಿಧ ಮುಖಗಳ ಪರಿಚಯ ಕಾದಂಬರಿಯಲ್ಲಿದೆ. ಇವರ ಮೇಲಿನ ಆಕ್ರಮಣ ವೈಯಕ್ತಿಕ ಪ್ರಶ್ನೆಗಳು ಇಡೀ ಅವರ ಸಮುದಾಯದ ಒಳಧ್ವನಿಯಾಗಿರುವುದನ್ನು ಕಾಣಬಹುದು. "ಸಿಂಗಾರೆವ್ವ ಮತ್ತು ಅರಮನೆ" ಕಾದಂಬರಿಯಲ್ಲಿ ಮರ್‍ಯಾನ ಪಾತ್ರ ಕೇವಲ ಒಂದು ಪಾತ್ರವಾಗಿರದೆ

ಶೋಷಣೆಗೆ ಒಳಗಾದ ಎಲ್ಲಾ ದಲಿತರ ಪ್ರತಿನಿಧಿಯಂತಿದೆ. ಗೌಡನಿಂದ ತನ್ನ ಮೇಲಾದ ಶೋಷಣೆಯನ್ನು ಅದರ ಸೇಡನ್ನು ತೀರಿಸಿಕೊಳ್ಳಲು ಸಿಂಗಾರೆವ್ವಳನ್ನು ಬಲಾತ್ಕರಿಸುತ್ತಾನೆ. ನಂತರದ ಅವರಿಬ್ಬರ ಲೈಂಗಿಕ ಸಂಬಂಧ ವರ್ಗೀಕೃತ ಸಮಾಜದ ಅವನತಿ ಮತ್ತು ಕೆಳವರ್ಗದ ಆಹ್ವಾನದ ಸಂಕೇತವಾಗಿ ಇರುವುದನ್ನು ಕಾದಂಬರಿಯಲ್ಲಿ ಕಾಣಬಹುದು. ಬದಲಾವಣೆಗೆ ತುಡಿಯುವ ದಲಿತ ಮನಸ್ಸುಗಳ ಚಿತ್ರಣ ಎರಡು ಕಾದಂಬರಿಗಳಲ್ಲಿವೆ.

ದಲಿತ ಸಮಾಜಕ್ಕೆ ಶೋಷಣೆ ಎಂಬುದು ಯಾವ ರೀತಿಯಲ್ಲಿದೆ ಎಂದರೆ ಪ್ರಸ್ತುತವಾಗಿ ಈ ವರ್ಗದ ಶೋಷಣೆ ಇರುವುದು ಖಂಡಿತ. ಹಳ್ಳಿಗಳಲ್ಲಿ ಅವರಿಗಾಗಿಯೇ ಪ್ರತ್ಯೇಕ ಕೇರಿ, ಬಾವಿ, ದೇವಸ್ಥಾನ ಹೀಗೆ ಕೆಲವು ವ್ಯವಸ್ಥೆಗಳನ್ನು ನೋಡುವುದಾದರೆ. ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ ಶಿಕ್ಷಿತ ವರ್ಗದಿಂದ ಸ್ವಲ್ಪಮಟ್ಟಿಗೆ ದೂರವಾಗುತ್ತಿದೆ ಎಂಬುದಕ್ಕೆ ಚೆಂಬಸನ ಪಾತ್ರ ಚಿತ್ರಣ ಸಾಕ್ಷಿ.

ಬೆಳಗಾವಿಯಲ್ಲಿ ವಿದ್ಯೆ ಕಲಿತು ಬಂದ ನಂತರ ಅದಕ್ಕಿಂತಲೂ ಮುಂಚೆ ತುಂಗವ್ವನ ಹತ್ತಿರ ಬೆಳೆದ ಹುಡುಗ ಕುಲವಂತನಾದರೂ ಕೆಳಜಾತಿಯವರ ಮಧ್ಯೆಯೇ ಬೆಳೆಯುತ್ತಾನೆ. ಎಲ್ಲರ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ನಡತೆಯನ್ನು ಕಲಿಯುತ್ತಾನೆ. ಕಾದಂಬರಿಯಲ್ಲಿ ಒಂದು ಕಡೆ ಶಾರವ್ವನನ್ನು ಪ್ರೀತಿಸುವಾಗ ಚೆಂಬಸ ಹೇಳುವ ಮಾತು "ಅರಳಲಿದ್ದ ಯೌವನದ ಮುಗ್ಧ ಬಾಲೆಯನ್ನೇ ಧೇನಿಸುತ್ತ 'ತಾನ್ಯಾಕೆ ಅವಳನ್ನು ಪ್ರೀತಿಸಬಾರದು?' ಅಂದು ಕೊಂಡ. ಹೌದಲ್ಲ! ಒಂದು ವೇಳೆ ಪ್ರೀತಿಸಿದರೆ ತಪ್ಪೇನು?. ತಪ್ಪಿಲ್ಲ. ಆದರೆ ಜಾತಿ ಬೇರೆ, ಕುಲ ಬೇರೆ, ಹುಟ್ಟಿದಾಗ ತುಂಗವ್ವನ ಹಾಲು ಕುಡಿದದ್ದಕ್ಕೆ ಜನ ತನ್ನನ್ನು ಹೊರಗಿಟ್ಟರಬೇಕಾದರೆ ಮದುವೆಯಾದರೆ ಬಿಡ್ತಾರಯೆ? ಇಲ್ಲ ಜನ ಅಂದರೂ ಬಿಟ್ಟರೂ ಏನೀಗ? ಅಂದವರು ತಮ್ಮ ಮನೇಲಿರ್ತಾರ. ತಾನು ಪ್ರೀತಿಸುವವನೇ! ಅಂತ ತಿರ್ಮಾನಿಸಿದೆ."[9] ಈ ರೀತಿ ದೇವದಾಸಿಯನ್ನು ಪ್ರೀತಿಸಲು ಮುಂದಾದ. ಇವನ ಪ್ರೀತಿಯನ್ನು ಒಪ್ಪಿಕೊಂಡ ಶಾರವ್ವ ಅಂದು ಕೊಳ್ಳುವುದು "ತುಂಗವ್ವನ ಹಾಲು ಕುಡಿದವನಾದ್ದರಿಂದ ಕುಲವಂತನಾದರೂ ನಮ್ಮನ್ನೆಲ್ಲ ತನ್ನವರಂತೇ ಕಾಣುವನೆಂಬ ಆತನ ಬಗ್ಗೆ ಅವಳಲ್ಲಿ ಒಂದು ಬಗೆಯ ಕಕ್ಕುಲಾತಿ ಇತ್ತು."[10] ಈ ರೀತಿಯ ಒಲವು ಇಬ್ಬರಲ್ಲಿಯೂ ಮೂಡಿತ್ತು.

ಇದೇ ರೀತಿಯ ಪ್ರಸಂಗ ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಮರ‍್ಯಾ ಸಿಂಗಾರೆವ್ವನನ್ನು ಪ್ರೀತಿಸುತ್ತಿದ್ದು ಪ್ರೀತಿಯ ನಿವೇದನೆಯನ್ನು ಹೇಳುವುದಿಲ್ಲ ಬದಲಾಗಿ ಬಲತ್ಕಾರದಿಂದ ಅವಳ ಮೇಲೆ ಬೀಲುತ್ತಾನೆ. ಇದೆಲ್ಲವನ್ನು ಕಂಡ ಸಿಂಗಾರೆವ್ವ ಅವನ ಮೇಲೆ ದ್ವೇಷಕಾರಲು ಸುರುಮಾಡುತ್ತಾಳೆ. ಕಾದಂಬರಿಯ ಮಧ್ಯಭಾಗಕ್ಕೆ ದೇಸಾಯಿಯ ಅಸಹಾಯಕತೆ, ತಂದೆಯ ಕುತಂತ್ರ, ಅತ್ತೆಯ

9. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 63

10. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 77

ನಿವೇದನೆ. ಅರಮನೆಯ ಪರಿಸ್ಥಿತಿ ಇವುಗಳ ಮಧ್ಯೆ ಸಿಲುಕಿ ಕೊನೆಗೆ ಯಾವ ದಾರಿಯೂ ಕಾಣದೆ ಮರ್ರ್‍ಯಾನನ್ನು ಒಪ್ಪಿಕೊಳ್ಳುವ ಪರಿಸ್ಥಿತಿ ಬರುತ್ತದೆ.

ಪ್ರೀತಿಯ ವಿಷಯದಲ್ಲಿ ಒಂದು ಮೇಲ್ವರ್ಗದ ಗಂಡು ಕೆಳವರ್ಗದ ಹುಡುಗಿಯನ್ನು ಪ್ರೀತಿಸಿದಾಗ, ಆತ ಸಮಾಜವನ್ನು ಎದುರಿಸುವ ರೀತಿಗೂ ಅದೇ ಮೇಲ್ವರ್ಗದ ಹೆಣ್ಣು ಕೆಳವರ್ಗದ ಗಂಡಿನ ಪ್ರೀತಿಯನ್ನು ಒಪ್ಪಿಕೊಂಡು, ಸಮಾಜವನ್ನು ಎದುರಿಸುವ ರೀತಿ ಬೇರೆಯದ್ದೇಯಾಗಿದೆ. ಮೇಲ್ವರ್ಗ ಮತ್ತು ಕೇಳವರ್ಗದವರ ಪ್ರೀತಿಸುವ ರೀತಿಯಲ್ಲಿ ದುರಂತತೆಯನ್ನು ಕಾಣಬಹುದು ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುವಂತವೇ, ಈ ಎರಡು ಕಾದಂಬರಿಗಳು ದಲಿತ ಶೋಷಿತ ವರ್ಗವನ್ನು ಸಮಾಜ ಯಾವ ರೀತಿ ಕಾಣುತ್ತದೆ ಎಂಬುವಕ್ಕೆ ಕಾದಂಬರಿಯಲ್ಲಿನ ಪಾತ್ರ ಚಿತ್ರಣಗಳ ಉದಾಹರಣೆಯೇ ಸಾಕ್ಷಿ.

ಶಿಕ್ಷಿತ ಆಡಳಿತ ವರ್ಗದವರಿಂದ ಶಾರವ್ವನ ಮೇಲಿನ ಆಕ್ರಮಣ, ಕುಲವಂತರರಾದ ರಮೇಶಿ, ಗಣಪರಿಂದ ಅತ್ಯಾಚಾರಕ್ಕೊಳಗಾದ ನೀಲಗಂಗುವಿನ ಸಾವು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗೌಡನನ್ನು ಪೋಲಿಸರ ವಶಕ್ಕೆ ತೆಗೆದುಕೊಂಡರು ಬಿ.ಸಿಯ ಮುಖಾಂತರ ಮತ್ತೆ ಹೊರಗೆಬರುತ್ತಾನೆ. ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಆಕ್ರಮಣ, ಅತ್ಯಾಚಾರ ಎಂಬುದು ಕೆಳವರ್ಗದವರಿಗೆ ಮಾತ್ರ ಸೀಮಿತ ವಾಗಿರುವಂತದ್ದು ಎಂಬುದನ್ನು ಗಮನಿಸಬಹುದು.

ಶಿವನ ಡಂಗುರದಲ್ಲಿ ಬರುವ ಶಾರವ್ವ, ತಂಗವ್ವ ಇವರು ಮೇಲ್ವರ್ಗದವರಾದ ಚೆಂಬಸ, ಬರಮೇಗೌಡನನ್ನು ಪ್ರೀತಿಸಿ ಮದುವೆಯಾದರೂ ಕುಲವಂತರ ಕೇರಿಯಲ್ಲಿ ವಾಸಿಸುವ ಹಾಗಿಲ್ಲ ಮುಂದೆಯೂ ಇವರು ಕೆಳವರ್ಗದವರಾಗಿಯೇ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಇದಕ್ಕೆ ಸಮಾಜ ಯಾವ ರೀತಿಯದಾದ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಮುಂದೆಯೂ ಅವರು ಆ ಒಂದು ವ್ಯವಸ್ಥೆಯಲ್ಲಿಯೇ ಜೀವನ ಸಾಗಿಸಬೇಕಾಗುತ್ತದೆ. ಬರಮೇಗೌಡ ತುಂಗವ್ವನಿಗೆ ಹುಟ್ಟಿದ ಲಸಮ(ಲಕ್ಷ್ಮಣ). ಇವನು ಹುಟ್ಟಿದ್ದು ಕುಲವಂತನಾದ ಗೌಡನಿಗಾದರೂ ಲಸವನನ್ನು ಗುರ್ತಿಸುವುದು ಕೆಳವರ್ಗದವನೆಂದು. ಆದ್ದರಿಂದ ಇವನ ಮದುವೆಗೆ ಗೌಡನೆ ಬರುವುದಿಲ್ಲ ಕಾರಣ "ತುಂಗವ್ವನಿಗೆ ತನ್ನಿಂದ ಗಂಡು ಮಗುವಾದುದೇನೋ ನಿಜ, ಆದರದು ಆಟಕ್ಕುಂಟು, ಲೆಕ್ಕಕ್ಕಿಲ್ಲ. ಯಾಕಂತೀರೋ, ಕ್ಷತ್ರಿಯ ಗೌಡನಿಗೆ ದೇವದಾಸಿಯಲ್ಲಿ ಹುಟ್ಟಿದ ಮಗ ವಾಡೆಗೆ, ಆಸ್ತಿಪಾಸ್ತಿ, ಅಧಿಕಾರಗಳಿಗೆ ವಾರಸುದಾರನಾಗಬಹುದೇ? ಆಗದಾಗದೆಂದೇ, ಜನ ನಗುವರೆಂದು ಕೊಂಡೇ ಅವಳನ್ನು ದೂರ ಮಾಡಿ, ಆಕೆ ತಕರಾರು ತೆಗೆಯದಂತೆ ಐದೆಕರೆ ಜಮೀನು ಕೊಟ್ಟು ಕೈ

ಜಾಡಿಸಿಕೊಂಡ".[11] ಈ ರೀತಿಯ ಗೌಡನ ಮಾತುಗಳಿಂದ ಒಂದು ಆಡಳಿತ ವರ್ಗ ತನ್ನ ಅವಶ್ಯಕತೆಗೆ ಹೆಣ್ಣನ್ನು ಯಾವ ರೀತಿ ಬಳಸಿಕೊಳ್ಳುತ್ತಾರೆ ಎಂಬುದನ್ನು ಚರ್ಚಿಸಲಾಗಿದೆ.

ಚೆಂಬಸವನು ಶಾರವ್ವನನ್ನು ಮದುವೆಯಾಗುತ್ತೇನೆ ಎಂದಾಗ ತುಂಗವ್ವನು ಅದನ್ನು ವಿರೋಧಿಸುತ್ತಾಳೆ ದೇವರ ಹೆಸರು ಹೇಳಿದಾಗ ಅದಕ್ಕೆ ಚೆಂಬಸ ಕೊಡುವ ಉತ್ತರ ಈ ರೀತಿ ಇದೆ "ಮಾತಿಗೊಮ್ಮೆ ದೇವೀ ಹೆಸರ ತಗೊಂಡು ಹೆದರಸ್ತೀಯೇನು? 'ಮಗಳ ಮದಿವೀ ಮಾಡಬ್ಯಾಡ. ನನ್ನ ಹೆಸರಿನಾಗ ಸೂಳೀ ಬಿಡು' ಅಂತಾಳೇನು ನಿನ್ನ ದೇವಿ? ಯಾವುದಾದರೂ ದೇವೀ ಹಾಂಗ ಹೇಳತಾಳೇನವಾ ತಂಗಿ? ಮೊದಲು ನಿನ್ನ ವಿಚಾರ ನೀನ ಮಾಡಿಕೊ. ಹೇಳಿಕೇಳಿ ಆಯೀನ ಮುಂದ ನಿಂತು ವರ ನೋಡಿ ಮದವೀ ಮಾಡೋದು ಬಿಟ್ಟು ಸೊಸೀನ್ನ ದೇವದಾಸಿನ್ನ ಮಾಡಿ ಸೂಳೇಗೇರಿಗಿ ಹೊಗಿಸ್ತೀನಂತೀಯಲ್ಲ ನೀ ಒಬ್ಬ ತಾಯೀನ? ಆಯೀನ? ರಾಕ್ಷಸಿ! ಈಗ ತಿದ್ದಿಕೊ. ಮುತ್ತ ಕಟ್ಟಿ ಮಾಡಿದ ಯಪ್ಪನ್ನ ನೀ ಸರಿಮಾಡಿಕೊಳ್ಳತೀಯೊ? ಇಲ್ಲೆ ನೀನ ಹೇಳ. ಏನಂತಿ ತಂಗಿ?"[12] ಎಂದು ಬುದ್ಧಿವಾದ ಹೇಳುತ್ತಾನೆ.

ಚೆಂಬಸನ ಅತ್ತೆ ಅಕ್ಕೂತಾಯಿ ಹೇಳುವ ಮಾತು ಈಗಿದೆ "ಇದೇನು ಮಾತಾಡ್ತೀಯೋ ತಮ್ಮಾ? ಕುಲದ ಹೊರಗಿನವಳ್ನ ಮದಿವ್ಯಾಗ್ತೀನಂದರ ಯಾರರ ಒಪ್ಪೋ ಮಾತ ಇದು? ಜನ ನಿನ್ನ ಕುಲದಾಗುಟ್ಟುಕೊಂಡಾರ? ಊರು ಬಿಡಿಸಿ ಓಡಿಸ್ಯಾರು. ನೋಡಿಕೊ" ಎನ್ನುತ್ತಾಳೆ. ಶಾರವ್ವನನ್ನು ಮದುವೆಯಾದ ಚಂಬಸವನು ಆಶೀರ್ವಾದ ಪಡೆಯಲು ಬಂದಾಗ ಆಶೀರ್ವಾದ ಮಾಡಿದ ಅಕ್ಕೂತಾಯಿ "ಆಯ್ತುಪ. ನಿನ್ನ ಮನಸಿನಾಕೀನ ಮದಿವ್ಯಾಗಿ ನಿನ್ನ ಹಟ ತೀರಿಸಿಕೊಂಡಿ. ಇಬ್ಬರಿಗೂ ಚಲೋ ಆಗಲಿ. ಆದರೆ ಶಾರೀನ ನಮ್ಮ ಮನೀ ಒಳಗ ಕರತರಬ್ಯಾಡ" ಎಂದು ಹೇಳಿದಳು. ಈ ರೀತಿಯ ನಿರ್ಭಂದದ ಮಾತುಗಳು ಒಂದು ಸಮಾಜದಲ್ಲಿರುವ ವ್ಯವಸ್ಥೆಯನ್ನು ಮತ್ತೊಮ್ಮೆ ಕೈಮಾಡಿ ತೋರಿಸುವಂತದ್ದು. ಕುಲವಂತನಾದರೂ ಕೆಳವರ್ಗದ ಹುಡುಗಿಯನ್ನು ಮದುವೆಯಾದರೂ ಅವರನ್ನು ಸಮಾಜ ನೋಡುವ ಬಗೆಯನ್ನು ಅಕ್ಕುತಾಯಿಯ ಮಾತುಗಳ ಮುಖಾಂತರ ತಿಳಿಯಬಹುದು.

ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಬರುವ ಮರ್ಯಾ ಕೆಳವರ್ಗದಿಂದ ಬಂದವನು ಎನ್ನುವ ಮಾತ್ರಕ್ಕೆ ಅಷ್ಟು ಗಟ್ಟಿ–ಮುಟ್ಟಾದ ಮರ್ಯಾನನ್ನು ತಮ್ಮ ಮನೆಯ ಚಾಕರಿಗೆ ಇರಿಸುವುದು ಈ ವ್ಯವಸ್ಥೆಯನ್ನು ಬಾಲಕಾರ್ಮಿಕತೆ ಎಂಥಲೂ ಕರೆಯಬಹುದು. ಏಕೆಂದರೆ ಮರ್ಯಾನು ಚಿಕ್ಕ ಮಯಸ್ಸಿನವನಾಗಿದ್ದಾಗಿನಿಂದಲೂ ಗೌಡನ ಮನೆಯಲ್ಲೇ ಕೆಲಸಕ್ಕೆ ಸೇರಿದವನು. ನಂದಗಾವಿಯ

---

11. ಚಂದ್ರಶೇಖರ ಕಂಬಾರರ ಶಿವನ ಡಂಗುರ – ಪುಟ 34
12. ಚಂದ್ರಶೇಖರ ಕಂಬಾರರ ಶಿವನ ಡಂಗುರ – ಪುಟ 121

ಗೌಡ ಪಂಡರೀಗೌಡ ಮರ‍್ಯಾನ ತಾಯಿಯ ಜೊತೆ ಅಕ್ರಮ ಸಂಬಂಧ ಹೊಂದಿದ್ದು, ಜೊತೆಗೆ ಅವನ ಆಸ್ತಿಯನ್ನು ತನ್ನ ವಶಕ್ಕೆ ತೆಗೆದುಕೊಂಡಿರುತ್ತಾನೆ. ಪ್ರತಿದಿನ ಎಷ್ಟೇ ಕೆಲಸ ಮಾಡಿದರೂ ಗೌಡನಿಂದ ನಿಂಧನೆ, ಅವಾಚ್ಯ ಶಬ್ದಗಳು, ಬಾರುಗೋಲಿನಿಂದ ಹೇಟು, ಕಾಲಿನಿಂದ ಹೊದೆ ತಪ್ಪುತ್ತಿರಲಿಲ್ಲ. ಈ ರೀತಿ ಎಲ್ಲವನ್ನು ಸಹನೆಯಿಂದ ಸಹಿಸಿಕೊಂಡ.

ದೊರೆಸಾನಿಯಾದ ಸಿಂಗಾರೆವ್ವನು ಸಹ ಮರ‍್ಯಾನನ್ನು ಕೆಳವರ್ಗದವನೆಂದೆ ನಿಂದಿಸುತ್ತಾಳೆ. "ನನ್ನ ಮನಿ ಎಂಜಲಾ ಉಂಡ ಹೊಲೆಯಾ, ನನ್ನ ಜೋಡಿ ಮಲಗಂತ ಹೇಳೋ ಹಾಂಗಾದೇನೋ?"[13] ಈ ರೀತಿ ಕೆಳವರ್ಗಗಳ ಮೇಲಿನ ದೌರ್ಜನ್ಯ ನಿರಂತರವದದ್ದು. ಅನ್ಯಾಯದ ವಿರುದ್ಧ ತಿರುಗಿ ಬೀಳುವ ಮನಸ್ಸಿದ್ದರೂ ಯಾವುದೇ ರೀತಿ ಪ್ರತಿಭಟಿಸಿದ್ದೇ ಆದರೂ ಮತ್ತಷ್ಟು ಕಷ್ಟಗಳ ಸರಮಾಲೆಯನ್ನು ಎಳೆದುಕೊಳ್ಳಬೇಕಾಗುತ್ತದೆ ಎಂದು ಮನಸ್ಸು ಮಾಡುವುದಿಲ್ಲ.

ಮಾನವ ಸಂಬಂಧಗಳ ಶಿಥಿಲತೆಯನ್ನು ಈ ಕಾದಂಬರಿಗಳು ಪ್ರಸ್ತುತ ಪಡಿಸುತ್ತವೆ. ಶಿವನ ಡಂಗುರ ಕಾದಂಬರಿಯಲ್ಲಿ ತಂದೆ ತಾಯಿಯ ನಿಯಮದಂತೆ ಭಾಗೀರ್ತಿ ಕುಂಟಿರಪನನ್ನು ಮದುವೆಯಾಗುತ್ತಾಳೆ. ವಲ್ಲದ ಮನಸ್ಸಿನಿಂದ ಸಂಸಾರ ಮಾಡುತ್ತಾಳೆ. ಹೆಣ್ಣಿಗೆ ಹೆಣ್ಣೆ ಶತ್ರು ವೆಂಬಂತೆ ಪಾರೋತಿ ತನ್ನ ಗಂಡನ ಎಲ್ಲಾ ಆಸ್ತಿ ತುಂಗವ್ವನ ಮಗ ಲಸಮನಿಗೆ ಸೇರುತ್ತದೆ ಎಂದು ಅನ್ಯಾಯ ಅಕ್ರಮಣಗಳ ಕೇಡನ್ನು ತುಂಬಿದ ಕುಂಟಿರಪ್ಪನಿಗೆ ಮದುವೆ ಮಾಡಿ ಮಗಳ ಬಾಳನ್ನೇ ಆಳು ಮಾಡುತ್ತಾರೆ. ಅಳಿಯನಾಗಿ ಬಂದ ಕುಂಟಿರಪ ಊರನ್ನು ತೊಳೆಯುವ ಸ್ಥಿತಿಗೆ ತರುತ್ತಾನೆ. ಅಧಿಕಾರದ ದುರಾಸೆಯಿಂದ ಹೆಂಡತಿ ಭಾಗೀರ್ತಿಯನ್ನು ಬಿಗ್‌ಬಾಸ್‌ಗೆ ತಲೆಹಿಡಿಯುತ್ತಾನೆ. ಆಸ್ತಿ ಅಧಿಕಾರಕ್ಕಾಗಿ ಹೆಣ್ಣಿನ ಮೇಲಿನ ಶೋಷಣೆ ಯಾವ ರೀತಿ ನಡೆಯುತ್ತದೆ ಎಂದು ಚರ್ಚಿಸಲಾಗಿದೆ.

ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯಲ್ಲೂ ತಂದೆಯಿಂದಲೇ ಶೋಷಣೆಗೆ ಒಳಗಾಗುವ ಸಿಂಗಾರೆವ್ವ ತಂದೆ ಕುತಂತ್ರ, ದುರಾಶೆಯನ್ನು ಕಂಡು ಹೇಗಾದರೂ ಮಕ್ಕಳನ್ನು ಪಡೆದು ತಂದೆಯ ಆಸೆಗೆ ತಣ್ಣೀರೆರೆಯಲು ಬಯಸುತ್ತಾಳೆ. ಹಾಗೆಯೇ ಚಿಮಣಾಳನ್ನು ಕಂಡಾಗ ಬೇಹೋಶ್ ಆಗುವ ಮತ್ತು ನಪುಂಸಕನಾದ ಗಂಡನನ್ನು ಒಲಿಸಿಕೊಳ್ಳಲು ಪ್ರಯತ್ನಿಸುವ ಸಿಂಗಾರೆವ್ವ ಅದರಲ್ಲಿ ವಿಫಲಳಾದಾಗ ಅವನ ಮೇಲಿನ ದ್ವೇಷದಿಂದ ಮರ‍್ಯಾ ತನ್ನನ್ನು ಬಲತ್ಕರಿಸಿದರೂ ನಂತರದಲ್ಲಿ ಮರ‍್ಯಾನ ಬಗೆಗಿನ ಅವಳ ಅದುಮಿಟ್ಟ ಭಾವನೆಗಳನ್ನು ಪೋಷಿಸಿ ತಾನೇ ಸ್ವತಃ ಅವನನ್ನು ಕೂಡಿ ಬಸಿರಾಗುತ್ತಾಳೆ. ಎರಡು ಕೃತಿಗಳಲ್ಲಿ ತಂದೆ ಮಕ್ಕಳ, ಗಂಡ ಹೆಂಡತಿಯರ ಸಂಬಂಧದಲ್ಲಿ ಬಿರುಕುಂಟಾಗಿರುವುದನ್ನು ತೋರಿಸುತ್ತದೆ.

13. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ – ಪುಟ 82

ಸಮುದಾಯದಿಂದಲೇ ಶಾರವ್ವನ ಮೇಲಿನ ಆಕ್ರಮಣ ಮತ್ತು ಮರ್ಯಾನ ಮೇಲಿನ ಶೋಷಣೆ ನಿರಂತರವಾದದ್ದು. ಗೌಡಾಳಿಕೆಯಿಂದ ಎಷ್ಟೆಲ್ಲ ಅನಾಹುತಗಳು ಸಂಭವಿಸುತ್ತವೆಂಬುದಕ್ಕೆ ಕಾದಂಬರಿಗಳು ನಿದರ್ಶನವಾಗುತ್ತವೆ. ಚೆಂಬಸವ-ಶಾರವ್ವ ಸಮಾಜದ ವಿರುದ್ಧ ದಿಕ್ಕಿನಲ್ಲಿ ನಡೆದರೆ. ಸಿಂಗಾರೆವ್ವ ಮತ್ತು ಮರ್ಯಾ ಸಂಪ್ರದಾಯದ ವಿರುದ್ಧವಾಗಿ ನಡೆಯುತ್ತಾರೆ. ಇಲ್ಲಿ ಪ್ರೀತಿ ಒಂದು ಕಡೆಯಾದರೆ, ದ್ವೇಷ ಮತ್ತೊಂದು ಕಡೆಯಾಗುತ್ತದೆ. ಪ್ರೀತಿಸಿದ ಹೆಣ್ಣನ್ನು ಕೈ ಬಿಡಬಾರದೆಂದುಕೊಂಡು ಸಮಾಜವನ್ನು, ಸಮುದಾಯವನ್ನು ಎದುರಾಕಿಕೊಂಡು ಶಾರವ್ವನನ್ನು ಮದುವೆಯಾದ ಚೆಂಬಸವ. ಆದರೆ ಸಿಂಗಾರೆವ್ವ ಮಾತ್ರ ತಂದೆಯ ಕುತಂತ್ರದಿಂದ, ಗಂಡನ ಮೇಲಿನ ದ್ವೇಷದಿಂದ, ಅತ್ತೆಯ ಮೇಲಿನ ಪ್ರೀತಿಯಿಂದ, ಅರಮನೆಯ ವಾರಸುದಾರನ ದೃಷ್ಟಿಯಿಂದ, ಮರ್ಯಾನನ್ನು ಬಯಸುತ್ತಾಳೆ. ಇಲ್ಲಿ ಕಥೆಯು ಸಮಾಜಕ್ಕೆ ವಿರುದ್ಧವಾದ ದಿಕ್ಕಿನತ್ತ ನಡೆಯುತ್ತದೆ. ಆಚಾರ-ವಿಚಾರ ಸಂಪ್ರದಾಯಗಳನ್ನು ಬದಿಗೊತ್ತಿ ತಮ್ಮ ಅಗತ್ಯಕ್ಕಿಂತ ಹೆಚ್ಚಾಗಿ ತಮ್ಮನ್ನು ನಂಬಿರುವವರಿಗಾಗಿ ಸಮಾಜದ ವಿರುದ್ಧ ದಿಕ್ಕಿನತ್ತಾ ನಡೆಯುತ್ತಾರೆ ಎಂಬುದನ್ನು ಕಾದಂಬರಿಯಲ್ಲಿ ವಿಶ್ಲೇಷಿಸಲಾಗಿದೆ.

ಕಾದಂಬರಿಗಳೆರಡು ಶಿಕ್ಷಣದ ಮಹತ್ವವನ್ನು ಸಾರುತ್ತವೆ. ಶಿವನ ಡಂಗುರದಲ್ಲಿ ಗೌಡರ ಕೇರಿಗಂಟಿಕೊಂಡೆ ಕನ್ನಡ ಗಂಡು ಮಕ್ಕಳ ಶಾಲೆ ಇದೆ. ಚಳುವಳಿಯಲ್ಲಿ ಮುಂದಾಗುವ ಚೆಂಬಸವನು ಬೆಳಗಾವಿಯಲ್ಲಿ ಬಿ.ಎ ಕಲಿತವನಾಗಿದ್ದಾನೆ. ಭಾಗಿರ್ತಿಯ ಗಂಡನಾದ ಕುಂಟರಪನು ಕಾನೂನು ಪದವಿ ಕಲಿತವನಾಗಿದ್ದಾನೆ. ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ ಶಿವಾಪುರದಲ್ಲಿ ಕಾಲೇಜನ್ನು ತೆರೆಯಬೇಕೆಂದು ಪ್ರಸ್ತಾಪ ಬಂದು ಅದನ್ನು ಮಲ್ಲೀಮಡುವಿನಲ್ಲಿ ಕಟ್ಟುವಂತೆ ನಕ್ಷೆಯನ್ನು ಸಿದ್ದಪಡಿಸಲಾಗಿದೆ. ಇಷ್ಟೇ ಅಲ್ಲದೆ ಮಾಣಿಕ್ಯಮ್ಮ ನಡೆಸುತ್ತಿರುವ 'ಕಸ್ತೂರ ಬಾ ಅನಾಥಾಶ್ರಮ' ಇದೆ. ಇಲ್ಲಿ ವಿಕಲಾಂಗ ಮಕ್ಕಳಿಗಾಗಿ ವಿಶೇಷ ತರಗತಿಗಳನ್ನು ನಡೆಸಲಾಗುತ್ತದೆ. ಅದೇರೀತಿ ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಸಿಂಗಾರೆವ್ವನು ಐದನೇ ತರಗತಿಯನ್ನು ಓದುತ್ತಿರುವಾಗಲೇ ಬಾಲ್ಯವಿವಾಹ ಎಂಬ ಭೂತಕ್ಕೆ ತುತ್ತಾಗುತ್ತಾಳೆ. ಶಿವಾಪುರದ ಅರಮನೆಯ ಹಕ್ಕುದಾರನಾದ ಸಿಂಗಾರೆವ್ವ ಮತ್ತು ಮರ್ಯಾನ ಸಂಬಂಧದಿಂದಾಗಿ ಹುಟ್ಟಿದ ಮಗ ರವಿಚಂದ್ರ ಅರಮನೆಯನ್ನು ಹರಾಜು ಹಾಕಲು ನಿರ್ಧರಿಸುತ್ತಾನೆ. ಆದರೆ ಈ ವಿಷಯ ತಿಳಿದ ಲೇಖಕರನ್ನು ಒಳಗೊಂಡಂತೆ ಇತರ ಊರಿನ ಕೆಲವು ಪ್ರಮುಖರು ರವಿಚಂದ್ರನ ಅನುಮತಿ ಪಡೆದು ಅರಮನೆಯನ್ನು ಹೈಸ್ಕೂಲಾಗಿ ಪರಿವರ್ತಿಸುತ್ತಾರೆ. ಇಲ್ಲಿ ಅರಮನೆಯೇ ಶಾಲೆಯಾಗಿ ಪರಿವರ್ತನೆಗೊಂಡದ್ದು ಶಿಕ್ಷಣದ ಮಹತ್ವವನ್ನು ಹೇಳುತ್ತದೆ. ಮುಖ್ಯವಾಗಿ ಆಧುನಿಕ ಶಿಕ್ಷಣಕ್ಕೆ

ಒಳಗಾದಂತಹ ಚೆಂಬಸವನು ಆಧುನಿಕ ಶಿಕ್ಷಣ ಸೃಷ್ಟಿಸಿರುವ ಪರಕೀಯತೆಯಿಂದ ಎಚ್ಚರದಿಂದ ಪಾರಾಗಿ ರೈತಾಪಿ ಜನರ ಜೊತೆ ಬದುಕಲು ಬಯಸಿದವನು. ಈ ರೀತಿ ಕೃತಿಗಳು ಶೈಕ್ಷಣಿಕ ಮಹತ್ವವನ್ನು ಸಾರುತ್ತವೆ.

ಕಾದಂಬರಿಗಳೆರಡೂ ಗತದ ಅನುಭವಗಳನ್ನು ವರ್ತಮಾನದಲ್ಲಿ ದಾಖಲಿಸುತ್ತಾ ಹೋಗಿರುವುದನ್ನು ಕಾಣಬಹುದು. ಎರಡೂ ಕಾದಂಬರಿಗಳೂ ಸಿಂಹಾವಲೋಕನ ಕ್ರಮದಲ್ಲಿ ನಿರೂಪಿತವಗಿವೆ. ಶೀನಿಂಗವ್ವ ಸಿಂಗಾರೆವ್ವ ಮತ್ತು ಅರಮನೆಯಲ್ಲಿ ತನ್ನ ಅನುಭವಗಳನ್ನು ದಾಖಲಿಸುತ್ತ ಹೋಗಿದ್ದಾಳೆ. ಕಥೆ ಸಂಭವಿಸಿದ ಕೆಲವು ವರ್ಷಗಳ ನಂತರದಲ್ಲಿ ಘಟನೆಯನ್ನು ನಿರೂಪಿಸಲ್ಪಡುತ್ತದೆ. ಈ ಕಥೆಯನ್ನು ಹೇಳುವ ಸಂದರ್ಭದಲ್ಲಿ ಸಿಂಗಾರೆವ್ವ ಬದುಕಿಲ್ಲ ಆವಳಿಗೂ ಮರ್ಯಾನಿಗೂ ಹುಟ್ಟಿದ ಮಗ ರವಿಚಂದ್ರ ಈಗ ಬೆಳೆದು ನಗರ ಸೇರಿದ್ದಾನೆ. ಶೀನಿಂಗವ್ವ ಕೊನೆಯ ಘಟ್ಟವಾದ ಮುಪ್ಪಿಗೆ ಬಂದು ನಿಂತಿದ್ದಾಳೆ. ಈ ಇಳಿ ವಯಸ್ಸಿನಲ್ಲಿ ತಾನು ಎಳೆಯ ವಯಸ್ಸಿನಿಂದಲೂ ಕಂಡ ಸಿಂಗಾರೆವ್ವನ ಬದುಕಿನ ಎಲ್ಲಾ ಮಜಲುಗಳನ್ನು ಪರಿಚಯಿಸುತ್ತಾಳೆ. ಮತ್ತು ತಾನು ಕಂಡಂತಹ ಪುರುಷ ಪ್ರಧಾನ ಸಂಪ್ರದಾಯಬದ್ಧ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಹೇಳುತ್ತಾಳೆ. ತನ್ನ ಬದುಕಿನಲ್ಲಿ ಕಂಡಂತಹ ನೈಜ ಘಟನೆಗಳನ್ನು ಕಾದಂಬರಿಯಲ್ಲಿ ವಿವರಿಸುತ್ತಾಳೆಯೇ ಹೊರತು ಯಾವುದೇ ಕಾಲ್ಪನಿಕ ಕಟ್ಟು ಕಥೆಯನ್ನು ಹೇಳುವುದಿಲ್ಲ.

ಹಾಗೆಯೇ ತುಂಗವ್ವನ ಬದುಕಿನಲ್ಲಿ ನಡೆದಂತಹ ಎಲ್ಲಾ ಘಟನೆಗಳನ್ನು ಶಿವನ ಡಂಗುರದಲ್ಲಿ ಪರಿಚಯಿಸಲಾಗಿದೆ. ಕೆಲವೊಂದು ಕಡೆ ಊರಿನಲ್ಲಿರುವ ಎಲ್ಲಾ ಪಾತ್ರಗಳು ಸಹ ತಮ್ಮ ಕಥೆಗಳ ಮುಖಾಂತರವೇ ವ್ಯವಹರಿಸುತ್ತವೆ. ಇಲ್ಲಿ ಚೆಂಬಸನು ತಾನು ಬಾಲ್ಯದಲ್ಲಿದ್ದಾಗ ಕಂಡಂತಹ ಬದುಕನ್ನು ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಮಾನವ ಸಂಬಂಧಗಳ ಸುತ್ತ ಹೆಣೆದುಕೊಂಡಿರುವ ಆಧುನಿಕ ವ್ಯವಸ್ಥೆ ಮುಂತಾದ ವಿಚಾರಗಳನ್ನು ನಿರೂಪಿಸಲಾಗಿದೆ. ಒಟ್ಟಿನಲ್ಲಿ ಎರಡು ಕಾದಂಬರಿಗಳು ಭೂತದ ಘಟನೆಗಳನ್ನು ವರ್ತಮಾನದಲ್ಲಿ ಹೇಳುತ್ತವೆ.

ಸಾಮಾಜಿಕ ಕಟ್ಟುಪಾಡುಗಳ ಹಿನ್ನೆಲೆಯಲ್ಲಿ ಶಿವನ ಡಂಗುರ ಕಾದಂಬರಿಯಲ್ಲಿ ದೇವದಾಸಿ ಪದ್ಧತಿಯ ಪ್ರಸ್ತಾಪಬಂದು ಆ ಒಂದು ವ್ಯವಸ್ಥೆಗೆ ತುಂಗವ್ವ ಮೊದಲು ಬಲಿಯಾದವಳು. ಗೌಡನು ಆಕೆಯನ್ನು ನೋಡಿ ಮೋಹಗೊಂಡು ಅವಳನ್ನು ತನ್ನ ಹಳ್ಳಿಗೆ ಕರೆತಂದು ಹೊರಗೇರಿಯಲ್ಲಿ ಮನೆ ಮಾಡಿಸಿ ಇರಿಸುತ್ತಾನೆ. ನಂತರ ತುಂಗವ್ವನ ತಮ್ಮನ ಮಗಳಾದ ಶಾರವ್ವನು ಸಹ ಈ ಪದ್ಧತಿಗೆ ಬಲಿಯಾಗುತ್ತಾಳೆ. ಅವಳು ದೊಡ್ಡವಳಾದಾಗ ಕುಂಟಿರಪನ ಕಣ್ಣುಬಿದ್ದು ಗೌಡನ ಮುಖಾಂತರ

ಅವಳನ್ನು ದೇವದಾಸಿ ಪದ್ಧತಿಗೆ ಬಲಿಕೊಡಲು ಪ್ರಯತ್ನಿಸಿದರು ಭಾಗೀರ್ತಿಯ ಸಹಾಯದಿಂದ ಅವಳು ಚೆಂಬಸನನ್ನು ಮದುವೆಯಾಗಲು ಸಹಾಯ ಮಾಡುತ್ತಾಳೆ. ಈ ರೀತಿ ಸಾಮಾಜಿಕ ಕಟ್ಟುಪಾಡುಗಳಿಗೆ ಒಳಗಾಗುವಂತದ್ದು ಸಿಂಗಾರೆವ್ವನು ಸಹ ತನ್ನ ತವರು ಮನೆಯಿಂದ ಮದುವೆಯಾಗಿ ಗಂಡನ ಮನೆಗೆ ಬಂದಮೇಲೆ ಮರಳಿ ತವರಿಗೆ ಹೋಗುವ ಪ್ರಯತ್ನ ಮಾಡುವುದಿಲ್ಲ. ಅನೇಕ ಕನಸ್ಸುಗಳನ್ನು ಕಟ್ಟಿಕೊಂಡು ಅರಮನೆಗೆ ಬಂದಮೇಲೆ ಅವಳ ಕನಸ್ಸುಗಳೆಲ್ಲವು ನುಚ್ಚುನೂರಾಗಿ ಅರಮನೆಯೇ ಸೆರೆಮನೆಯಾಗಿ ಪರಿಣಮಿಸುತ್ತದೆ. ಈ ಸಾಮಾಜಿಕ ಕಟ್ಟುಪಾಡುಗಳಿಂದ ಹೊರಬರಲು ಸಾಧ್ಯವೇ ಆಗುವುದಿಲ್ಲ. ಅತ್ತೆಯ ಬಯಕೆ, ಗಂಡನ ನಡತೆ, ಅರಮನೆಯ ಉಳಿವು, ಎಲ್ಲಾ ಭಾರದಿಂದ ಅವಳು ಮುಕ್ತಿಯನ್ನು ಕಾಣುವುದು ಅವಳ ಸಾವಿನ ನಂತರವೇ.

ನಂಬಿಕೆ ಸಂಪ್ರದಾಯಗಳ ಹಿನ್ನಲೆಯಲ್ಲಿ ನಮಃಶ್ಶಿವಾಯ ಸ್ವಾಮಿ, ಅಮ್ಮನ ಬೆಟ್ಟದಯ್ಯ, ಹುಚ್ಚಯ್ಯ ಎಲ್ಲರು ನಿಲ್ಲುತ್ತಾರೆ. ಹೊಸ ಶಿವಾಪುರವನ್ನು ಕಟ್ಟಲು ನಮಃಶ್ಶಿವಾಯ ಸ್ವಾಮಿ ತನ್ನಿಂದಾದಂತಹ ಸಹಾಯವನ್ನು ಚೆಂಬಸವನಿಗೆ ಮಾಡುತ್ತಾನೆ. ಅಮ್ಮನ ಬೆಟ್ಟದ ಅಯ್ಯ 'ಶಿವಾಪುರವನ್ನು ಮತ್ತೆ ನಿನ್ನವರಿಂದ ಕಟ್ಟು ಎಂದು ಆಶಿರ್ವಾದ ಮಾಡಿದರೆ', ಮಾಂತ್ರಿಕ ವಿದ್ಯೆ ಕಲಿತ ಜಂಗಮ ಹುಚ್ಚಯ್ಯ ಬೇರೆಯಾಗಿಯೇ ನಿಲ್ಲುತ್ತಾನೆ. ಸಿಂಗಾರೆವ್ವನಿಗೆ ಮಕ್ಕಳಾಗುವಂತೆ ಪೂಜೆ ಮಾಡುತ್ತೇನೆಂದು ತಿಳಿಸಿ ಪೂಜೆಯನ್ನು ಮಾಡಲು ಅಮವಾಸೆಯ ದಿನ ಅರಮನೆಯಲ್ಲಿ ಸಿಂಗಾರೆವ್ವ, ಶೀನಿಂಗಿ, ಹುಚ್ಚಯ್ಯ ಮೂವರು ಸೇರಿದಾಗ ಆಕಸ್ಮಿಕವಾಗಿ ಬಂದ ದೇಸಾಯಿ ಗುಂಡು ಹಾರಿಸಿದ್ದಕ್ಕೆ ಹುಚ್ಚಯ್ಯನ ಪ್ರಾಣ ಪಕ್ಷಿ ಹಾರಿಹೊಗುತ್ತದೆ. ಈ ಸಾವಿನಿಂದ ಹೆದರಿದ ಸಿಂಗಾರೆವ್ವ, ಶೀನಿಂಗಿ ಹೆಣವನ್ನು ಸಾಗಿಸಲು ಮರ್ಯ್ಯಾನ ಸಹಾಯ ಪಡೆಯಯತ್ತಾರೆ.

ಈ ರೀತಿಯ ನಂಬಿಕೆ, ಸಂಪ್ರದಾಯ, ಮತ್ತು ಆಚರಣೆಗಳು ಶಿವನ ಡಂಗುರ ಕಾದಂಬರಿಯಲ್ಲೂ ಬರುತ್ತವೆ. ಶಿವಾಪುರ ಎಂಬ ಹೆಸರು ಬರಲು ಭುಲೋಕಕ್ಕೆ ಶಿವ ಪಾರ್ವತಿಯರು ಬಂಬದು ಎಂದು ನಂಬಿರುವ ಗ್ರಾಮದ ಜನರು. ಆಚರಣೆಯ ವಿಷಯಕ್ಕೆ ಬಂದರೆ ಪಾರೋತಿಗೆ ಗಂಡು ಮಗುವಾಗಲಿಲ್ಲ ಎಂಬ ಕಾರಣಕ್ಕೆ ಬರಮೇಗೌಡ ಯಜ್ಞ ಯಾಗಾದಿಗಳನ್ನು ಮಾಡಿಸುವುದು ಸಹ ಒಂದು ಮೂಢನಂಬಿಕೆಯ ಸ್ವರೂಪ. ಸಿಂಗಾರೆವ್ವ ಮತ್ತು ಅರಮನೆ ಯಲ್ಲಿ ಕುಮುದವ್ವನ ಆಚರಣೆಯು ಸಹ ಒಂದು ರೀತಿಯ ವಿಶಿಷ್ಟವಾದ ಸಂಪ್ರದಾಯ ವಿಧಾನವಾಗಿ ಗೋಚರಿಸುತ್ತದೆ. ಈ ರೀತಿ ಸಂಪ್ರದಾಯಗಳ ಮುಖಾಂತರವು ಕಾದಂಬರಿಗಳು ತಮ್ಮ ಎಳೆಯನ್ನು ಅನಾವರಣ ಮಾಡುತ್ತವೆ.

ಕೃತಿಗಳೆರಡರಲ್ಲೂ ಕೆಲವೊಂದು ಪಾತ್ರಗಳು ಆದರ್ಶವಾಗಿ ನಿಲ್ಲುತ್ತವೆ. ಶಾರವ್ವನ ಪಾತ್ರವು ಪ್ರಮುಖ ಏಕೆಂದರೆ ದೇವದಾಸಿಯಾಗಿದ್ದವಳನ್ನು ಚೆಂಬಸನು ಪ್ರೀತಿಸಿ ಆ ದೇವದಾಸಿ ಪದ್ಧತಿಯಿಂದ ಮುಕ್ತಳನ್ನಾಗಿ ಮಾಡಿದ್ದಕ್ಕೆ ಅವಳು ಮತ್ತಷ್ಟು ಅವನ ಮೇಲೆ ಭರವಸೆಯನ್ನಿಡುತ್ತಾಳೆ. ಒಂದು ಕಡೆ ಚೆಂಬಸನು ಜೈಲುವಾಸದಲ್ಲಿದ್ದಾಗ ಶಾರವ್ವನ ಮೇಲೆ ತಪ್ಪು ಕಲ್ಪನೆ ಮಾಡುತ್ತಾನೆ. ಆದರೆ ಶಾರವ್ವ ಚೆಂಬಸನು ಬರುವಿಕೆಗಾಗಿ ಕಾಯುತ್ತಾಳೆ. ತನ್ನ ಹೆಣ್ತನವನ್ನು ಕಳೆದುಕೊಂಡು ರಾತ್ರೋರಾತ್ರಿ ಊರು ಬಿಟ್ಟು ನಮಃಶಿವಾಯನ ಸಹಾಯದಿಂದ ಆಶ್ರಮ ಸೇರಿ ಭಾಗೀರ್ಥಿಯ ವಿಕಲಾಂಗ ಮಗುವಿಗೆ ತಾಯಿಯಾಗಿ ಅದರ ಪಾಲನೆ ಪೋಷಣೆಯಲ್ಲಿ ತೊಡಗಿ ಪ್ರತಿದಿನ ಕಣ್ಣೀರಿನಲ್ಲಿಯೇ ಕೈ ತೊಳೆಯುವಂತಹ ಪರಿಸ್ಥಿತಿಯಲ್ಲಿರುತ್ತಾಳೆ.

ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯಲ್ಲಿ ಸಿಂಗಾರೆವ್ವ ಹಾಗೂ ಮರ್ಯಾನ ಪಾತ್ರವೂ ಮುಖ್ಯ. "ಸಿಂಗಾರೆವ್ವನ ತಂದೆ ಮರ್ಯಾನ ತಾಯಿಯನ್ನು ಶೋಷಿಸಿದರೆ ಮರ್ಯಾ ಮಾತ್ರ ಸಿಂಗಾರೆವ್ವನನ್ನು ಪೋಷಿಸುತ್ತಾನೆ". ಸಿಂಗಾರೆವ್ವನಿಗೆ ಆರೋಗ್ಯ ಸರಿಇಲ್ಲದಿದ್ದಾಗ ಅವಳಿಗಾಗಿ ಔಷಧಿಯನ್ನು ಮಾಡಿಸಿಕೊಡುತ್ತಾನೆ. ಅವಳಿಗಾಗಿ ಮಾವಿನಕಾಯಿ ತಂದು ಕೊಡುತ್ತಾನೆ. ಇಣಚಿಯನ್ನು ತಂದು ಕೊಡುತ್ತಾನೆ. ಮೊಲವನ್ನು ಬೇಟೆಯಾಡಿ ತಂದುಕೊಡುತ್ತಾನೆ. ಹುಚ್ಚಯ್ಯನ ಹೆಣವನ್ನು ಸಾಗಿಸುತ್ತಾನೆ. ಅರಮನೆ ಆಸ್ತಿ ಶೆಟ್ಟಿಯ ಪಾಲಾಗದಂತೆ ಕಾಪಾಡುತ್ತಾನೆ. ದೇಸಾಯಿಗೆ ಸಹಾಯ ಮಾಡುತ್ತಾನೆ. ಸಿಂಗಾರೆವ್ವನಿಗೆ ತಾಯ್ತನ ನೀಡುತ್ತಾನೆ. ಕೊನೆಗೆ ಸಿಂಗಾರೆವ್ವ ಸತ್ತಾಗ ತಾನೂ ಅವಳಿಗಾಗಿ ಸರ್ಪದಿಂದ ಕಚ್ಚಿಸಿಕೊಂಡು ಸಾಯುತ್ತಾನೆ. ಮರ್ಯಾನ ಈ ವ್ಯಕ್ತಿತ್ವ ಸಿಂಗಾರೆವ್ವಳ ಮೇಲಿನ ಪ್ರೀತಿಯನ್ನು ತೋರಿಸುತ್ತದೆ.

ಪಿತೃ ಪ್ರಾಧಾನ್ಯ ವ್ಯವಸ್ಥೆಯ ಅಟ್ಟಹಾಸ, ಕ್ರೌರ್ಯ, ಊಳಿಗಮಾನ್ಯ ವ್ಯವಸ್ಥೆ, ದೇವದಾಸಿ ಪದ್ಧತಿ, ಸ್ತ್ರೀ ಶೋಷಣೆ, ರಾಜಕೀಯ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಕೆಳವರ್ಗದವರ ಶೋಷಣೆ, ಜಾತಿ ವ್ಯವಸ್ಥೆ, ಜಾನಪದೀಯ ಹಿನ್ನೆಲೆ, ಮೂಢನಂಬಿಕೆ, ಆಚಾರ-ವಿಚಾರ, ಗಂಡು-ಹೆಣ್ಣಿನ ಸಂಘರ್ಷ, ಆಧುನಿಕರಣ, ಉದ್ಧಾರದ ಹೆಸರಿನಲ್ಲಿ ದುರಂತತೆಗಳನ್ನು ಕೃತಿಗಳಲ್ಲಿ ಚರ್ಚಿಸಲಾಗಿದೆ.

ಪ್ರಜಾಪ್ರಭುತ್ವ ಸಮಾಜದಲ್ಲಿ ಆಧುನಿಕತೆ ಬದಲಾದಂತೆ ಅದರ ಪರಿಣಾಮ ಎಲ್ಲದರಮೇಲೂ ಬೀಳುವಂತದ್ದು ಆದರೆ ಅದೇ ಆಧುನಿಕತೆಯಿಂದ ಒಂದು ಸಂಸ್ಕೃತಿಯನ್ನೇ ವಿನಾಶದ ಹಂಚಿಗೆ ತಲುಪುತ್ತಿರುವಂತಹ ಶಿವಾಪುರದ ಹಳ್ಳಿಯ ಚಿತ್ರಣ ಇಂದು ನಮ್ಮ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆಯುವಂತದ್ದು ಅನೇಕ ರೀತಿಯದಾದಂತಹ ಅವಘಡಗಳಿಂದ

ಅವುಗಳ ಸ್ಥಿತಿ–ಗತಿಗಳನ್ನು ತಿಳಿಯಬಹುದು ಜೊತೆಗೆ ಸಮಾಜದಿಂದ ಬೇರ್ಪಡಿಸಬೇಕೆಂದಿರುವ ದೇವದಾಸಿ ಪದ್ಧತಿ, ಬಾಲ್ಯವಿವಾಹ, ಕೆಳವರ್ಗಗಳ ಶೋಷಣೆ, ಹೀಗೆ ಅನೇಕ ವ್ಯವಸ್ಥೆಗಳನ್ನು ಇಂದು ಸಹ ಸಮಾಜದಲ್ಲಿ ಆಚರಣೆಯಲ್ಲಿರಿಸಿಕೊಂಡಿದೆ. ಕಾರಣ ಅದೊಂದು ಸಂಸ್ಕೃತಿ ಎಂದು ಭಾವಿಸಿರುವುದು ಇಂತಹ ಸಂಸ್ಕೃತಿಗಳು ಸಮಾಜಕ್ಕೆ ಅನಾವಶ್ಯಕ ಇವುಗಳ ವಿರುದ್ಧ ಹೋರಾಟ ಅನಿವಾರ್ಯವಾಗಿವೆ. ಎಂಬುದನ್ನು ಕೃತಿಗಳು ತಿಳಿಸುತ್ತವೆ.

ವಚನಗಳ ಕಾಲದಿಂದಲೂ ಸಮಾಜದಲ್ಲಿ ಗಂಡು–ಹೆಣ್ಣು ಕೀಳಲ್ಲ ಇಬ್ಬರು ಒಂದೇ ಎನ್ನುವ ವಚನಗಳ ಮಹತ್ವ, ಇಂದಿಗೂ ಸುಳ್ಳಾಗಿವೆ. ಏಕೆಂದರೆ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣನ್ನು ಪೂಜಿಸುವಂತಹ ವ್ಯವಸ್ಥೆಯಲ್ಲಿ ಅದೇ ಹೆಣ್ಣನ್ನು ಕೀಳಾಗಿ, ಒಂದು ಭೋಗದ ವಸ್ತುವಾಗಿ, ಗಂಡಿನ ಅಡಿಯಾಳನ್ನಾಗಿ, ಮಕ್ಕಳನ್ನು ಹೆರುವ ಯಂತ್ರವಾಗಿ, ಒಬ್ಬ ಮನೆಯ ಕೆಲಸದಾಕೆಯಾಗಿ ನೋಡುತ್ತಿದೆ. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾ", ಎನ್ನುವ ಸಂಸ್ಕೃತದ ವಾಕ್ಯ ಇಂದು ಸುಳ್ಳಾಗಿದೆ. ಈ ವಾಕ್ಯದ ಮಹತ್ವ 'ಎಲ್ಲಿ ಹೆಣ್ಣನ್ನು ಪೂಜಿಸುತ್ತಾರೋ ಅಲ್ಲಿ ದೇವಾನುದೇವತೆಗಳೂ ನೆಲೆಸಿರುತ್ತಾರೆ', ಎಂಬುದಾಗಿದೆ. ಪೂಜನೀಯ ದೃಷ್ಟಿಯಿಂದಲ್ಲ ಅವಳು ಗಂಡಿನಂತೆ ಒಂದು ಜೀವ ಎನ್ನುವ ಬೆಲೆಯನ್ನು ಕೊಡದೆ ನಿಕೃಷ್ಟವಾಗಿ ನೋಡುವ ಸಮಾಜ ಇದಾಗಿದೆ.

ಪುರಾಣ ಪುಣ್ಯ ಕಥೆಗಳಲ್ಲಿ ರಾಜ್ಯಾಡಳಿದಲ್ಲಿ ಹೆಣ್ಣನ್ನು ಬಲಿಕೊಡುವಂತಹ ವ್ಯವಸ್ಥೆ ಇತ್ತು ಆದರೆ ಇಂದು ಅದು ಬದಲಾಗಿ ಅಧಿಕಾರದ ದೃಷ್ಟಿಯಿಂದ ಹಳ್ಳಿ, ಸಾಮಾಜ, ಕುಟುಂಬ ವ್ಯವಸ್ಥೆಯನ್ನೇ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ. ಅದರಿಂದ ಸಂಸ್ಕೃತಿಯ ಜೊತೆಗೆ ಸಮಾಜವೇ ವಿನಾಶ ಹೊಂದುತ್ತದೆ. ಒಂದಲ್ಲಾ ಒಂದು ದೃಷ್ಟಿಯಿಂದ ಇದೆಲ್ಲದಕ್ಕೆ ವಸಾಹತುಕರಣವೇ ಸಾಕ್ಷಿ ಎಂದಾದರೆ ಅದು ತಕ್ಕ ಮಟ್ಟಿಗೆ ಸರಿ–ತಪ್ಪು ಎಂದಾಗುತ್ತದೆ. ಅನೇಕ ರೀತಿಯಲ್ಲಿ ಅವಶ್ಯಕವಾಗಿರುವಂತಹ ಸ್ಕೂಲೂ, ಕಾಲೇಜು, ಆಸ್ಪತ್ರೆ , ಪೋಸ್ಟಾಫೀಸು, ವೈಜ್ಞಾನಿಕ ಉಪಕರಣಗಳು ಬೇಕೆ ಬೇಕೂ ಆದರೆ ಅವಕ್ಕಾಗಿ ಅವುಗಳಿಂದ ಉಪಯೋಗವಾಗಬೇಕೆ ಹೊರತು ಅಪಾಯ ವಾಗುವಂತಾಗಬಾರದು. ಸಮಾಜದ ಹಿತದೃಷ್ಟಿಯಿಂದ ಸಾಹಿತ್ಯದ ಬರವಣಿಗೆಗಳು ಉಪಯುಕ್ತವಾಗುತ್ತವೆ. ಅದೇ ಹಿನ್ನೆಲೆಯಲ್ಲಿ ಜಾನಪದೀಯ ಮಾರ್ಗದ ಮುಖಾಂತರ ಚಂದ್ರಶೇಖರ ಕಂಬಾರರ ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಗಳು ಸಾಕ್ಷಿಯಾಗುತ್ತವೆ. ಒಂದು ಕಾದಂಬರಿಯಲ್ಲಿ ಸಮಾಜದ ಒಟ್ಟಾರೆ ಚಿತ್ರಣವನ್ನು ಚಿತ್ರಿಸಿದರೆ

ಮತ್ತೊಂದರಲ್ಲಿ ಒಂದು ಸಮಾಜದಲ್ಲಿ ಪುರುಷ ಪ್ರಧಾನವಾದ ಸಮಾಜದಲ್ಲಿ ಹೆಣ್ಣಿನ ಸ್ಥಿತಿಯನ್ನು ಚಿತ್ರಿಸಿದ್ದಾರೆ.

ಒಟ್ಟಾರೆ ಕಾದಂಬರಿಗಳ ಮುಖಾಂತರ ಪ್ರಸ್ತುತವಾಗಿಯೂ ಸಮಾಜ ಯಾವ ರೀತಿಯ ಸಮಸ್ಯೆಗಳಿಂದ ತುಂಬಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಅಧ್ಯಯನದ ದೃಷ್ಟಿಯಿಂದ ಮತ್ತು ಸಮಾಜದ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ಜಾನಪದೀಯ ಹಿನ್ನೆಲೆಯಲ್ಲಿ ಈ ಎರಡು ಕಾದಂಬರಿಗಳು ಸಾಹಿತ್ಯ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿವೆ.

* * * * *

ಅಧ್ಯಾಯ –5

ಪಾತ್ರ ಚಿತ್ರಣ ಹಾಗೂ ಸನ್ನಿವೇಶ ರಚನೆ

ಕಂಬಾರರ ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆಗಳಲ್ಲಿ ಹಲವಾರು ಪಾತ್ರಗಳು ಬರುತ್ತವೆ. ಈ ಪಾತ್ರಗಳನ್ನು ನಾನು ಪುರುಷ ಪಾತ್ರಗಳು, ಸ್ತ್ರೀ ಪಾತ್ರಗಳು ಮತ್ತು ಮಕ್ಕಳ ಪಾತ್ರಗಳೆಂದು ಅಧ್ಯಯನದ ದೃಷ್ಟಿಯಿಂದ ವಿಂಗಡಿಸಿಕೊಂಳ್ಳಲಾಗಿದೆ.

ಒಂದು ಕೃತಿಯ ಬೆಳವಣಿಗೆಗೆ ವಸ್ತು ಎಷ್ಟು ಮುಖ್ಯವೋ ಹಾಗೆಯೇ ಪಾತ್ರ ಮತ್ತು ಸನ್ನಿವೇಶಗಳು ಮುಖ್ಯವಾಗುತ್ತವೆ. ಎರಡು ಕೃತಿಗಳಲ್ಲಿ ಬರುವಂತಹ ಸನ್ನಿವೇಶಗಳಿಂದ ಕಾದಂಬರಿಯು ಬೆಳೆಯುತ್ತಾ ಹೋಗುತ್ತವೆ. ಕೃತಿಗಳಲ್ಲಿ ಬರುವಂತಹ ಪಾತ್ರಗಳು, ವ್ಯಕ್ತಿಗಳು, ಸನ್ನಿವೇಶಗಳು, ಘಟನೆಗಳನ್ನು ಕುರಿತು ಚರ್ಚಿಸಲಾಗುತ್ತದೆ.

ಶಿವಾಪುರ : ಕಂಬಾರರ ಕೃತಿಗಳಲ್ಲಿ ಬಹುತೇಕ ಬರುವ ಹಳ್ಳಿಯೇ ಶಿವಾಪುರ ಈ ಹೆಸರು ಪ್ರಸ್ತುತವಾಗಿ ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ ಎರಡು ಕಾದಂಬರಿಗಳ ಕಥೆಯು ಪ್ರಾರಂಭವಾಗುವುದು ಈ ಶಿವಾಪುರದಿಂದಲೇ ಈಗಿನ ಘೋಡಗೇರಿಯ ಪಶ್ಚಿಮದಲ್ಲಿ ಸುಮಾರು ಒಂದು ಮೈಲು ದೂರದಲ್ಲಿ ಹಿರಣ್ಯಕೇಶಿ ಮತ್ತು ಘಟಪ್ರಭಾ ನದಿಗಳು ಕೂಡುವ ಕೂಡಲಸಂಗಮ ಇದೆ. ಅಲ್ಲಿ ಒಂದು ಊರಿತ್ತು ಅದೇ ಶಿವಾಪುರ ಎಂದು ಲೇಖಕರು ಹೇಳುತ್ತಾರೆ. ಇದರ ಬಗ್ಗೆ ಕುರುಬರ ಹಾಡಿನಲ್ಲಿ ಇದರ ಸಂಗತಿ ಇದೆ. ಇಲ್ಲಿ ಬರುವ ಮಲ್ಲೀಮಡುವಿನ ವರ್ಣನೆ. ಪತ್ರಿ ಮರದ ವರ್ಣನೆ. ದಟ್ಟ ಅರಣ್ಯಗಳ ವರ್ಣನೆ. ನಿರ್ವಾಣೆಪ್ಪನ ಗುಡ್ಡದ ಬಗ್ಗೆ ವರ್ಣನೆ ಇದೆ. ಮುಂದೆ ಈ ಊರಿನಲ್ಲಿ ಕಾಲೇಜು ಆಸ್ಪತ್ರೆ ಕಟ್ಟಬೇಕೆಂದು ಬರಮೇಗೌಡ ಮಾಡುವ ಪ್ರಯತ್ನವೇ ವಿಪತ್ತಾಗಿ ಹಳ್ಳಿಯು ವಿನಾಶದ ಹಂಚಿಗೆ ತಲುಪಬೇಕಾಗುತ್ತದೆ. ನಂತರ ಸಿಂಗಾರೆವ್ವ ಮತ್ತು ಅರಮನೆಯಲ್ಲಿಯೂ ಲೇಖಕರು ತಮ್ಮ ಸ್ನೇಹಿತನ ಜೊತೆ ಈ ಶಿವಾಪುರಕ್ಕೆ ಬರುತ್ತಾರೆ. ಶಿವಪುರದ ಅರಮನೆಯ ಹರಾಜಿನ ವಿಷಯ ತಿಳಿದು ಆ ಅರಮನೆಯ ಬಗ್ಗೆ ತಿಳಿಯಲು ಮುಂದಾಗುತ್ತಾರೆ. ಈ ಶಿವಾಪುರದ ಕೇಂದ್ರಬಿಂದು 'ಅರಮನೆ' ಅದೇ ರೀತಿ ಶೀನಿಂಗವ್ವ ಈ ಅರಮನೆಯ ವಿಚಾರವನ್ನು ತಿಳಿಸುವುದರ ಜೊತೆಗೆ ಮಧ್ಯೆ ಮಧ್ಯೆ ಶಿವಾಪುರದ ಬಗ್ಗೆಯೂ ಸ್ವಲ್ಪ ವಿವರಣೆ ಸಿಗುತ್ತದೆ. ಪತ್ರಿ ಬನದ ವರ್ಣನೆ. ಶಿವಾಪುರದ ಜಾತ್ರೆಯ ವಿಶೇಷ ಕುಮುದವ್ವನ ದೇವಾಲಯ ಹುಣಸೇಮೆಳೆಯ ತೋಪು. ಒಟ್ಟಾರೆ ಬಯಲು ಸೀಮೆಯ ವರ್ಣನೆಯ ಬಗ್ಗೆ ಲೇಖಕರು ವರ್ಣನೆ ಮಾಡುತ್ತಾರೆ.

ಶಿವಾಪುರದ ವರ್ಣನೆಯಲ್ಲಿ ಅಲ್ಲಿ ಬರುವಂತಹ ಆಚರಣೆಗಳು ವ್ಯಕ್ತಿಗಳು ಎಲ್ಲವು ಒಂದಲ್ಲ ಒಂದು ವಿಶೇಷವನ್ನಿಟ್ಟುಕೊಂಡು ತಮ್ಮ ಪಾತ್ರಗಳ ಮುಖೇನ ಏನನ್ನೋ ಹೇಳಲು ಹೊರಟಿರುವುದಂತು ನಿಜ. ಅದೇ ರೀತಿ ಆ ಪಾತ್ರಗಳು ಶಿವಾಪುರಕ್ಕೆ ಹೊಂದಿಕೊಂಡಂತೆ ಜಾನಪದೀಯ ಹಿನ್ನೆಲೆಯಲ್ಲಿ ಬರುವಂತಹ ಬಗ್ಗೆ ಚಿತ್ತಾಕರ್ಷಕವಾಗಿದೆ. ಇದನ್ನು ಲೇಖಕರು ತಮ್ಮ ಕೃತಿಗಳು ಮೊದಲು ಶಿವಾಪುರದಿಂದಲೇ ಪ್ರಾರಂಭ ಮಾಡುವುದನ್ನು ತಿಳಿಯಬಹುದು. ತಮ್ಮ ಕೃತಿಗಳಲ್ಲಿ ಇವರು ಶಿವಾಪುರದ ಬಗ್ಗೆ ಹೇಳುತ್ತಾರೆ. ಕಾರಣ ಜಾನಪದೀಯ ಹಿನ್ನೆಲೆಯಲ್ಲಿ ಜೋಗತಿರ ಹಾಡಿನಲ್ಲಿ ಕುರುಬರ ಹಾಡಿನಲ್ಲಿ ಪುರಾಣದ ಹಿನ್ನೆಲೆಯಲ್ಲಿ ಇದಕ್ಕೊಂದು ಇತಿಹಾಸವಿರುವುದನ್ನು ಅವರು ವಿವರಿಸುತ್ತಾರೆ. ಆದಕ್ಕೆ ಈ ಕೃತಿಗಳಲ್ಲಿಯೂ ಶಿವಾಪುರ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಇದಕ್ಕಾಗಿಯೇ ಲೇಖಕರಿಗೆ 'ಶಿವಾಪುರದ ಕವಿ' ಎಂದೇ ಕರೆಯುವ ವಾಡಿಕೆಯೂ ಇದೆ.

ತುಂಗವ್ವ :- ಶಿವನ ಡಂಗುರ ಕೃತಿಯಲ್ಲಿ ಬರುವಂತಹ ತುಂಗವ್ವನ ಪಾತ್ರದಲ್ಲಿ ಅನೇಕ ರೀತಿಯಾದಂತಹ ಪಾತ್ರಗಳು ಬರುತ್ತವೆ. ಮೊದಲನೆಯದಾಗಿ ಒಬ್ಬ ದೇವದಾಸಿಯಾಗಿ ಕಾಣಿಸಿಕೊಳ್ಳುವ ತುಂಗವ್ವ, ಗೌಡನ ಒಲವಿನಿಂದ ಅವನ ಜೊತೆಯಲ್ಲಿ ಶಿವಾಪುರಕ್ಕೆ ಬಂದು ನಿಲ್ಲುತ್ತಾಳೆ. ನಂತರ ಗೌಡನ ಸಂತಾನವಾದ ಲಸಮನನ್ನು ಸಾಕುವುದರೊಂದಿಗೆ ಗೌಡನ ತಮ್ಮನ ಮಗ ತಬ್ಬಲಿಯಾದ ಚೆಂಬಸವನನ್ನು ಸಾಕುವುದರ ಮುಖಾಂತರ ಸಾಕುತಾಯಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾಳೆ. ಇವರ ಲಾಲನೆ-ಪಾಲನೆ ಮಾಡುತ್ತಾಳೆ. ಊರು ವಿನಾಶದ ಹಂಚಿಗೆ ತಲುಪುತ್ತಿದೆ. ಇದರ ಬಗ್ಗೆ ಊರಿನಲ್ಲಿ ಯಾರು ತಲೆಕೆಡಸಿಕೊಳ್ಳದಿರುವಾಗ ಅನಕ್ಷರಸ್ಥ ಜೊಗತಿ ಹೆಣ್ಣು ಮಗಳಿಗೆ ಈ ವಿಷಯ ತಿಳಿದು ಸಮಕ್ರಿವಾಯನಿಂದ ಹಳ್ಳಿಯ ಜನಕ್ಕೆ ಬುದ್ಧಿ ಹೇಳುವಂತೆ ಕೇಳುತ್ತಾಳೆ. ಇಲ್ಲಿ ಸಮಾಜಸ ಸೇವಕಿಯ ಪಾತ್ರ ಚಿತ್ರಣದಲ್ಲಿ ತುಂಗವ್ವ ಕಾಣಸಿಗುತ್ತಾಳೆ. ಇದನ್ನು ಕಂಬಾರರು ಈ ಪಾತ್ರದ ಮುಖಾಂತರ ಯಾಕೆ ತರುತ್ತಾರೆಂಬುದು ಮುಖ್ಯ ವಿಷಯ. ಕೆಳವರ್ಗದಿಂದ ಬಂದಂತಹ ಒಂದು ಹೆಣ್ಣುಮಗಳು ಯಾವರೀತಿ ಸಮಾಜಕ್ಕೆ ತನ್ನ ಕೊಡುಗೆಯನ್ನು ನೀಡಲು ಮುಂದೆ ಬರುತ್ತಾಳೆಂಬುದು ಸೂಕ್ಷ್ಮವಾಗಿ ತಿಳಿಸುತ್ತಾರೆ.

ಚೆಂಬಸವ :- ಬರಮೇಗೌಡನ ತಮ್ಮನಾದ ಈಸುರೇಗೌಡ ಮತ್ತು ಶಿವಕ್ಕನ ಮಗ. ತಂದೆ ಗಾಂಧಿ ಚಳುವಳಿಯಲ್ಲಿ ಪಾಲ್ಗೊಂಡಿದ್ದಾಗ ಒಂದು ಚಳುವಳಿಯ ಗೊಲಿಬಾರ್‌ನಲ್ಲಿ ಸತ್ತನು. ತಾಯಿ ಚೆಂಬಸವನ ಹೆರಿಗೆಯ ಸಮಯದಲ್ಲಿ ಸತ್ತಳು. ಬ್ರೀಟಿಷ ರಿಂದ ಮಗುವನ್ನು ರಕ್ಷಿಸಲು ಸಾವಳಗಿ

ಮಠದಲ್ಲಿ ರಕ್ಷಣೆ ಪಡೆದು ಮರಳಿ ಊರಿಗೆ ಬಂದರು. ಬೆಳಗಾವಿಯಲ್ಲಿ ಬಿ.ಎ ಪದವಿಯನ್ನು ಪಡೆದು ವಿದ್ಯಾವಂತನಾದರು ತನ್ನ ಹಳ್ಳಿಯ ಜಾನಪದ ಶೈಲಿಯನ್ನು ಮಾತ್ರ ಮರೆಯುವುದಿಲ್ಲ.

ಇಂದಿನ ಸಮಾಜದಲ್ಲಿ ಆಧುನಿಕ ಶಿಕ್ಷಣದಿಂದ ಸಂಸ್ಕೃತಿ ಯಾವ ರೀತಿಯಾಗುತ್ತಿದೆ. ಅದನ್ನು ಮತ್ತೆ ಯಾವ ರೀತಿ ಕಟ್ಟಬೇಕೆಂಬುದನ್ನು ಈ ಪಾತ್ರದಲ್ಲಿ ಚಿತ್ರಿಸುತ್ತಾರೆ. ಪರಂಪರಾಗತವಾಗಿ ಬಂದತಹ ಜಾತಿ ವ್ಯವಸ್ಥೆಯನ್ನು ಕಿತ್ತೊಗೆಯುತ್ತಾನೆ. ತುಂಗವ್ವನ ಜೊತೆಯಲ್ಲಿ ಬೆಳೆದವನಾದ್ದರಿಂದ ಲಸಮನನ್ನು ತನ್ನ ಸ್ವಂತ ತಮ್ಮನಂತೆ ಭಾವಿಸುತ್ತಾನೆ. ಅದೇ ರೀತಿ ಸಂಪ್ರದಾಯದ ಹೆಸರಿನಲ್ಲಿ ಮಾಡುವ ದೇವದಾಸಿ ಪದ್ಧತಿಯನ್ನು ತಿರಸ್ಕರಿಸಿ ದೇವದಾಸಿಗೆಂದು ಮೀಸಲಿದ್ದ ಶಾರವ್ವನನ್ನು ಪ್ರೀತಿಸಿ ಮದುವೆಯಾಗುವ ಮುಖಾಂತರ ಒಂದು ಪದ್ಧತಿಯನ್ನು ನಿರ್ಮೂಲಮಾಡುವುದರಲ್ಲಿ ಇವನ ಪಾತ್ರ ಮುಖ್ಯ. ಹಳ್ಳಿಯು ವಿನಾಶದ ಹಾದಿಗೆ ತಲುಪುತ್ತಿದೆ ಎಂಬುದನ್ನು ತಿಳಿದು ಅದನ್ನು ಸರಿಪಡಿಸುವುದರ ಸಲುವಾಗಿ ಕೊಲೆ ಮಾಡಿ ಜೈಲುವಾಸವನ್ನು ಅನುಭವಿಸುತ್ತಾನೆ. ಜೈಲಿನಲ್ಲಿಯೂ ತನ್ನ ನಿಷ್ಠಾವಂತ ಜವಾಬ್ದಾರಿಯಿಂದ ಜೈಲಿನ ವಾತವರಣದಲ್ಲೇ ಬದಲಾವಣೆ ತಂದು ಅಧಿಕಾರಿಗಳ ಮೆಚ್ಚುಗೆಗೆ ಕಾರಣನಾಗಿ ಬೇಗ ಬಿಡುಗಡೆಯಾಗಿ ಬಂದು ಶಾರವ್ವ, ಮಾದೇವಿಯರನ್ನು ಸೇರಿಕೊಂಡು ಮತ್ತೆ ಶಿವಾಪುರ ಕಟ್ಟುವಲ್ಲಿ ಇವನ ಪಾತ್ರ ಪ್ರಮುಖವಾದದ್ದು.

ಶಾರವ್ವ :– ಈ ಒಂದು ಪಾತ್ರದ ಮುಖಾಂತರ ಲೇಖಕರು ಹೇಳಲೊರಟಿರುವುದು ಸಮಾಜದ ಆಚರಣೆಯಲ್ಲಿರುವ ಒಂದು ಸಂಪ್ರದಾಯದ ಪ್ರತೀಕವಾದ 'ದೇವದಾಸಿ' ಪದ್ಧತಿಯ ಹಿನ್ನೆಲೆಯಲ್ಲಿ ಬರಮೇಗೌಡನು ಪ್ರೀತಿಸಿ ಮದುವೆಯಾದ ತುಂಗವ್ವನ ಅಣ್ಣ ರಾಜಪ್ಪ ಮತ್ತು ಯಮುನಕ್ಕನ ಮಗಳು, ತುಂಗವ್ವನನ್ನು ಸವದತ್ತಿ ಎಲ್ಲಮ್ಮನ ಜಾತ್ರೆಯಲ್ಲಿ ಕೂಡಾವಳಿ ಮಾಡಿಕೊಂಡು ಬಂದು ಶಿವಾಪುರದ ಹೊರಕೇರಿಯಲ್ಲಿ ಮನೆಮಾಡಿಕೊಟ್ಟು ಸ್ವಲ್ಪ ಜಮೀನು ಕೊಟ್ಟ. ಆ ಜಮೀನನ್ನು ನೋಡಿಕೊಳ್ಳಲು ತುಂಗವ್ವ ತನ್ನ ಅಣ್ಣ ಮತ್ತು ಅವನ ಸಂಸಾರವನ್ನು ಅಲ್ಲೇ ನೆಲೆ ನಿಲ್ಲುವಂತೆ ಮಾಡುತ್ತಾಳೆ. ನಂತರ ಶಾರವ್ವ ಚಂಬಸವ ಪರಿಚಯ ಸ್ನೇಹವಾಗಿ ನಂತರ ಪ್ರೇಮವಾಗಿ ತಿರುಗಿ, ಕೆಲವರ ಒಪ್ಪಿಗೆ ಮತ್ತೆ ಕೆಲವ ವಿರೋಧದಿಂದಲೂ ಅವಳನ್ನು ಪ್ರೀತಿಸಿ ಮದುವೆಯಾದ. ಚಳುವಳಿಯ ವಿಚಾರವಾಗಿ ಬಂದ ಪೊಲೀಸಿನವರಿಂದ ಅತ್ಯಾಚಾರಕ್ಕೊಳಗಾಗಿ ಭಾಗಿರ್ತಿಯ ಮಗುವಿನೊಂದಿಗೆ ಅಂದೇ ರಾತ್ರಿ ಕಾಣೆಯಾಗಿ ನಮಃಶ್ಶಿವಾಯ ಸ್ವಾಮಿಗಳ ಮುಖಾಂತರ ಬೆಳಗಾವಿಯ ಮಾಣಿಕ್ಯಮ್ಮನ ಕಸ್ತೂರ ಬಾ ಅನಾಥಾಶ್ರಮ ಸೇರಿ ಚೆಂಬಸವನು ಬರುವವರೆಗೂ ವಿರಹ ವೇದನೆಯಿಂದ ಕಾಯುತ್ತಿರುತಾಳೆ. ಇವಳ ಪಾತ್ರದ ಮುಖಾಂತರ ಒಂದು ಕೆಳವರ್ಗದ ಹೆಣ್ಣು ಮೂಢನಂಬಿಕೆಗಳಿಂದ ದೇವದಾಸಿ ಪಟ್ಟವನ್ನು ಕಟ್ಟಿಸಿಕೊಂಡು ಸಮಾಜದ

ಕೆಲವು ಕಾಮುಕರ ಕೈಗೆ ಸಿಕ್ಕಿ ನಲುಗುವುದನ್ನು ತಿಳಿಸುತ್ತಾರೆ. ಜೊತೆಗೆ ಅವಳ ಒಂದು ಆತ್ಮ ಸ್ಥೈರ್ಯದಿಂದ ಒಂದು ವಿಕಲಾಂಗ ಮಗುವಿನ ತಾಯಾಗಿ ಶಿವಾಪುರವನ್ನು ಮತ್ತೆ ಕಟ್ಟಲು ಕಾರಣಳು ಆಗುತ್ತಾಳೆ. ಶಾರವ್ವ ಮುಗ್ದ ಹುಡುಗಿಯಾಗಿದ್ದರು. ತನಗೆ ಅನ್ಯಾಯವಾಗುತ್ತಿದೆ ಎಂದು ರೋಧಿಸುತ್ತಾಳೆ ಹೊರತು ಅದನ್ನು ಪ್ರತಿಭಟಿಸುವ ಹಂತಕ್ಕೆ ಹೋಗುವುದಿಲ್ಲ. ಇವಳ ಪಾತ್ರದ ಮುಖಾಂತರ ಇಂದಿನ ಸಮಾಜದ ಚಿತ್ರಣವನ್ನು ತರುತ್ತಾರೆ. ತಂದೆ-ತಾಯಿ ಸುತ್ತ ಮುತ್ತಲಿನ ಪರಿಸರದಲ್ಲಿ ಹೆಣ್ಣಿಗೆ ಅನ್ಯಾಯವಾಗುತ್ತಿದ್ದರು. ಆ ಹೆಣ್ಣು ಅದನ್ನು ಯಾವ ರೀತಿ ಸ್ವೀಕರಿಸುತ್ತಾಳೆಯೇ ಹೊರತು ವಿರೋಧಿಸುವುದಿಲ್ಲ ಎಂಬುವಂತಹ ಹಿನ್ನೆಲೆಯಲ್ಲಿ ರಚಿಸಿರುವಂತಹ ಪಾತ್ರ.

ಭಾಗಿರ್ತಿ :- ಬರಮೇಗೌಡ ಮತ್ತು ಪಾರೋತಿಯ ಒಬ್ಬಳೇ ಮಗಳು. ಗಂಡು ಸಂತಾನವಾಗಲಿಲ್ಲ ಎಂಬ ಕಾರಣಕ್ಕೆ ತಿರಸ್ಕೃತಗೊಂಡ ಗೌಡ ಆದರೆ ಈ ಮಗುವನ್ನು ಪಾರೋತಿ ಜೋಪಾನ ಮಾಡುತ್ತಾಳೆ. ಪಾರೋತಿಗೆ ಆರೋಗ್ಯದ ಸ್ಥಿತಿ ಸುಧಾರಿಸದಿದ್ದಾಗ ಆಸ್ತಿಯ ವಿಷಯದ ಬಗ್ಗೆ ಕೆಟ್ಟ ಆಲೋಚನೆ ಮಾಡಿ ಮಲತಮ್ಮನಾದ ಕುಂಟಿರಪನಿಗೆ ತನ್ನ ಮಗಳನ್ನು ಮದುವೆ ಮಾಡುತ್ತಾಳೆ. ಕುಂಟಿರಪನ ಬಗ್ಗೆ ತಿಳಿದಿದ್ದರು ತಾಯಿಯ ಪರಿಸ್ಥಿತಿ ನೋಡಿ ಮದುವೆಗೆ ಒಪ್ಪುತ್ತಾಳೆ. ನಂತರ ಅವನಿಂದ ಬಂದು ವಿಕಲಾಂಗ ಮಗುವನ್ನು ಪಡೆಯುತ್ತಾಳೆ. ಗಂಡನ ಬಗ್ಗೆ ಮೊದಲಿನಿಂದಲು ಅಸಮಾಧಾನದಿದಿಂದ್ದ ಇವಳು ಅವನ ಕುತಂತ್ರವನ್ನೆಲ್ಲ ತಿಳಿದು ಪ್ರತಿರೋಧಿಸುತ್ತಾಳೆ. ಗಂಡನು ದೂರಾದಾಗ ತಂದೆಯ ಸಾವಿನ ನಂತರ ಶಿವಾಪುರಕ್ಕೆ ಮಾರ್ಗದರ್ಶಿಯಾಗಿ ನಿಲ್ಲುತ್ತಾಳೆ. ಜೊತೆಗೆ ತನ್ನ ಅಣ್ಣನಾದ ಚೆಂಬಸನಿಗೆ ಅವನ ಮದುವೆಯಲ್ಲಿ ಸಹಾಯಕಿಯಾಗಿ ನಿಲ್ಲುತ್ತಾಳೆ. ಭಾಗಿರ್ತಿಯ ಪಾತ್ರದ ಮುಖಾಂತರ ಪುರುಷ ಪ್ರಧಾನ ಸಮಾಜದಲ್ಲಿ ಒಬ್ಬ ಹೆಣ್ಣು ಮಗಳು ತನಗೆ ಅನ್ಯಾಯವಾಗುತ್ತಿದ್ದರು. ಗಂಡನಮನೆಯಲ್ಲಿ ಅವಳನ್ನು ನೋಡುವ ದೃಷ್ಟಿ ಯಾವ ರೀತಿಯಲ್ಲಿದೆ ಎಂಬುದನ್ನು ತನ್ನ ತವರು ಮನೆಯಲ್ಲಿ ಮುಚ್ಚಿಡುತ್ತಾಳೆ ಏನೇ ಬಂದರು ಅದನ್ನು ತಾವೇ ನಿಭಾಯಿಸಲು ಮುಂದಾಗುತ್ತಾರೆ. ಕೆಲವು ಬುದ್ಧಿವಂತ ಮಹಿಳೆಯರು ಇರುತ್ತಾರೆಂಬುದನ್ನು ಭಾಗಿರ್ತಿಯ ಪಾತ್ರದ ಮುಖಾಂತರ ಹೇಳಲೊರಟಿದ್ದಾರೆ.

ಬರಮೇಗೌಡ :- ಇವನು ಶಿವಾಪುರದ ಕೇಂದ್ರದಲ್ಲಿರುವ ಗೌಡ ಹೆಣ್ಣು-ಮಣ್ಣಿಗೆ ಬೆಲೆ ಕೊಡುವಂತಹ ವ್ಯಕ್ತಿ ಪಾರೋತಿಯನ್ನು ಮದುವೆಯಾಗಿ ಒಂದು ಹೆಣ್ಣು ಮಗು ಹುಟ್ಟಿದಾಗ ಮತ್ತೆ ಗಂಡು ಮಗುವಿವಾಗಿ ಯಜ್ಞಯಾಗಾದಿ ಮಾಡಿಸಿದ. ಗಂಡು ಮಗುವಿಗಾಗಿ ಯೋಚಿಸಿದವನು. ತಮ್ಮನ ಗೌಡಾಳಿಕೆಯನ್ನು ಮುಂದುವರೆಸಿಕೊಂಡು ಬಂದವನು ತನ್ನ ವಿಲಾಸಕ್ಕಾಗಿ ಮನೆಬಿಟ್ಟು

ತೋಟದ ಮನೆಯಲ್ಲಿ ಹೆಚ್ಚು ಇದ್ದ. ದೇವದಾಸಿಯಾದ ತುಂಗವ್ವನನ್ನು ಮೋಹಿಸಿ ಆವಳಿಂದ ಒಂದು ಗಂಡು ಮಗುವನ್ನು ಪಡೆದ ಆವನೇ ಲಸಮ. ಊರಿಗಾಗಿ ಕಾಲೇಜು, ಆಸ್ಪತ್ರೆ ತರೆಯಬೇಕೆಂದು ಯೋಚಿಸಿದ ಜೊತೆಗೆ ರೈತರಿಗಾಗಿ ಬೀಜವಿಲ್ಲದ ಬೆಳೆಗಳನ್ನು ಪರಿಚಯಿಸಿ ಆರ್ಥಿಕಮಟ್ಟ ಸುಧಾರಿಸುವಂತೆ ಮಾಡಿದ. ಆಳಿಯ ಕುಂಟಿರಪ, ತಾರ; ಜಿಗ್‌ಬಾಷ್.ರ ಸಹವಾಸ ಮಾಡಿ ಮಲ್ಲೀಮಡುವನ್ನು ಮೈಲಿಗೆ ಮಾಡಲು ಮುಂದಾದ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹಳ್ಳಿಯ ಮುಗ್ಧ ದಲಿತರ ರೈತರಿಗೆ ಅನ್ಯಾಯ ಮಾಡುತ್ತಾನೆ. ಅನೇಕ ಕೊಲೆಗಳನ್ನು ಮಾಡಿಸಿ ಅದನ್ನು ಅಮಾಯಕ ಜನರ ಮೇಲಾಕುತ್ತಾನೆ. ಕುಂಟಿರಪನ ಮುಖಾಂತರ ಹಳ್ಳಿಗೆ ರಾಜಕೀಯತೆಯ ಪ್ರವೇಶವಾಗಿ ಅದರಲ್ಲೂ ಭಾಗಿಯಾಗುತ್ತಾನೆ. ಹಳ್ಳಿಯಲ್ಲಿ ನಡೆದ ನೀಲಗಂಗುವಿನ ಮೇಲಿನ ಆಕ್ರಮಣ ಅವಳ ಸಾವಿನಿಂದ ಜೈಲಿನ ಸೆರವಾಸವನ್ನು ಅನುಭವಿಸುತ್ತಾನೆ. ಇದೆಲ್ಲದರ ಅನುಭವದಿಂದಾಗಿ ಕುಂಟಿರಪನ ಕುತಂತ್ರವನ್ನು ತಿಳಿದು ಚಂಬಸನ ಬುದ್ಧವಾದವನ್ನು ಕೇಳಿ ಬದಲಾಗುತ್ತಾನೆ. ತನ್ನ ಕೊನೆಯ ಕ್ಷಣದಲ್ಲಿ ತುಂಗವ್ವನನ್ನು ಎಲ್ಲರ ಮುಂದೆ ಹೆಂಡತಿ ಎಂದು ಸ್ವೀಕರಿಸಿ ಲಸಮನನ್ನು ಮಗನೆಂದು ಒಪ್ಪಿ ಆಸ್ತಿಯಲ್ಲಿ ಭಾಗಕೊಡುತ್ತಾನೆ. ಇವನ ಪಾತ್ರದ ಮುಖಾಂತರ ಹಳ್ಳಿಯಲ್ಲಿ ನಡೆಯುವಂತಹ ಗೌಡಾಳಿತವನ್ನು ಮತ್ತು ಅವನ ಸುತ್ತ ಮುತ್ತಲಿನ ವ್ಯವಸ್ಥೆಯನ್ನು ಚಿತ್ರಿಸುತ್ತಾರೆ.

ಆಡಳಿತದ ಪ್ರಭಾವದಿಂದ ತನ್ನ ನಂಬಿದಂತಹ ಸಮಾಜವನ್ನು ದುರುಪಯೋಗಕ್ಕೆ ಬಳಸಿಕೊಂಡು ತನ್ನ ತಂತ್ರಗಾರಿಕೆಯನ್ನು ನಿರೂಪಿಸುವಲ್ಲಿ ಮುಂದಾಗುತ್ತಾರೆಂಬುದನ್ನು ತಿಳಿಸುತ್ತಾರೆ. ಪರಂಪರಾಗತವಾಗಿ ಬಂದಂತಹ ಸಂಪ್ರದಾಯಗಳಲ್ಲಿ ಕುಟುಂಬಗಳಲ್ಲಿ ಗಂಡು ಮಗುವಿನ ಸ್ಥಾನ ಹೆಣ್ಣಿನ ಸ್ಥಾನವನ್ನು ಬಿಂಬಿಸುತ್ತಾರೆ. ಒಂದು ಕುಟುಂಬದಲ್ಲಿ ಗಂಡು ಮಗುವಿನ ಜನನದಿಂದ ಮಾತ್ರ ಹೆತ್ತವರಿಗೆ ಮೋಕ್ಷ ಪ್ರಾಪ್ತವಾಗುತ್ತದೆಂಬ ನಂಬಿಕೆಗಳು ಇಂದಿಗೂ ಬಲವಂತವಾಗಿರುವುದನ್ನು ಬಿಂಬಿಸುತ್ತವೆ. ಅದೇ ರೀತಿ ವಸಾಹತುಶಾಹಿಯ ಪ್ರಭಾವದಿಂದಾಗಿ ಹಳ್ಳಿಯ ಚಿತ್ರಣವನ್ನು ತೋರಿಸಿಕೊಡುತ್ತಾರೆ.

ಕುಂಟಿರಪ :- ಪಾರೋತಿಯ ಮಲತಮ್ಮ ಪಾರೋತಿಯ ತಂದೆ ಕೊಟ್ರಪ್ಪನ ಎರಡನೆ ಹೆಂಡತಿ ಕಾಶೀಬಾಯಿಯ ಮಗ ಇವನ ಹೆಸರು ಇರಪಗೌಡ ಎಂದು. ಪೋಲಿಯೋದಿಂದಾಗಿ ಎಡಗಾಲು ಸೊಟ್ಟಾಗಿದ್ದರಿಂದ ಎಲ್ಲರು ಇವನ್ನು ಕುಂಟಿರಪ ಎಂದು ಕರೆಯುತ್ತಿದ್ದರು. ಇವನು ಕಾನೂನು ಪದವಿಯನ್ನು ಪಡೆದಿದ್ದರು ತಂದೆಯಿಂದ ಕೆಲವು ವೈದ್ಯ ಮಾಡುವುದನ್ನು ಕಲಿತಿದ್ದನು. ಪಾರೋತಿಯ ತನ್ನ ಮಗಳು ಭಾಗಿರ್ತಿಯನ್ನು ಕೊಟ್ಟು ಮದುವೆ ಮಾಡಿದ ನಂತರ ಇವನು

ಸಂಪೂರ್ಣವಾಗಿ ಶಿವಾಪುರದಲ್ಲಿಯೇ ನಿಲ್ಲುತ್ತಾನೆ. ಇವನು ಒಂದು ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ತಾನು ಒಂದು ಮಠದ ಜಗದ್ಗುರುವಾಗಬೇಕೆಂದೂ ತಲೆಯ ಮ್ಯಾಲೊಂದು ಬಗಲಲ್ಲೊಂದು ಹೀಗೆ ಎರಡು ಕೊಡ ಹೊತ್ತು, ನೀರು ತರುವ ಗಂಡು ಬೀರಿ ಹುಡುಗಿಯೊಂದಿಗೆ ಅಕ್ರಮ ಸಂಬಂಧವಿಟ್ಟುಕೊಳ್ಳಬೇಕೆಂದು ಕನಸು ಕಂಡಿದ್ದ. ಬರಮೇಗೌಡನ ಹತ್ತಿರವಿದ್ದು ಅವನ ಬೇಕು ಬೇಡಗಳನ್ನು ತಿಳಿದು ಅವನನ್ನು ರಾಜಕೀಯದ ಅಸ್ತ್ರವಾಗಿ ಬಳಸಿಕೊಂಡ ಇವನು ಕನಸು ಕಂಡಂತೆ ಶಾರವ್ವನನ್ನು ನೋಡಿ ಆವಳಿಂದಲೂ ಅವಮಾನಿತನಾದ, ನಂತರ ರಾಜಕೀಯಕ್ಕೆ ಪ್ರವೇಶಿಸಿ ನೀರಾವರಿ ಮಂತ್ರಿಯ ಪದವಿಗಿಟ್ಟಿಸಿಕೊಂಡ. ಪದವಿಗಾಗಿ ಹೆಂಡತಿಯನ್ನು ಬಿಗ್‌ಬಾಸ್‌ಗೆ ಒಪ್ಪಿಸಲು ಮುಂದಾದವನು. ಊರಿನಲ್ಲಿ ಒಂದಲ್ಲಾ ಒಂದು ಕುತಂತ್ರಮಾಡಿ ಊರಿನಲ್ಲಿ ನಡೆದ ಚಳುವಳಿ ಗಲಾಟೆ ಎಲ್ಲದಕ್ಕೆ ಇವನು ಕಾರಣನಾದವನು. ಇವನ ಪಾತ್ರದ ಮುಖಾಂತರ ಹೊರಗಿನಿಂದ ಬಂದಂತಹ ವ್ಯಕ್ತಿಗಳಿಂದ ಆಗುವಂತಹ ಅನಾಹುತದ ಬಗ್ಗೆ ಎಚ್ಚರಿಸುತ್ತಾರೆ. ಭಾರತಕ್ಕೆ ಬ್ರಿಟಿಷರು ಹೊರಗಿನಿಂದ ಬಂದು ಮಾಡಿದ ಅನಾಹುತಗಳು ಇದೇ ತರಹ ಎಂಬಂತೆ ಅಧಿಕಾರಕ್ಕಾಗಿ ಜನರು ಎಷ್ಟು ಕೀಳುಮಟ್ಟಕ್ಕಾದರೂ ಇಳಿಯುತ್ತಾರೆ. ಮುಗ್ಧ ಜನಗಳ ನಂಬಿಕೆಗೆ ದ್ರೋಹ ಮಾಡುತ್ತಾರೆ ಎಂಬುದನ್ನು ಕುಂಟಿರಪನ ಪಾತ್ರದ ಮುಖಾಂತರ ಚರ್ಚಿಸಲಾಗಿದೆ.

ನಮಶ್ಶಿವಾಯಸ್ವಾಮಿ :- ಚಳಿ ಮಳೆ ಪ್ರದೇಶದಲ್ಲಿ ವಾಸವಾಗಿರುವಂತಹ ಒಬ್ಬ ಋಷಿ ಮುನಿ ಎಲ್ಲಿಂದ ಬಂದ ಯಾಕೆ ಬಂದ ಎಂದು ಯಾರಿಗೂ ತಿಳಿಯದು. ಇವನು ನಾಳೆಬಾ ಎಂಬ ಮನೆಗೆ ಬಂದು ಸೇರಿಕೊಂಡ. ಭರಮೇಗೌಡ ಸಾಯಿಸಿದ ವ್ಯಕ್ತಿಗಳಿಗೆ ಮುಕ್ತಿಯನ್ನು ಕೊಡಲು ಒಬ್ಬ ಪೂಜಾರಿ ಬೇಕಿತ್ತು. ಅದಕ್ಕೆ ತಕ್ಕಂತೆ ಈ ನಮಃಶ್ಶಿವಾಯನನ್ನು ಬಳಸಿಕೊಂಡ. ಇವನ್ನು ಕಂಡ ಶಿವಾಪುರದ ಜನ ಭಕ್ತಿಭಾವದಿಂದ ನೋಡುತ್ತಿದ್ದರು ಇವನನ್ನು ಕಂಡರೆ ಅಲ್ಲಿನ ಮಾಸ್ತರು ಕೂಡ ನಮಸ್ಕಾರ ಮಾಡುತ್ತಿದ್ದರು. ಕುಲ. ಕೇರಿ. ಮೇಲು-ಕೀಳು ಎನ್ನದೆ ಎಲ್ಲರ ಮನೆಯಲ್ಲಿಯೂ ಭಿಕ್ಷೆ ಬೇಡಿ ತನ್ನ ಜೀವನ ಸಾಗಿಸುತ್ತಿದ್ದ. ಚೆಂಬಸನಿಗೆ ಸಹಾಯಮಾಡಿ ಊರ ಉದ್ಧಾರಕ್ಕೆ ಇವನ ಕೊಡುಗೆಯೂ ಇದೆ. ನಂತರ ನಿರಾಶ್ರಿತಳಾದ ಶಾರವ್ವನಿಗೆ ಆಶ್ರಯ ಒದಗಿಸಿಕೊಟ್ಟವನು. ಜೊತೆಗೆ ಅಮ್ಮನ ಗುಡ್ಡದ ಅಯ್ಯನನ್ನು ಬೇಟಿಯಾಗಲು ಹೇಳಿ ಹೊಸ ಶಿವಾಪುರದ ರಚನೆಗೆ ನಾಂದಿಯಾಗುವಂತೆ ಮಾಡು ಎನ್ನುವ ಶಿವನಡಂಗುರದ ಆರ್ತಸ್ವರನ್ನು ಕೇಳಿಸಿದವನು. ಇವನೇ ಶಿವಾಪುರ ರಚನೆಯಲ್ಲಿ ಇವನ ಪಾತ್ರವು ಮುಖ್ಯವಾಗುತ್ತದೆ.

ಒಬ್ಬ ಸನ್ಯಾಸಿಯಾದವನು ಸಮಾಜವನ್ನು ನೋಡುವ ರೀತಿ ಬೇರೆಯದ್ದೇ ಆಗಿದೆ ಅಂತಹ ಸನ್ಯಾಸಿಯು ನಂಬಿಕೆಗಳ ಹಾದಿಯನ್ನಿಡಿಯುವ ಜೊತೆಗೆ ಬಂದು ಸಮಾಜ ನಿರ್ಮಾಣದ

ಪಾತ್ರವಹಿಸುತ್ತಾನೆ. ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸಬೇಕೆಂಬುದು ಪ್ರತಿದಿನ ಊರಿನಲ್ಲಿ ಸುತ್ತಾಡುವಂತಹ ಒಬ್ಬ ವ್ಯಕ್ತಿ ಊರಿನ ಸಮಸ್ಯೆಗಳನ್ನು ತಿಳಿದು ಅದಕ್ಕೆ ಪರಿಹಾರವನ್ನು ಹುಡುಕುತ್ತಾನೆ. ತನಗೂ ಊರಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ತಾನಿರುವಂತಹ ಸ್ಥಳ, ಪ್ರದೇಶಕ್ಕೆ ತೊಂದರೆ ಬಂದೊದಗುತ್ತದೆ ಎಂದಾಗ ತಾನು ಸಹ ಅದರಲ್ಲಿ ಭಾಗಿಯಾಗಲು ತೊಡಗುವಂತಹ ಸನ್ನಿವೇಶ ನಮಶ್ಶಿವಾಯನ ಪಾತ್ರದ ಮುಖಾಂತರ ತಿಳಿಯುತ್ತದೆ. ಒಂದು ಸಮುದಾಯದಲ್ಲಿ ಹೊರಗಿನಿಂದ ಬಂದ ವ್ಯಕ್ತಿಗಳಿಂದಾಗುವ ಸಮಸ್ಯೆ ಒಂದು ಕಡೆಯಾದರೆ ಸಮುದಾಯಕ್ಕೆ ಸಂಬಂಧವಿರದ ವ್ಯಕ್ತಿಯಿಂದಾಗುವ ಸಹಾಯ ಇನ್ನೊಂದು ಕಡೆ ಇಂತಹ ಅಮಾಯಕರನ್ನು ಕೆಲವರು ತಮ್ಮ ಅನ್ಯಾಯದ ಕೆಲಸಗಳಿಗೆ ಬಳಕೆ ಮಾಡಿಕೊಳ್ಳುತ್ತಾರೆಂಬುದು ಗೌಡನ ವಿಷಯದಲ್ಲಿ ನಿಜವಾಗುತ್ತದೆ.

ತಾರ :- ಕುಟೆಂರಪ ತನ್ನ ಕುತಂತ್ರದಿಂದ ಮೊದಲೆ ಗೌಡನ ಎಲ್ಲಾ ಗುಣಗಳನ್ನು ಹತ್ತಿರದಿಂದ ಕಂಡವನಾದ್ದರಿಂದ ಹೆಣ್ಣಿಗೆ ಸೋಲುತ್ತಾನೆಂದು ತಿಳಿದು ತಾರಾಳ ಮುಖಾಂತರ ತನ್ನ ಕೆಲಸಗಳಿಗೆ ಚಾಲನೆ ನೀಡುತ್ತಿರುತ್ತಾನೆ. ಅದಕ್ಕೆ ತಕ್ಕಂತೆ ತಾರ ಜಿಗ್‌ಜಾಸ್ ಕುತಂತ್ರದಿಂದ ಗೌಡ ತಾರ ಕೊಟ್ಟ ಕೆಲವು ಪತ್ರಗಳಿಗೆ ಸಹಿಯನ್ನು ಹಾಕಿರುತ್ತಾನೆ. ಚುನಾವಣೆಯಲ್ಲಿ ಭಾಗವಹಿಸುತ್ತೇನೆಂದು ನಂಬಿದ ಗೌಡ ತಾರ ಹೇಳಿದ ಹಾಗೆ ಕುಣಿಯುತ್ತಾನೆ. ನಂತರ ಕಂಟೆರಪ ತಾರರ ಪೋಟವನ್ನು ಕಂಡ ಗೌಡ ಅವಳನ್ನು ನಿರಾಕರಿಸುತ್ತಾನೆ. ಇವಳ ಪಾತ್ರ ಚಿತ್ರಣ ಹೆಣ್ಣು ಮಣ್ಣಿಗೆ ಸೋಲುವಂತವರನ್ನು ತಮ್ಮ ಇಚ್ಛೆಗೆ ತಕ್ಕಂತೆ ಕುಣಿಸುತ್ತಾರೆಂಬುದಕ್ಕೆ ಉದಾಹರಣೆ. ಅದಕ್ಕೆ ಸಾಕ್ಷಿಯಾಗುವವರು ಗೌಡ, ತಾರ. ಇಂದಿಗೂ ಸಹ ಹೆಣ್ಣು, ಹೆಂಡ, ಮಣ್ಣು, ಅಧಿಕಾರದ ದೃಷ್ಟಿಯಿಂದ ಯಾವ ಕೆಟ್ಟ ಕೆಲಸವನ್ನು ಮಾಡುವಂತಹ ವ್ಯಕ್ತಿಗಳಿದ್ದಾರೆ. ಅನ್ಯಾಯದ ಮುಖಾಂತರ ಸಾಧಿಸಬಹುದೆಂದು ತೀರ್ಮಾನ ಮಾಡಿಕೊಂಡರು. ಅವರು ಕೊನೆಯಲ್ಲಿ ಸಾಧಿಸುವುದು ಕೇವಲ ಸೋಲೆ ಎಂಬುದನ್ನು ಕಾದಂಬರಿಯಲ್ಲಿ ಕಾದಂಬರಿಕಾರ ನಿರೂಪಿಸಿದ್ದಾರೆ. ಕೇವಲ ತಮ್ಮ ಹಿತಕ್ಕಾಗಿ ಮತ್ತೊಬ್ಬರಿಗೆ ಅನ್ಯಾಯ ಮಾಡುವಂತಹ ವ್ಯಕ್ತಿಗಳೇ ತುಂಬಿದ್ದಾರೆಂಬುದನ್ನು ತಿಳಿಯಬಹುದಾಗಿದೆ.

ಬಲವಂತ :- ಗೌಡನ ನಾಲ್ಕು ಜನ ದಲಿತ ರೈತರಲ್ಲಿ ಬಲವಂತನು ಒಬ್ಬನು ಇವನ ಜಮೀನು ಮಲ್ಲೀಮಡುವಿಗಂಟಿಕೊಂಡಿದ್ದರಿಂದ ಆ ಜಾಗದ ಮೇಲೆ ಕಟ್ಟುಬಿದ್ದ ಅದನ್ನು ಬ್ಯಾಂಕಿನ ಮುಖಾಂತರ ಕಸಿದುಕೊಳ್ಳಲು ಮುಂದಾಗಿ ಬಲವಂತನನ್ನು ಹೆದರಿಸಿ ತನ್ನ ವಶಕ್ಕೆ ತೆಗದುಕೊಳ್ಳುತ್ತಾರೆ. ನಿಸ್ಸಾಯಕನಾದ ಬಲವಂತ ಕೆಲವು ಸಂಘಟನೆಗಳ ಮೊರೆ ಹೊಕ್ಕರು ನ್ಯಾಯ ಸಿಗಲಿಲ್ಲ. ನಂತರ ಅವನ ಮಗಳ ನೀಲಗಂಗುವಿನ ಮೇಲಿನ ಆಕ್ರಮಣ. ಅವಳ ಸಾವಿನಿಂದ

ನೊಂದ ಬಲವಂತ ಅಂದೇ ಕೀಟನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಬಲವಂತ ಪಾತ್ರದ ಮುಖಾಂತರ ಇಂದು ನಡೆಯುತ್ತಿರುವ ಅನ್ಯಾಯದ ಬಗ್ಗೆ ತಿಳಿಯಬಹುದು. ಬ್ಯಾಂಕುಗಳಿಂದ ಸಾಲ ತೆಗದುಕೊಂಡ ರೈತರು, ಸಾಲ ತೀರಸದಿದ್ದಾಗ ಬ್ಯಾಂಕಿನವರ ಕಿರುಕುಳದಿಂದ ಮನನೊಂದ ರೈತರ ಆತ್ಮಹತ್ಯೆ ಹೆಚ್ಚಾಗುತ್ತಿದೆ. ಎಂಬುದಕ್ಕೆ ಉದಾರಹಣೆಯಾಗಿದೆ ಜೊತೆಗೆ ಒಂದು ಅಸಹಾಯಕ ಕುಟುಂಬ ಇದೆ ಎಂದರೆ ಅದಕ್ಕೆ ಸಿಕ್ಕ ಸಿಕ್ಕವರೆಲ್ಲ ಅಳಿಗೊಂದು ಕಲ್ಲು ತೂರುವಂತೆ ಬಡಪಾಯಿ ನೀಲಗಂಗುವಿನ ಮೇಲಿನ ಆಕ್ರಮಣವನ್ನು ಬಿಂಬಿಸುತ್ತದೆ. ಇಂತಹ ಸಂದರ್ಭದಲ್ಲಿ ಸರಕಾರ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತವೆ ಎಂಬುದನ್ನು ಈ ಕಾದಂಬರಿಯ ಮುಖಾಂತರ ಇಂದಿನ ಸ್ಥಿತಿಯನ್ನು ವಿಶ್ಲೇಷಿಸಲಾಗಿದೆ.

ಸಿಂಗಾರೆವ್ವ :– ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಗಳಲ್ಲಿ ಯಲ್ಲಿ ಸಿಂಗಾರೆವ್ವನ ಪಾತ್ರ ಚಿತ್ರಣದ ಮುಖಾಂತರ ಸಮಾಜದಲ್ಲಿ ಹೆಣ್ಣಿನ ಸ್ಥಿತಿ-ಗತಿಯ ಬಗ್ಗೆ ವಿವರಿಸುತ್ತಾರೆ. ಚಿಕ್ಕಂದಿನಿಂದಲೂ ತನ್ನದೆಯಾದ ಆಸೆ-ಆಕಾಂಕ್ಷೆಗಳನ್ನಿಟ್ಟುಕೊಂಡು ಬೆಳೆದ ಸಿಂಗಾರೆವ್ವ, ತನ್ನ ಮದುವೆಯ ಪ್ರಸ್ತಾಪ ಬಂದಾಗ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಹಂತದಲ್ಲಿರುವುದಿಲ್ಲ ಕಾರಣ ಅವಳಿಗಿನ್ನು ಚಿಕ್ಕ ವಯಸ್ಸು ಇವಳ ಪಾತ್ರದ ಮುಖಾಂತರ ಹೆಣ್ಣು ಯಾವ ರೀತಿ ಬದುಕುತ್ತಿದ್ದಾಳೆಂಬುದು ಜೊತೆಗೆ ಬಾಲ್ಯ ವಿವಾಹಕ್ಕೆ ಗುರಿಯಾಗುತ್ತಿರುವ ಹೆಣ್ಣಿನ ಪಾತ್ರ ಚಿತ್ರಣವನ್ನು ಈ ಪಾತ್ರದಲ್ಲಿ ತರುತ್ತಾರೆ. ಹಣದ ಆಸೆಯಿಂದ ತನ್ನ ಮಗಳ ಜೀವನವನ್ನು ಆಳುಮಾಡಿದ ತಂದೆಯೇ ಪಂಡರೀಗೌಡ ಮೊದಲು ಸವದ ಜೊತೆ ಮದುವೆ ಮಾಡಿಸಿ ಮತ್ತೆ ಎರಡನೆಯ ಮದುವೆ ನಿರ್ವೀರ್ಯವಾದ ದೇಸಾಯಿಯ ಜೊತೆ ಮಾಡಿಸುತ್ತಾನೆ. ಹುಟ್ಟಿನಿಂದಲು ಸಾಯುವವರೆವಿಗೂ ಹೆಣ್ಣು ಪುರುಷ ಪ್ರಧಾನ ಸಮಾಜದಲ್ಲಿ ಯಾವ ರೀತಿ ತನ್ನ ಬದುಕನ್ನು ಸಾಗಿಸುತ್ತಾಳೆಂಬುದನ್ನು ಈ ಪಾತ್ರದ ಮೂಲಕ ತಿಳಿಯಬಹುದು. ಸಿಂಗಾರೆವ್ವ ತಂದೆಯಿಂದ, ಪತಿಯಿಂದ, ಕೆಲಸದಾಳು ಮರ್ಯಾನಿಂದ, ನಂತರ ಜಂಗಮ ಹುಚ್ಚಯ್ಯನ ಮೂಲಕ ಶೋಷಣೆಗೆ ಒಳಗಾಗುತ್ತಳೆ.

ಪಂಡರೀಗೌಡ :– ನಂದಗಾವಿಯಗೌಡ ಇವನು ಸಹ ಹೆಣ್ಣು, ಮಣ್ಣಿಗಾಗಿ ಆಸೆ ಪಟ್ಟವನಾಗಿದ್ದ ತನ್ನ ಹತ್ತಿರ ಅಪಾರವಾದ ಆಸ್ತಿ ಇದ್ದರೂ ಮತ್ತಷ್ಟು ಸಂಪಾದನೆ ಮಾಡಬೇಕೆಂಬ ಕೆಟ್ಟ ದುರಾಸೆ ಉಳ್ಳವನು. ಒಂದರ ಮೇಲೊಂದರಂತೆ ನಾಲ್ಕು ಹೆಣ್ಣು ಮಕ್ಕಳನ್ನು ಮದುವೆಯಾದ. ಆದರೆ ಮಕ್ಕಳಿರಲಿಲ್ಲ. ಕೊನೆಗೆ ಇಳಿಯ ವಯಸ್ಸಿನಲ್ಲಿ ಎರಡನೆಯ ನಿಂಗವ್ವಗೌಡ್ತಿಗೆ ಸಿಂಗಾರೆವ್ವ ಹುಟ್ಟಿದಳು. ಆದರೆ ಮಿಕ್ಕ ಮೂರು ಜನ ಹೆಂಡತಿಯರಿಗೆ ನರಕ ಯಾತೆನಗೆ ತಪ್ಪಿದಲ್ಲ.

ಆಸ್ತಿಯ ದುರಾಸೆಯಿಂದ ಸ್ವಂತ ತನ್ನ ಮಗಳನ್ನು ಶಿರಟ್ಟಿಯ ತನ್ನ ತಂಗಿಯ ಮಗನಿಗೆ ಮದುವೆ ಮಾಡಿದ ಅವನು ಮಾಡಿದ್ದು ಜೀವಂತ ಹುಡುಗನಿಗಲ್ಲ ಸತ್ತ ಹೆಣದ ಜೊತೆ ಮದುವೆ ಮಾಡಿ ಮುಗಿಸಿದ. ದುರಾದೃಷ್ಟ ಮದುವೆಯ ಮೊದಲೇ ವಿಧವೆಯಾಗಿದ್ದಳು. ಎರಡನೆಯ ಮದುವೆಯನ್ನು ಮಾಡಿದ ಅದು ಶಿವಾಪುರದ ಸರಗಂ ದೇಸಾಯಿಯ ಜೊತೆ. ಇಲ್ಲಿಯು ಸಹ ಮಗಳಿಗೆ ತಕ್ಕನಾದ ವರ ದೇಸಾಯಿ ಆಗಿರಲಿಲ್ಲ. ತವರು ಬಿಟ್ಟು ಶಿವಾಪುರದ ಅರಮನೆಗೆ ಸಿಂಗಾರೆವ್ವ ಬಂದಳು ಅಂದಿನಿಂದ ತನ್ನ ತಂದೆಯ ಮೇಲೆ ದ್ವೇಷ ಹೆಚ್ಚಾಗುತ್ತಾ ಹೋಯಿತು. ಕೆಲವು ವರ್ಷಗಳ ನಂತರ ತನ್ನ ಮಗಳಿಗೆ ಮಕ್ಕಳಿಲ್ಲವೆಂದು ತಿಳಿದು ತನಗೆ ಇಳಿಯವಯಸ್ಸಿನಲ್ಲಿ ಹುಟ್ಟಿದ ಒಂದು ಗಂಡು ಮಗುವನ್ನು ದತ್ತು ತೆಗೆದುಕೊಳ್ಳಲು ಸಿಂಗಾರವ್ವನನ್ನು ಪೀಡಿಸುತ್ತಿದ್ದ. ಆಸ್ತಿಯ ವಿಚಾರವಾಗಿ ಪರಮಶೆಟ್ಟಿಯ ಜೊತೆ ಸೇರಿಕೊಂಡು ಏನೇನೋ ಸಂಚು ರೂಪಿಸುತ್ತಿದ್ದನು. ಇದೇ ಅಲ್ಲದೆ ಮರ್ಯಾನ ಮೇಲಿನ ದ್ವೇಷ. ದ್ವೇಷಕ್ಕೆ ಕಾರಣವೆಂದರೆ ಮರ್ಯಾನ ತಾಯಿಯ ಜೊತೆ ಅಕ್ರಮವಾಗಿ ಹೊಂದಿದ ಸಂಬಂಧ ತಿಳಿದು ತಾಯಿಯನ್ನೇ ಕೊಂದ ಮರ್ಯಾ ಗೌಡನ ಮೇಲಿನ ಸಿಟ್ಟಿನಿಂದ ಕುದಿಯುತ್ತಿದ್ದ ಮರ್ಯಾ ನನ್ನನ್ನು ಸಾಯಿಸಬಹುದೆಂದು ಗೌಡ ಪೋಲೀಸಿನವರಿಗೆ ದೂರುಕೊಟ್ಟ ತನ್ನ ಆಳುಗಳಿಂದ ಹುಡುಕಿಸಿದರು ಸಿಗಲಿಲ್ಲ. ಇಷ್ಟೊಂದು ಅನ್ಯಾಯ ಅಕ್ರಮಣ ಮಾಡಿ ಕೊನೆಗೆ ಮರ್ಯಾನಿಂದಲೇ ಕೊಲೆಯಾದನು.

ಗೌಡನ ಪಾತ್ರವು ಕಾದಂಬರಿಗೆ ಒಂದು ತಿರುವನ್ನು ಕೊಡುತ್ತದೆ. ಪ್ರಪಂಚದಲ್ಲಿ ಹಿಂದಿನಿಂದಲೂ ಅಧಿಕಾರ ಆಸ್ತಿಗಾಗಿ ಏನುಬೇಕಾದರು ಮಾಡುವಂತಹ ವ್ಯಕ್ತಿಗಳಿದ್ದಾರೆ ಅಂತವರ ಸಾಲಿಗೆ ಸೇರುವನು. ಈ ಗೌಡ ಆಸ್ತಿಗಾಗಿ ಹೆತ್ತ ಮಗಳನ್ನು ಹೆಣದ ಜೊತೆ ಮದುವೆ ಮಾಡಿಸುತ್ತಾನೆ. ತಮ್ಮ ನೀಚ ಕೃತ್ಯಕ್ಕೆ ಯಾವರೀತಿ ಮುಗ್ಧ ಜೀವಗಳು ಬಲಿಯಾಗಬೇಕಾಗುತ್ತದೆಂಬುದು ತಿಳಿಯುತ್ತದೆ. ಅದೇ ರೀತಿ ಇವನ ಪಾತ್ರದ ಮುಖಾಂತರ ಬಹುಪತಿತ್ವ ಪದ್ಧತಿ ಜಾರಿಯಲ್ಲಿದೆ. ವಿಧವೆವಿವಾಹ ಆಚರಣೆಗೆ ಬಂದಿದೆ. ಎಂಬ ಸೂಕ್ಷ್ಮ ವಿಚಾರವನ್ನು ಇಲ್ಲಿ ತರುತ್ತಾರೆ ಲೇಖಕರು. ಒಂದುಕಡೆ ಸಮಾಜದಲ್ಲಿ ಕೆಲವು ಸಂಪ್ರದಾಯಗಳನ್ನು ಯಾವ ರೀತಿ ಪಾಲಿಸಬೇಕು ಯಾವುದನ್ನು ಬಿಡಬೇಕೆಂಬುದನ್ನು ಈ ಸನ್ನಿವೇಶದಲ್ಲಿ ನೋಡಬಹುದು.

ಶೀನಿಂಗೆವ್ವ :– ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಶೀನಿಂಗವ್ವನ ಪಾತ್ರ ಮುಖ್ಯವಾದದ್ದು. ಕಥೆಯ ಮುಖ್ಯ ನಿರೂಪಕಿಯೇ ಇವಳು. ಇವಳು ಸಿಂಗಾರೆವ್ವನ ಜೊತೆ ಅವಳ ಮನೆಯಲ್ಲಿದ್ದ ಕೆಲಸದಾಕೆ ಚಿಕ್ಕವಯಸ್ಸಿನಲ್ಲಿ ತಂದೆ-ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ

ಈಕೆ. ಸಿಂಗಾರೆವ್ವನ ಸಮ ವಯಸ್ಸಿನವಳೇ. ಸಿಂಗಾರವ್ವನ ಜೊತೆ ಆಟಗಳಲ್ಲಿ ಭಾಗಿಯಾಗುತ್ತಿದ್ದಳು ಇವರು ಆಟವಾಡುವಾಗ ಗಂಡಿನ ಪಾತ್ರವನ್ನು ಶೀನಿಂಗವ್ವ ಹೆಣ್ಣಿನ ಪಾತ್ರವನ್ನು ಸಿಂಗಾರೆವ್ವ ಮಾಡಿ ಆಟವಾಡುತ್ತಿದ್ದರು. ಮೊದಲಿನಿಂದಲು ಕೊನೆಯವರೆಗೆ ಸಿಂಗಾರೆವ್ವನ ನೆರಳಾಗಿಯೇ ಅವಳಿಗೆ ಅಚ್ಚುಮೆಚ್ಚಿನ ಗೆಳತಿಯಾಗಿ ಅವಳ ಕೆಲಸಗಳಲ್ಲಿ ಸಹಾಯಕಿಯಾಗಿ ನಿಂತವಳು. ತನ್ನ ಬಗ್ಗೆ ಎಲ್ಲಿಯೂ ಅಷ್ಟಾಗಿ ಹೇಳಿಕೊಳ್ಳದಿದ್ದರೂ ಮರ್‍ಯಾನನ್ನು ಒಮ್ಮೆ ಮೋಹಿಸುತ್ತಾಳೆ. ಅದರಿಂದ ಅವರಿಂದ ಬೈಸಿಕೊಳ್ಳುತ್ತಾಳೆ. ಇವಳ ಹತ್ತಿರ ಅರಮನೆಯ ಕಥೆಯನ್ನು ಕೇಳಲು ಲೇಖಕರು ಸಾರಾಯಿಯ ಔತಣವನ್ನು ಮಾಡಿಸುತ್ತಾರೆ. ಇದರ ನಿಶೆ ಇರುವವರೆಗೆ ಯಾವುದನ್ನು ಮುಚ್ಚಿಡದೆ ನಡೆದ ವಿಷಯವೆಲ್ಲವನ್ನು ಕಥೆಯ ರೂಪದಲ್ಲಿ ನಿರೂಪಿಸುತ್ತಾಳೆ.

ಮರ್‍ಯಾ :- ಈ ಹುಡುಗ ಸಣ್ಣವನಿದಾಗಲಿಂದಲೂ ಗೌಡರ ಮನೆಯಲ್ಲಿ ಕೆಲಸದಾಳಾಗಿ ದುಡಿಯುತ್ತಿದ್ದ ವ್ಯಕ್ತಿ. ಇವನು ಹೊಲೇರ ಪೈಕಿ ಇದರಿಂದಲೋ ಏನು ಈ ಹುಡುಗನನ್ನು ಕಂಡರೆ ಗೌಡನಿಗೆ ಆಗುತ್ತಿರಲಿಲ್ಲ. ಬೈಯ್ಯುವುದು, ಹೊಡೆಯುವುದು ಮಾಡುತ್ತಿದ್ದ. ತಡೆಯಲಾಗದ ಸಿಟ್ಟಿದ್ದರು ತಾನು ಏನು ಮಾಡುವ ಸ್ಥಿತಿಯಲ್ಲಿರಲಿಲ್ಲ. ಗೌಡನಿಂದ ತನಗಾದ ಅನ್ಯಾಯದ ಸಿಟ್ಟು ಮರ್‍ಯಾನಲ್ಲಿ ಕಾಡುತ್ತಿತ್ತು. ಜೊತೆಗೆ ಮೊದಲಿನಿಂದಲು ಸಿಂಗಾರೆವ್ವನ ಬಗ್ಗೆ ಒಂದು ತರಹದ ಪ್ರೀತಿಯೋ, ಮೋಹವೋ, ದ್ವೇಷವೋ ಇವನಲ್ಲಿ ಇದ್ದಿತು. ಒಂದೆರಡು ಬಾರಿ ಅವಳನ್ನು ತಬ್ಬಿಕೊಂಡಾಗ ಸಿಂಗಾರೆವ್ವನ ಹತ್ತಿರ ಬೈಸಿಕೊಂಡಿದ್ದಂತು ನಿಜ ಆದರೆ ಅವಳ ಮೇಲಿನ ಮೋಹ ಹಾಗೆಯೇ ಉಳಿಸಿಕೊಂಡವನು.

ತಾಯಿಯ ಕೊಲೆಯನಂತರ ಕಾಣೆಯಾದವನು ಮತ್ತೆ ಹುಚ್ಚಯ್ಯನ ಹೆಣವನ್ನು ಸಾಗಿಸಲು ಕರೆತಂದದ್ದನ್ನು ಶೀನಿಂಗವ್ವ ಹೆಣವನ್ನು ಸಾಗಿಸಲು ಸಿಂಗಾರೆವ್ವಳನ್ನು ನನ್ನ ಜೊತೆ ಮಲಗು ಎಂದನು. ಅದಕ್ಕೆ ಸಿಂಗಾರೆವ್ವ ಒಪ್ಪುವುದಿಲ್ಲ. ಸಿಂಗಾರೆವ್ವಳಿಗೆ ಸಹಾಯ ಮಾಡಲು ಮುಂದಾಗುತ್ತಾನೆ. ಅವಳ ಆರೋಗ್ಯದ ಸ್ಥಿತಿ ಹದಗೆಟ್ಟಾಗ ಚಿಕಿತ್ಸೆಗೆ ಮುಂದಾದ. ಸರಗಂ ದೇಸಾಯಿಗೆ ಹತ್ತಿರದ ಆಳಾದ ಕೊನೆಗೆ ಸಿಂಗಾರೆವ್ವನೆ ಮರ್‍ಯಾನನ್ನು ಎರಡು ಮೂರು ಬಾರಿ ಕೊಲ್ಲಲು ಮುಂದಾಗಿ ಬೇಡ ಎಂದು ಬಿಟ್ಟಿದ್ದಳು. ನಂತರ ಅವಳೇ ಇವನಿಗೆ ಒಲಿದು ಮರ್‍ಯಾನಿಂದ ಸಂತಾನ ಭಾಗ್ಯ ಪಡೆದು ದೇಸಾಯಿಯಿಂದ ಅಪಮಾನಿತಳಾಗಿ ಅವನು ಸತ್ತಾಗ ಜೈಲು ಸೇರಿ ಗಂಡುಮಗುವನ್ನು ಹೆತ್ತು ಸತ್ತಳು. ಸಿಂಗಾರೆವ್ವ ಜೈಲು ಸೇರಿದಾಗಿನಿಂದ ಅನ್ನ ನೀರು ಬಿಟ್ಟು ಹಾವನ್ನು ಅವಳೆಂದು ಭ್ರಮಿಸಿ ಹಾವುಕಚ್ಚಿ ಮರ್‍ಯಾನು ಸತ್ತ.

ಇವನ ಪಾತ್ರದಲ್ಲಿ ಲೇಖಕರು ಹೇಳಲೊರಟಿರುವ ಸಂದೇಶ ಅಧಿಕಾರದ ದೃಷ್ಟಿಯಿಂದ ಸ್ವತಃ ತಮ್ಮವರನ್ನು ಬಲಿಕೊಡುವ ಸಮಾಜದಲ್ಲಿ ತಮ್ಮವರಲ್ಲದವರು ನಮಗೆ ಯಾವರೀತಿ ಸಹಾಯ ಮಾಡುತ್ತಾರೆಂಬುದು ಮೊದಲಿನಿಂದಲು ತಾನು ಪ್ರೀತಿಸಿದವಳಿಗೆ ಸಹಾಯ ಮಾಡಿ ಅವಳಿಗಾಗಿ ತನ್ನ ಜೀವವನ್ನೇ ಬಲಿಕೊಟ್ಟ ಮರ್‍ಯಾನ ಪಾತ್ರ ಮುಖ್ಯವಾದದ್ದು. ಕೆಳವರ್ಗದವರಾದರೂ ಅವರಿಂದ ಮೇಲ್ವರ್ಗದವರಿಗೆ ಯಾವ ರೀತಿ ಸಹಾಯವಾಗುತ್ತದೆಂಬುದಕ್ಕೆ ಮರ್‍ಯಾನ ಪಾತ್ರ, ಸಾಕ್ಷಿಯಾಗುತ್ತದೆ. ಎಂಬುದನ್ನು ಕಾದಂಬರಿಯಲ್ಲಿ ವಿವರಿಸಲಾಗಿದೆ.

ಸರಗಂ ದೇಸಾಯಿ :– ಶಿವಾಪುರದ ಅರಮನೆಯ ಕೊನೆಯ ವಾರಸುದಾರ ಇವನು ಇವನ ನಿಜವಾದ ಹೆಸರು 'ಅಪ್ಪಾಸಾಹೇಬ ದೇಸಾಯಿ' ಎಂದು. ಆದರೆ ಸರಗಂ ದೇಸಾಯಿ ಎಂದು ಹೆಸರು ಬರಲು ಕಾರಣ ಬಯಲಾಟದ ಹುಚ್ಚಿದ್ದುದ್ದರಿಂದ ಹಾಡಬೇಕಾದರೆ ಪ್ರತಿ ಆರಂಭವನ್ನು 'ಸರಿಗಮ ಪದನಿಸ', 'ಸನಿದಪ ಮಗರಿಸ' ಎಂದು ಶುರು ಮಾಡುತ್ತಿದ್ದುದ್ದರಿಂದ ಇವನಿಗೆ ಜನ ಸರಗಂದೇಸಾಯಿ ಎಂದು ಮರು ನಾಮಕರಣ ಮಾಡಿದ್ದರು. ಕಾಲಾನಂತರ ಸಿಂಗಾರೆವ್ವನ ಜೊತೆ ಮದುವೆಯಾದರೂ ಕೂಡ ಒಂದು ದಿನವಾದರೂ ಹೆಂಡತಿ ಎಂದು ಹತ್ತಿರ ಕೂತು ಮಾತನಾಡಿದವನಲ್ಲ, ಬಯಲಾಟದಲ್ಲಿ ಚಿಮಣಾಳ ತೊಡೆಯನ್ನು ನೋಡಿ ಬೇಹೋಶ್ ಆಗುವುದು ಇವನ ಚಟವಾಗಿತ್ತು. ಬಯಲಾಟದ ಆಸೆಗೆ ದುಂದು ಖರ್ಚಿಗೆ ತನ್ನ ವಂಶದ ಆಸ್ತಿಯನ್ನು ಮಾರಲು ಮುಂದಾಗುತ್ತಾನೆ. ಇವನು ದೊಡ್ಡ ಮನೆತನದವನೆ ಆಗಿದ್ದರು ನರದೌರ್ಬಲ್ಯದವನಾದರೂ ಉದಾತ್ತನಾಗಿದ್ದನು. ತಾಯಿಯ ದಿನದ ಕಾರ್ಯಕ್ಕೆ ಕೊಟ್ಟ ಹಣವನ್ನು ಹುಚ್ಚಯ್ಯನ ಸಮಾದಿ ಕಟ್ಟಲು ಕೊಡುತ್ತಾನೆ.

ಹೀಗೆ ತನ್ನ ಸುಖಕ್ಕಾಗಿ ಎಲ್ಲವನ್ನು ಮರೆತು ಕೊನೆಗೆ ಹೆಂಡತಿ ಬಸಿರಾದಳೆಂದು ತಿಳಿದು ತಾನೇ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾನೆ. ಎಲ್ಲಾ ವ್ಯವಸ್ಥೆಯನ್ನು ಸರಿಪಡಿಸಲು ಅರಮನೆ. ಅರಮನೆಯ ದೇಸಾಯಿ ಮುಖ್ಯ ಆದರೆ ಅಂಥವರೇ ತಮ್ಮ ಸ್ವಾರ್ಥಕ್ಕೆ ಬಲಿಯಾಗುತ್ತಾರೆ. ಜೊತೆಗೆ ಒಬ್ಬ ಅಸಮರ್ಥ ಗಂಡನೊಂದಿಗೆ ಬದುಕಲು ಹೆಣ್ಣು ಯಾವ ರೀತಿ ಹೆಣಗಬೇಕಾಗುತ್ತದೆ ಎಂಬುದು ದೇಸಾಯಿಯ ಪಾತ್ರದಲ್ಲಿ ಚಿತ್ರಿಸಿದ್ದಾರೆ.

ನಾಗಮ್ಮ :– ಹಿರಿಯ ದೊರೆಸಾನಿ ಮತ್ತು ಸರಗಂ ದೇಸಾಯಿಯ ತಾಯಿ ಮೊದಲಿನಿಂದಲೂ ಅರಮನೆಯ ವಾರಸುದಾರನಿಗಾಗಿ ಹಂಬಲಿಸುವ ಜೀವ. ಸಿಂಗಾರೆವ್ವ ಬಸುರಾದಳೆ ಎಂದು ಪ್ರತಿನಿತ್ಯ ಕೇಳುತ್ತಿರುತ್ತಾಳೆ. ಹುಚ್ಚಯ್ಯನಿಂದ ಪೂಜೆ ಮಾಡಿಸಲು ಹೇಳಿದಾಗ

ಒಪ್ಪುವುದಿಲ್ಲ ಯಾಕೆಂದರೆ ಸನ್ಯಾಸಿಯಿಂದ ಅರಮನೆಯ ಮೇಲೆ ಶಾಪವಿದೆ ಎಂದು ತಿಳಿಸುತ್ತಾಳೆ. ನಂತರ ಒಂದು ದಿನ ಸಿಂಗಾರೆವ್ವ ಬಸುರಾದಳೆಂದು ತಿಳಿದು ಚಿನ್ನದ ನಡುಪಟ್ಟಿಯನ್ನು ಸಿಂಗಾರೆವ್ವನಿಗೆ ಕೊಟ್ಟು ಅವಳ ಹೊಟ್ಟೆ ಮುಟ್ಟಿನೋಡಿ ಸಂತೋಷಗೊಂಡು ಅಂದೆ ರಾತ್ರಿ ಜೀವ ಬೀಡುತ್ತಾಳೆ. ಮುಖ್ಯವಾಗಿ ಇವಳ ಪಾತ್ರ ಹಂಬಲಿಸುವ ರೀತಿ. ಮನಃ ಕಲಕುವುದು ಯಾಕೆಂದರೆ ತನ್ನ ಜೀವವನ್ನು ಮೊಮ್ಮಗನನ್ನು ಕಾಣಲು ಹಿಡಿದಿಟ್ಟು ಕೊಂಡಿದ್ದಳು. ಇಂದಿಗೂ ಕೆಲವು ಹಲವು ವಯಸ್ಸಾದ ಜೀವಗಳು ತಮ್ಮ ಆಸೆಗಾಗಿ ಕಾದು ಕುಳಿತು ಅದು ನೆರವೇರಿತು ಎಂದಾದಾಗ ನೆಮ್ಮದಿಯ ನಿಟ್ಟುಸಿರಿನೊಂದಿಗೆ ಜೀವ ಬೀಡುತ್ತದೆ ಎಂಬುದನ್ನು ವಿವರಿಸುವ ಪಾತ್ರ ಹಿರಿಯ ದೊರೆಸಾನಿಯ ಪಾತ್ರದಲ್ಲಿ ಅಡಗಿದೆ.

ಹುಚ್ಚಯ್ಯ :– ಮಕ್ಕಳನ್ನು ಹಡೆಯಲು ಪೂಜೆ ಮಾಡುತ್ತೇನೆಂದು ಹೇಳಿದಾಗ ಸಿಂಗಾರೆವ್ವ ನಂಬಿ ಅವನಿಂದ ಪೂಜೆಗೆ ಸಿದ್ಧ ಮಾಡುತ್ತಾಳೆ. ಈ ಹುಚ್ಚಯ್ಯನ ಬಗ್ಗೆ ಊರಿನ ಜನರಿಗೆ ಗೌರವ ಭಕ್ತಿ ಭಾವ. ಅನೇಕ ಪವಾಡಗಳನ್ನು ಮಾಡಿದ್ದಾನೆ. ಸಾಕ್ಷಾತ್ ದೇವರ ಪ್ರತಿರೂಪ ಎಂದು ನಂಬಿದ್ದವರು. ಪೂಜೆಯ ದಿನವೇ ಸಾಯುತ್ತಾನೆ ಮಠ್ಯಾನ ಸಹಾಯದಿಂದ ಇವರ ಅಂತ್ಯ ಸಂಸ್ಕಾರ ನೆರವೇರುತ್ತದೆ. ಇವನ ಪಾತ್ರದ ಮುಖೇನ ಸಮಾಜದಲ್ಲಿ ಮೂಢನಂಬಿಕೆಗಳು ಯಾವ ರೀತಿ ಹರಡಿಕೊಂಡಿದೆ ಎಂದು ಅದನ್ನು ಯಾವ ರೀತಿ ಪಾಲಿಸಿಕೊಂಡು ಬರುತ್ತಿರುವ ನಮ್ಮ ಜನಗಳಿಗೆ ತಿಳಿಹೇಳುವಂತಹ ಸಂದೇಶವನ್ನು ಸಾರಲಾಗುತ್ತಿದೆ. ಹುಚ್ಚಯ್ಯನ ಪಾತ್ರದಲ್ಲಿ ನಂಬಿಕೆ, ಆಚಾರ ವಿಚಾರದಲ್ಲಿ ಜನರು ಯಾವ ರೀತಿ ನಂಬಿ ಪಾಲಿಸಿ ಮೂರ್ಖರಾಗುತ್ತಾರೆಂಬುದನ್ನು ಇಲ್ಲಿ ತಿಳಿಸುತ್ತಾರೆ.

ಒಟ್ಟಾರೆ ಎರಡು ಕೃತಿಗಳಲ್ಲಿ ಸಮಾಜಕ್ಕೆ ಈ ಪಾತ್ರಗಳ ಮುಖಾಂತರ ಒಂದು ಸಂದೇಶವನ್ನು ಹಂಚಲು ಬಳಸುತ್ತಾರೆ. ಪ್ರತಿಯೊಂದು ಪಾತ್ರ ಸನ್ನಿವೇಶಗಳ ಪ್ರಸ್ತುತ ಸಮಾಜಕ್ಕೆ ಅನ್ವಯವಾಗುವುದನ್ನು ಚರ್ಚಿಸಲಾಗಿದೆ. ಜೀವಂತ ಸನ್ನಿವೇಶದಲ್ಲಿ ಈ ಪಾತ್ರ ಚಿತ್ರಣಗಳು ಕಣ್ಣಿಗೆ ಕಟ್ಟುವಂತಹ ಸನ್ನಿವೇಶಗಳ ಮುಖಾಂತರ ಕೃತಿಕಾರ ಕೃತಿ ರಚಿಸಿರುವುದು ಅಮೋಘವಾದ ವಿಚಾರ.

* * * * *

ಅಧ್ಯಾಯ –6

ನಿರೂಪಣ ಶೈಲಿ

"ಸಾಹಿತ್ಯದ ಭಾಷೆಗೆ ವಿಶಿಷ್ಟವಾದ ಸ್ಥಾನವಿದೆ. ಭಾಷೆಯನ್ನು ಸಾಹಿತ್ಯದಿಂದ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಅದು ವಿಭಿನ್ನ ಏಕೆಂದರೆ, ಸಾಹಿತ್ಯ ಎಂಬುದು ಭಾಷೆಯ ಮೂಲಕವೇ ಸಹೃದಯರು ಗ್ರಹಿಸುವ ವಸ್ತು ಭಾಷೆಯ ಮೂಲಕವೇ ಆದ್ದರಿಂದ ಯಾವುದೇ ಕೃತಿಯಲ್ಲಿಯೂ ಅದರದೆಯಾದ ಶೈಲಿಯನ್ನು ಹೊಂದಿರುತ್ತದೆ. ಕಂಬಾರರು ವರ್ತಮಾನ ಕಾವ್ಯದ ಕೇಂದ್ರ ನೆಲೆಯಾಯಿತು. ಆಧುನಿಕ ಮನುಷ್ಯ ಕಥೆಯ ನಾಯಕನಾದ ಆಧುನಿಕ ವ್ಯವಸ್ಥೆ ಕಥೆಯ ನೆಲೆಯಾಯಿತು. ವಸ್ತುವಿಗೆ ತಕ್ಕಂತೆ ಭಾಷೆ ಕೂಡ ಬದಲಾಗಬೇಕಾದದ್ದು ಅನಿವಾರ್ಯ ಎಂಬ ಧೋರಣೆಯನ್ನು ಇಟ್ಟುಕೊಂಡಿದ್ದ ಕಂಬಾರರು ಗ್ರಾಂಥಿಕ ಭಾಷೆಯ ಜತೆಗೆ ಕಸಿ ಮಾಡುವ ಮೂಲಕ ಒಂದು ಹೊಸ ಭಾಷೆಯನ್ನು ಸೃಷ್ಟಿಸಿದರು. ಭಾಷೆ ಹಾಗೂ ಪ್ರಜ್ಞೆ ಎಂಬ ಕಲ್ಪನೆಗಳು ಪ್ರಾಚೀನವಾದವು. ಮನುಷ್ಯ ತಾನು ಸಮಾಜದೊಂದಿಗೆ ನಂಟು ಬೆಸೆಯಲು ಈ ಭಾಷೆ ಎಂಬ ಮಾರ್ಗಮುಖ್ಯವಾದದ್ದು ಈ ಒಂದು ಮಾರ್ಗವನ್ನು ಮತ್ತಷ್ಟು ವಿಶಿಷ್ಟ ರೂಪದೊಂದಿಗೆ ಕೃತಿ ರಚನೆಯಲ್ಲಿ ತೊಡಗುತ್ತಾರೆ."[1]

ಕಂಬಾರರ ಈ ಎರಡು ಕೃತಿಗಳಲ್ಲಿ ದೇಶಿಯ ಭಾಷೆ ಮತ್ತು ಅದರ ತಂತ್ರವನ್ನು ಬಳಸಿಕೊಂಡಿದ್ದಾರೆ. ಗ್ರಾಮೀಣ ಬದುಕು, ಮೂಢನಂಬಿಕೆ, ವಸಾಹತುಶಾಹಿ ಇವುಗಳ ಕುರಿತಾಗಿ ಬಳಸಿರುವ ತಂತ್ರಗಾರಿಕೆಯನ್ನು ಈ ಅಧ್ಯಯದಲ್ಲಿ ಚರ್ಚಿಸಲಾಗಿದೆ.

ಕಂಬಾರರು ನವ್ಯ ಕಾಲಘಟ್ಟಕ್ಕೆ ಸೇರಿದ ಲೇಖಕರಾಗಿದ್ದರು. ಇವರ ಎರಡು ಕೃತಿಗಳು ನವ್ಯೋತ್ತರ ಕಾಲಘಟ್ಟದಲ್ಲಿ ರಚನೆಯಾದವುಗಳಾಗಿವೆ. ಆದರೂ ಕಾದಂಬರಿಗಳಲ್ಲಿ ನವ್ಯದ ಕೆಲವು ಅಂಶಗಳನ್ನು ಗುರುತಿಸಬಹುದಾಗಿದೆ. ಎರಡೂ ಕಾದಂಬರಿಗಳ ನಿರೂಪಣ ತಂತ್ರ ನವ್ಯದ ಛಾಯೆಯಾಗಿದೆ. ಕಾದಂಬರಿಯ ಮುಖ್ಯ ಪಾತ್ರದ ಉತ್ತಮ ಪುರುಷ ನಿರೂಪಣೆಯನ್ನು ಎರಡೂ ಕೃತಿಗಳಲ್ಲಿ ಬಳಸಿಕೊಳ್ಳಲಾಗಿದೆ. ಕಾರಣ ವ್ಯಕ್ತಿಯ ಸಂವೇದನೆ, ನುಡಿಗಟ್ಟು, ಆಶೋತ್ತರಗಳಿಗೆ ಹತ್ತಿರವಾಗಲು ಈ ಮಾರ್ಗಗಳು ಅನುಕೂಲವಾಗಿದೆ. ಹೀಗಾಗಿ ಶಿವನ ಡಂಗುರ ಕೃತಿಯಲ್ಲಿ ಲೇಖಕರೇ ನಿರೂಪಕರಾದರೂ, ಒಂದೊಂದು ಕಡೆ ಪಾತ್ರಗಳೇ ನಿರೂಪಣೆ ಮಾಡುತ್ತವೆ. ಹಾಗೆಯೇ ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಶೀನಿಂಗವ್ವ ಮುಖ್ಯ ಪಾತ್ರವಾಗಿರುವಂತೆ ನಿರೂಪಕಳೂ ಆಗಿದ್ದಾಳೆ. ಈ ಇಬ್ಬರು ನಿರೂಪಕರ ಭಾವ ಜಗತ್ತಿನಲ್ಲಿ ಇಲ್ಲವೇ ಕಥನ ಪ್ರಕ್ರಿಯೆಯಲ್ಲಿ

1. ಚಂದ್ರಶೇಖರ ಕಂಬಾರರ ಕಾವ್ಯಭಾಷೆ – ಪುಟ 8

ಕಾದಂಬರಿಕಾರ ಅನಗತ್ಯವಾಗಿ ಯಾವುದೇ ವಿಷಯವನ್ನು ಪ್ರಸ್ತಾಪಿಸಿರುವುದಿಲ್ಲ. ಎರಡು ಕಾದಂಬರಿಗಳಲ್ಲಿಯೂ ಅಲ್ಲಲ್ಲಿ ಲೇಖಕರು ಅಗತ್ಯ ಸಂದರ್ಭಗಳಲ್ಲಿ ಮಾತ್ರ ಕಥೆಯೊಳಗೆ ಪ್ರವೇಶ ಮಾಡುತ್ತಾರೆ. ಎರಡು ಕಾದಂಬರಿಗಳಲ್ಲಿರುವ ಪಾತ್ರಗಳು, ಘಟನೆಗಳನ್ನು ನೇರವಾಗಿ ದಾಖಲಿಸುತ್ತಾ ಹೋಗುತ್ತದೆ. ಇಲ್ಲಿ ಯಾವುದೇ ರೀತಿಯ ಕಾಲ್ಪನಿಕ ಘಟನೆಗಳಿಗೆ ಅವಕಾಶ ಕಲ್ಪಿಸಿಲ್ಲ ಶಿವನಿಂಗವ್ವನ ಮೂಲಕ ಕಥೆಯನ್ನು ನಿರೂಪಿಸಿರುವುದು ಕಾದಂಬರಿಯ ವೈಶಿಷ್ಟ್ಯವಾಗಿರುವಂತೆ ಕಾದಂಬರಿಕಾರನ ನಿರೂಪಣಾ ತಂತ್ರಕ್ಕೆ ಸಾಕ್ಷಿಯಾಗಿದೆ.

ಕಂಬಾರರು ಕಾದಂಬರಿಗಳಲ್ಲಿ ಜನಪದ ತಂತ್ರಗಳ ಬಳಕೆಯನ್ನು ಕಾಣಬಹುದು. ಹಳ್ಳಿಯ ವರ್ಣನೆ, ಜಾನಪದ ಹಾಡು, ಆಚರಣೆ ಹಬ್ಬ, ಕಥೆ, ಉಡುಗೆ-ತೊಡುಗೆ, ಜಾನಪದ ಆಟ, ಮೊದಲಾದ ಜಾನಪದದ ತಂತ್ರದ ಬಳಕೆ ಇರುವುದನ್ನು ಕಾಣಬಹುದು. ಅದೇ ರೀತಿ ಆಧುನಿಕ ತಂತ್ರಗಳ ಬಳಕೆಯಿರುವುದು ಸಹ ನೋಡಬಹುದು ಸ್ಕೂಲು, ಪೋಸ್ಟ್ ಆಫೀಸು, ಕಾಲೇಜು, ಆಸ್ಪತ್ರೆ, ಚುನಾವಣೆ, ಚಳುವಳಿ, ಪೊಲೀಸ್, ಡಿ.ಸಿ, ಕೋರ್ಟು, ಈ ರೀತಿಯ ಮುಂತಾದ ಅಂಶಗಳನ್ನು ಸಹ ಕಾದಂಬರಿಯಲ್ಲಿ ಬಳಕೆ ಮಾಡಲಾಗಿದೆ.

ಕಂಬಾರರು ತಮ್ಮ ಕೃತಿಯ ವಸ್ತುವನ್ನು ಸಮರ್ಪಕ ವಿನ್ಯಾಸಕ್ಕೆ ಜಾಜಿ ಸಹಜ ಸಂಕೀರ್ಣತೆಯಲ್ಲಿ ಅದನ್ನು ಅನಾವರಣಗೊಳಿಸಿದ್ದಾರೆ. ಕಾದಂಬರಿಗಳಲ್ಲಿ ಅತ್ಯಂತ ಸರಳವಾದ ನೇರವಾದ ನಿರೂಪಣಾ ಮಾರ್ಗವನ್ನು ಅನುಸರಿಸಿರುವುದು ಕಾದಂಬರಿಗಳ ಸ್ವರೂಪದ ವೈಶಿಷ್ಟತೆಯಾಗಿದೆ. ಕಂಬಾರರು ಬಹುತೇಕ ಕೃತಿಗಳಲ್ಲಿ ಬಳಸಿರುವ ಭಾಷೆ ಉತ್ತರ ಕರ್ನಾಟಕದ ಗ್ರಾಮ್ಯ ಭಾಷೆ ಜೊತೆಗೆ ಲೇಖಕರು ಕೆಲವೊಮ್ಮೆ ಶಿಷ್ಟ ಭಾಷೆಯಲ್ಲಿ ಸಂಭಾಷಣೆಯನ್ನು ನಿರೂಪಿತವಾಗುವಂತೆ ಮಾಡಿರುವುದು ಓದುಗರಿಗೆ ಸರಾಗವಾಗಿ ಮುಟ್ಟುತ್ತದೆ. ಎರಡು ಕೃತಿಗಳಲ್ಲಿಯೂ ಗ್ರಾಮ್ಯ ಭಾಷೆಯಲ್ಲಿಯೇ ನಿರೂಪಿತವಾಗಿ ಜಾನಪದ ಸೊಗಡನ್ನು ಎತ್ತಿತೋರುತ್ತವೆ.

ಸಾವಿರಾರು ವರ್ಷಗಳ ಈ ಹೆಮ್ಮರದಡಿಯಲ್ಲಿ ಕಟ್ಟೆಯಿದೆ ಸದರಿ ಹೆಮ್ಮರದ ವಯಸ್ಸನ್ನು ಕೇಳಿದರೆ "ಇಪ್ಪತ್ತರ ಯಾಡ್ಡ್ ಕೈ" ಎಂದು ಎರಡು ಕೈ ಬೆರಳು ತೋರಿಸಿ ಹೇಳುತ್ತಾರೆ. ಜನ ಒಂದು ಕೈಗೆ ಐದಾದರೆ ಇಪ್ಪತ್ತರ ಹತ್ತು ಎಂದರೆ ಇನ್ನೂರು ವರ್ಷವಾಯಿತು."

ಈ ರೀತಿಯ ಹಾಡುಭಾಷೆಯಲ್ಲಿ ಹೇಳಿದರೆ ಅಲ್ಲಿನ ಜನಕ್ಕೆ ಬೇಗ ಅರ್ಥವಾಗುತ್ತದೆ ಇಂಥಹ ಶೈಲಿಯನ್ನು ಬಳಸಿದವರು (ಬೇಂದ್ರೆಯನ್ನು ಬಿಟ್ಟರೆ ನಂತರ) ಕಂಬಾರರೆ.

ಜಾನಪದದ ಒನ್ನೆಲೆಯಲ್ಲಿ ಶಿವಾಪುರದಲ್ಲಿ ಒಂದು ಮಡುವಿದೆ ಆ ಮಡುವೇ "ಮಲ್ಲೀಮಡು" ಗೌಡನ ಸಹವಾಸದಿಂದ ಕೆಟ್ಟ ಮಲ್ಲೀ ಈ ಮಡುವಿಗೆ ಬಿದ್ದು ಸತ್ತಳೆಂದು ಅವಳನ್ನು ಹುಡುಕುತ್ತಾ ಬಂದ ತಾಯಿ "ಮಲ್ಲೀ ಮಲ್ಲೀ ಎಲ್ಲಿದ್ದೀಯೇ ಮಲ್ಲಿ" ಎಂದು ಕರೆಯುತ್ತಾ ಹುಡುಕಿ ಹುಡುಕಿ ಅವಳೂ ಮಡುವಿಗೆ ಬಿದ್ದು ಸತ್ತಳು. ಈಗಲೂ ಬೇಸಿಗೆ ಕಾಲದಲ್ಲಿ ಹಕ್ಕಿಗಳು ಮಡುವಿನ ಸುತ್ತ ಹಾರಾಡುತ್ತ

"ಮಲ್ಲೀ ಮಲ್ಲೀ

ಎಲ್ಲಿದ್ದೀಯೇ ಮಲ್ಲೀ?"

ಎಂದು ಅವಳ ತಾಯಿಯ ಧ್ವನಿಯನ್ನು ಅನುಕರಣೆ ಮಾಡಿ ಹಾಡುತ್ತ ಅಳುತ್ತವಂತೆ. ಹೀಗೆ ಜಾನಪದ ಶೈಲಿಯನ್ನು ಬಳಸಿ ರಚನೆ ಮಾಡಿರುವುದು ಗ್ರಾಮ್ಯದ ಭಾಷೆಯಲ್ಲಿಯೇ ಶಿಷ್ಟ ಭಾಷೆಯ ಹಂಗನ್ನು ತೊರೆಯುವಂತಿದೆ.

"ಮಾಡ್ಕೋತೀನಿ ಬಿಡತೀನಿ ಅಂಗ ಹೇಳುಕ ಹೆಂಗಸಿಗೆ ಅಧಿಕಾರ ಎಲ್ಲಿದೆಪ? ಅಷ್ಟಾಗಿ ಗಂಡಸರು ಇವರ ಮನಸಿನಾಗ ಏನೈತಿ ಅಂತ ಕೇಳಿದರಲ್ಲೇನ ಹೇಳೋದು? ಸಿಂಗಾರೆವ್ವನ ಸೊಭಾವನೂ ಹಂಗ ಅಂತಿಟ್ಟಿಕ ಮೊದಲನೇ ಮದಿವ್ಯಾಗ ಬಾಯಿ ಕಳಕೊಂಡಿದ್ದಳೆ. ಹೆಚ್ಚು ಮಾತಾಡತಿರಲಿಲ್ಲ. ಹಾ ಅಂದರೆ ಹಾ; ಹೂ ಅಮದರ ಹೂ! ಎಷ್ಟು ಬೇಕೋ ಅಷ್ಟು".

"ಅಲ್ಲಬೇ. ಗೌಡನಾದರೂ ದೇಸಾಯಿ ರೋಗಿಷ್ಟನ್ನೋದು ತಿಳೀಬಾರದ? ತಿಳಿದೂ ಮಗಳು ಇಂಥವನ ಕೊರಳಿಗೆ ಕಟ್ಟ್ಯೋದಂದರ....?[2]

ಈ ಸಂಭಾಷೆಗಳನ್ನು ನೋಡಿದಾಗ ಶೀನಿಂಗವ್ವನ ಮಾತುಗಳು ಉತ್ತರ ಕರ್ನಾಟಕದ ಗ್ರಾಮ್ಯ ಭಾಷೆಯಿಂದ ಕೂಡಿದೆ ಇಲ್ಲಿ ಲೇಖಕರು ಬಳಸುವ ಭಾಷೆಯೂ ಗ್ರಾಮ್ಯ ಭಾಷೆಯಾಗಿದೆ. ಈ ರೀತಿಯ ಗ್ರಾಮೀಣ ಜಾನಪದೀಯ ಭಾಷೆಯ ಬಳಕೆ ಕಂಬಾರರ ಕಾದಂಬರಿಯ ಸತ್ವವಾಗಿ ಗೋಚರವಾಗುತ್ತದೆ. ಹಾಗೆಯೇ ಈ ಕಾದಂಬರಿಯಲ್ಲಿ ಕಂಬಾರರು ಕಾವ್ಯದ ಬಳಕೆಯನ್ನು ಕೂಡ ಮಾಡಿದ್ದಾರೆ. ಅದು ಹಿರಿಯ ದೊರೆಸಾನಿಯ ತನ್ನ ಚಿನ್ನದ ನಡುಪಟ್ಟಿಯನ್ನು ತಮ್ಮ ಅರಮನೆಯ ವಾರಸುದಾರರನ್ನು ಹೆತ್ತ ತಾಯಿಗೆ ನೀಡಲು ಬಚ್ಚಿಟ್ಟುಕೊಂಡು ಆಗಾಗ ಈ ಹಾಡನ್ನು ಹಾಡುತ್ತಿರುತ್ತಾಳೆ.

"ಚಿನ್ನದ ನಡಪಟ್ಟಿ ರನ್ನದ ನಡಪಟ್ಟಿ

ಚಿನ್ನ ರನ್ನದ ನಡಪಟ್ಟಿ ॥ ಕೋ ॥

2. ಚಂದ್ರಶೇಖರ ಕಂಬಾರರ ಸಿಂಗಾರವ್ವ ಮತ್ತು ಅರಮನೆ – ಪುಟ 42

ಚಿನ್ನ ರನ್ನದ ನಡಪಟ್ಟಿ ಕೊಡವೇನ

ಮೊಮ್ಮಗನ ಹಡದದ ಸೊಸಿ ಮುದ್ದಿಗೆ ॥ ಸೋ ॥

ಶೀನಿಂಗವ್ವನ ಕೆಲವು ಮಾತುಗಳನ್ನು ಕಂಬಾರರು ಗ್ರಾಮ್ಯ ಭಾಷೆಯಿಂದ ಶಿಷ್ಟ ಭಾಷೆಗೆ ಪರಿವರ್ತಿಸಿದ್ದಾರೆ. ಶೀನಿಂಗವ್ವನಂತಹ ಅನಕ್ಷರಸ್ಥಳ ಭಾಷೆ ಓದುಗರಿಗೆ ಗ್ರಹಿಸಲು ಕಷ್ಟವಾಗಬಾರದೆಂಬ ದೃಷ್ಟಿಯಿಂದ ಲೇಖಕರು ಅವಳ ಮಾತುಗಳನ್ನು ಶಿಷ್ಟ ಭಾಷೆಗೆ ಪರಿವರ್ತಿಸಿಕೊಟ್ಟಿದ್ದಾರೆ.

"ನಡಾವಳಿಯಲ್ಲಿ ಕೂಡಾವಳಿಯಲ್ಲಿ ನೀನು ನನ್ನ ಹೆಣ್ಣಾಗು, ಇಲ್ಲಾ ನನ್ನನ್ನು ಕೊಂದು ಹೋಗು".[3] ಎಂದು ಹೇಳುವ ಬರಮೇಗೌಡನ ಮಾತಿನಲ್ಲಿ ಬರುವ ಗ್ರಾಮ್ಯ ಭಾಷೆಯ ಜೊತೆಗೆ ಒಂದು ಹೆಣ್ಣನ್ನು ನಿವೇದನೆ ಮಾಡಿಕೊಳ್ಳುವಂತಹ ರೀತಿ. ಬೇರೆಯದ್ದೇ ಆಗಿದೆ. ಹೆಣ್ಣನ್ನು ಇಂದು ಮದುವೆಯಾಗು ಎಂದೂ ಕೇಳುವ ಬದಲು ಜಾನಪದದ ಸೋಗಡನ್ನು ಬಳಸುವುದು. ಅಲ್ಲಿರುವಂತಹ ಜನಸಮೂಹಗಳ ಮೇಲೆ ಬೇರೆಯದೇಯಾದ ಪರಿಣಾಮವನ್ನು ಬೀರುತ್ತದೆ. ಆ ರೀತಿ ಹೇಳುವ ಮಾತು ಒಂದು ಹೊಸತನವನ್ನು ತಂದುಕೊಡುತ್ತದೆ.

"ಮರ್‍ಯಾ ಬುಸ್ ಅಂತ ಧಿಮಾಕಿನಿಂದ ಹೊಗೆಬಿಟ್ಟ, ಹಲ್ಲು ಕಾಣಿಸುವಂತೆ ನಕ್ಕು ಸಿಂಗಾರೆವ್ವನನ್ನು ಒಗರಿನಿಂದ ನೋಡಿ. "ನೀ ನನ್ನ ದೇಸಗತಿ ಕೊಟ್ಟರೂ ಬ್ಯಾಡ. ಈಗಿಂದೀಗ ನನ್ನ ಜೋಡಿ ಒಮ್ಮೆ ಮಲಗು. ಹೆಣ ಒಯ್ತೀನಿ. ಏನಂತಿ?"

ಸಿಂಗಾರೆವ್ವನ ಕಣ್ಣು ಕೆಂಪಗಾದವು' ಯಾರಿಗಾದರೂ ಕೇಳಿತೆಂದೂ ಚಿಂತಿಸದೆ. "ನನ್ನ ಮನಿ ಎಂಜಲೂ ಉಂಡ ಹೊಲೆಯಾ. ನನ್ನ ಜೋಡಿ ಮಲಗಂತ ಹೇಳ್ಳೋ. ಹಾಂಗಾದೇನೋ?" ಎಂದಳು.

ಒದರಿ ತ್ರಾಸ ಮಾಡಿಕೊಬ್ಯಾಡ. ಬ್ಯಾಡಂದರ ಬಿಡು. ಇಕಾ ಹೊಂಟೆ. ಹುಚ್ಚಯ್ಯನ ದೊರೆಸಾನಿ ಕೊಂದ್ರಾಳೆಪೋ ಅಂತ ಹೇಳಿಕೊಂಡ ಹೋಗತೀನಪ್ಪ. ಮಂದಿ ಬೆಳಿಗ್ಗೆದ್ದ ಕಣ್ಣುಜ್ಜಿಕೊಂಡ ನೋಡತಾರ: ನಿನ್ನ ಕೈಯಾಗ ಬೇಡಿ ಹಾಕಿ ಪೋಲಿಸ ಪೋಜದಾರ ಎಳಕೊಂಡ ನಡದ್ದಾರ! ಬೇಕಾದರೆ ನಿಮ್ಮಪ್ಪಗ ನಾನ ಸುದ್ದಿ ಮುಟ್ಟಸ್ತೀನಿ. ಏ ಶೀನಿಂಗೀ. ಬರೋಬರಿ ಹೌಂದಲ್ಲ?"

3. ಚಂದ್ರಶೇಖರ ಕಂಬಾರರ ಶಿವನ ಡಂಗುರ – ಪುಟ 31

ಸಿಂಗಾರೆವ್ವ ಮತ್ತು ಮರ್ಯ್ಯಾನ ನಡುವಿನ ಸಂಭಾಷಣೆಯಲ್ಲಿ ಸಿಂಗಾರೆವ್ವನ ಅಂತರಾಳದ ಸೇಡನ್ನು ಹೇಳುವಾಗ ಮರ್ಯ್ಯಾನ ಮೇಲಿನ ದ್ವೇಷ ಎಂದೇ ತಿಳಿಯುತ್ತದೆ ಇಲ್ಲಿ ಮರ್ಯ್ಯಾನನ್ನು ನಿಂದಿಸುವಾಗಲು ಜಾನಪದೀರ ಶೈಲಿಯ ಪದಗಳನ್ನು ಬಳಸುವುದು.

ಕಂಬಾರರು ಈ ಗ್ರಾಮ್ಯ ಭಾಷೆಯ ಜೊತೆಗೆ ಕೆಲವೊಂದು ಕಡೆ ಶಿಷ್ಟ ಭಾಷೆಯ ಪದಗಳನ್ನು ಬಳಸುತ್ತಾರೆ. ಸಹಕಾರಿ ಬ್ಯಾಂಕು, ಪೋಸ್ಟಾಫೀಸು, ಸ್ಕೂಲೂ, ಕಾಲೇಜು, ಆಸ್ಪತ್ರೆ, ವಿಸ್ಕಿ, ಪೇಪರ್ ಕಟಿಂಗ್, ಇನ್ಸ್‌ಪೆಕ್ಟರ್, ರೇಲ್ವೆ, ಡಾಕ್ಟರ್, ಡಿ.ಸಿ., ಬಿಗ್‌ಬಾಸ್, ಅಮೇರಿಕಾ, ಮಿಸ್‌ಫಿಟ್, ರಿಹರ್ಸಲ್, ಪೋಲೀಸ್, ಕಂಪ್ಲೇಂಟ್, ಟೀ ಕ್ಲಬ್, ಕೋರ್ಟು, ಬ್ಲಡ್‌ಪೆಷರ್, ಈ ರೀತಿಯ ಪದಗಳನ್ನು ಎರಡು ಕಾದಂಬರಿಗಳಲ್ಲಿ ಬಳಸಿದ್ದಾರೆ. ಕಂಬಾರರ ಈ ಕಾದಂಬರಿಗಳಲ್ಲಿ ಜನರ ಅಭಿವ್ಯಕ್ತಿ ಮಾಧ್ಯಮವಾಗಿ ಬಳಕೆಯಾಗುತ್ತಿದೆ. ನಗರದ ಶಿಷ್ಟ ಭಾಷೆಯಲ್ಲಿ ಪ್ರಾದೇಶಿಕ ವಾದ ಗ್ರಾಮ್ಯ ಭಾಷೆಯ ಮಿಶ್ರಣ ಮಾಡಿ ಕಾದಂಬರಿಗೆ ಜೀವನ ತುಂಬಿದ್ದಾರೆ. ಈ ರೀತಿಯ ಸಂಭಾಷಣೆಗಳ ಮೂಲಕ ಕಾದಂಬರಿಗಳು ಬೆಳೆಯುತ್ತಾ ಹೋಗುತ್ತವೆ.

ಕಾದಂಬರಿಗಳಲ್ಲಿ ಬರುವ ಜಾನಪದ ಹಾಡುಗಳು ಸಹ ಪ್ರಮುಖವಾದವು.

ಕೆಂಪಾನ ಹೆಣ್ಣಿಂದ ಸಂಪೀಗಿ ಕೆನೆಯೆಂದ
ಸಂಪನ್ನ ಹೋಗಿ ಹಿಡಕೊಂಡ। ಚೆಂಬಸವ
ನನ ಮಗಳು ಶಾರವ್ವ ಪಡಕೊಂಡ॥[4]

ಶಿವನ ಡಂಗುರ ಕಾದಂಬರಿಯಲ್ಲಿ ಮೊದಲು ಪ್ರಸ್ತಾಪ ಮಾಡುವಂತೆ ಶಿವಾಪುರಕ್ಕೆ ಮೊದಲು ಚರಿತ್ರೆ ಇರಲಿಲ್ಲ. ಇದ್ದದ್ದು ಪುರಾಣ ಮಾತ್ರ. ಪುರಾಣದ ಪಾಠಾಂತರಗಳು ಇವೆ. ಜೋಗ್ತಿಯರ ಹಾಡಿನಲ್ಲಿ ಕುರುಬರ ಹಾಡಿನಲ್ಲಿ ಬರುವ ಪ್ರಸಂಗಗಳಲ್ಲಿ ಇವರ ಬಗ್ಗೆ ವರ್ಣನೆ ಇದೆ ಎಂದು ಲೇಖಕರು ಹೇಳುತ್ತಾರೆ. ಪುರಾಣ, ಕಾವ್ಯಗಳು ಮೊದಲು ಜಾನಪದದ ಹಿನ್ನೆಲೆಯಲ್ಲಿ ಬಂದವಂತವು. ಅಂತಹ ತುಣುಕುಗಳಿಗೆ ಪ್ರಮುಖ ಉದಾಹರಣೆ ಮೇಲೆ ಬರುವ ಒಂದು ಕಾವ್ಯದ ಮುಖಾಂತರ ಕಾಣಬಹುದು.

ಹಳ್ಳಿಗಳಲ್ಲಿ ಹಿಂದೆ ಪ್ರತಿಯೊಂದು ವಿಷಯಕ್ಕೂ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು ಗಾದೆಗಳ ಮುಖಾಂತರ ಮಾತನಾಡುತ್ತಿದ್ದರು ಎಂಬುದನ್ನು ಆಧಾರವಾಗಿಟ್ಟುಕೊಂಡು ಈ ರೀತಿಯ ಹಾಡುಗಳ್ನು ಬಳಸುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ.

---

4. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 92

ಜಾನಪದದ ಕಥೆಯ ಓನ್ನೆಲೆಯಲ್ಲಿ ಬರುವ ಒಂದು ಪ್ರಮುಖವಾದ ಕಥೆ ಗಂಡು ಸಂತಾನ ಬೇಕೆಂದು ಯಜ್ಞಾ, ಯಾಗಾದಿ ಮಾಡಿಸುವುದು ಒಂದು ಕಥೆ ಅದಕ್ಕೆ ಮತ್ತೊಂದು ಕಥೆ ಬರಮೇಗೌಡನ ಮನೆತನದ ಹಿಂದೆ ಒಂದು ಕಥೆಯನ್ನು ಕಟ್ಟುತ್ತಾರೆ. ದೊಡ್ಡೇಗೌಡ, ದೊಡ್ಡವ್ವ ಗಂಡ-ಹೆಂಡತಿ ಎರಡೆಕೆರೆ ಬಿತ್ತಿ ಬೆಳೆದುಕೊಂಡು ತಮ್ಮ ಪಾಡಿಗೆ ತಾವಿದ್ದರು. ದೊಡ್ಡವ್ವ ಆರು ಮಕ್ಕಳ ತಾಯಿ! ಅವಳ ಬಳಿ ತಾನುಟ್ಟ ಒಂದೇ ಸೀರೆ ಅದನ್ನು ಹಾಸಿ ಅದರ ಮೇಲೆ ಆರುಜನ ಮಕ್ಕಳನ್ನು ಸಾಲಾಗಿ ಮಲಗಿಸಿ ಸಲಹಿಕೊಂಡಿದ್ದಳು. ಒಂದು ಸಲ ಎಲ್ಲರೂ ಮಲಗಿದ ಮೇಲೆ ಒಂದು ಮಗು ಮಲಗುವಷ್ಟು ಸೀರೆ ಖಾಲಿ ಉಳಿಯಿತಂತೆ! ಆಗ ದೊಡ್ಡವ್ವ "ದೇವರೇ ನನಗೆ ಇನ್ನೊಂದು ಮಗುವಾಗಿದದರೆ ಎಷ್ಟು ಚೆನ್ನಾಗಿತ್ತಲ್ಲ! ಎಂದು ನಿಟ್ಟುಸಿರು ಬಿಟ್ಟಳಂತೆ!. ಆಗ ಮಗುವಾಯಿತು ಎಂದು ಕಥೆ ಹೇಳುತ್ತಾರೆ.

ಇಂತಹ ಕಥೆಗಳ ಮೂಲಕ ಸಂಬಂಧದ ಒಳಹುರವನ್ನು ತಿಳಿಸಲು ಹೊರಟವರು ಕಂಬಾರರು. ಜಾನಪದ ಕಥೆಗಳು ಈ ರೀತಿಯ ಕುತೂಹಲದ ಜೊತೆಗೆ ನಿಷ್ಕಳಂಕವಾದ ಮನಸ್ಸಿನಿಂದ ಕೂಡಿದವರ ಕಥೆಗಳು ಸಮಾಜಕ್ಕೆ ಆದರ್ಶವಾಗಲು ಸಹ ಸಹಕಾರಿಯಾಗುತ್ತದೆ.

"ನೀನಾದರೂ ಬುದ್ಧೀ ಹೇಳಬಾರದ ನನ್ನಪ್ಪಾ. ಈ ಬುದ್ಧಿಗೇಡಿ ಪೈದಾಸರಿಗೆ? ಇದಕ್ಕೆಲ್ಲಾ ರೊಕ್ಕದ ಹಪಾಪಿ ಹತ್ತೇನೆ. ಉಣ್ಣು ಅನ್ನಾ ಬಿಟ್ಟು ಕಬ್ಬಿಗಿ ಗಂಟ ಬಿದ್ದಾವ್ರ".

ಈ ರೀತಿ ಹೇಳುವ ತುಂಗವ್ವ ಮಾತಿನಲ್ಲಿ ಹಳ್ಳಿಯ ಬಗ್ಗೆ ಕಾಳಜಿ ಎದ್ದು ಕಾಣುತ್ತದೆ. ಒಂದು ಹಳ್ಳಿಯ ಹೆಣ್ಣು ಮಗಳು ಅದರಲ್ಲೂ ಜೋಗತಿಯಾದವಳು ಹಳ್ಳಿಯ ಉದ್ಧಾರಕ್ಕಾಗಿ ಕಾಳಜಿ ವಹಿಸುವಂತದ್ದನ್ನು ಈ ಪಾತ್ರದಲ್ಲಿ ಚಿತ್ರಿತವಾಗಿದೆ.

ಇದು ಸತ್ಯದ ಗುಡ್ಡ ನೀವು ಸತ್ಯದ ಶಿಷ್ಯರು ।
ಸತ್ಯದ ಶಿಷ್ಯರಿಗೆ ಬೇರೆ ಸತ್ಯವಿಲ್ಲವೋ ॥
ಇಲ್ಲಿ ಬರುವವರು ಸತ್ಯವಲ್ಲದ ಇನ್ನೊಂದ ನಾಡಬಾರದೋ ।
ಸತ್ಯದ ನಾಮವ ನೆನೆದಲ್ಲಿ ಸಾನಿಧ್ಯವಪ್ಪುದು
ಸಾನ್ನಿಧ್ಯದಲಿ ಸಕಲ ಪರಿಣಾಮವೊ ॥
ನಿನ್ನ ಭಾಗ್ಯದ ಮಗಳು ಬಾಗಿಲಲಿ ನಿಂತಾಳು
ನಿಂತಲ್ಲಿ ಹೊಸ ಶಿವಾಪುರದ ರಚಿಸೊ॥
ಇಂತಿದು ಶಿವನ ಡಂಗುರವೂ॥[5]

5. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 270

ಶಿವನ ಡಂಗುರದಲ್ಲಿ ಇದರ ಪ್ರಸ್ತಾಪವಿದೆ. ಒಂದು ಹೊಸ ಹಳ್ಳಿಯ ಪುನರ್ ನಿರ್ಮಾಣಕ್ಕೆ ವ್ಯಕ್ತಿಯನ್ನು ಸನ್ನದು ಮಾಡಲು ಬಳಸುವ ಹಾಡಿನ ದಾಟಿ ವಿಶಿಷ್ಟವಾದದ್ದು.

"ಸಾಕ್ಷಾತ್ ಶಿವನೆ ಹಾಗೇ ಬಂದು ಹೇಳಿ ಹೋದನೆಂದು ಶಿಂಗಾರೆವ್ವ ಸಂಪೂರ್ಣ ನಂಬಿದ್ದಳು. ಹಾಗಂತ ನಾನು ಸುಮ್ಮನಿರಲಿಲ್ಲ. ಅವರಿವರೆದುರಿಗೆ ಅವನ ವರ್ಣನೆ ಮಾಡಿ. ಅವ ಯಾರೂ. ಏನು. ಎತ್ತ. ಎಲ್ಲಾ ತಿಳಿಯಲು ಹವಣಿಸುತ್ತಿದ್ದೆ. ನಂಜಿಹಲಿವುಳ್ಳಳಲ್ಲಿ ಶಿಂಗಾರೆವ್ವನಿಗೆ ಬಂಜೆ ಎಂಬ ಶಬ್ದ ಖಾಯಂ ಅಂಟಿಕೊಂಡು ಬಿಟ್ಟಿತ್ತು ಮೊದ ಮೊದಲು ಎಷ್ಟೊಂದು ಜನ ಹೆಂಗಸರು ಅರಮನೆಗೆ ಬರುತ್ತಿದ್ದವರು ಕಮ್ಮಿಯಾಗಿ ಕೊನೆಗೆ ಅವರು ಬರುವುದು ನಿಂತೋಹೋಯಿತು. ಮಕ್ಕಳನ್ನೆತ್ತಿಕೊಂಡು ಹೋಗುತ್ತಿದ್ದ ಅವ್ವಕ್ಕಗಳು ಅರಮನೆ ಮುಂದೆ ಹಾಯುವಾಗ ಬಂಜೆ ದೊರೆಸಾನಿಯ ಕೆಟ್ಟ ದೃಷ್ಟಿ ತಾಗಿತ್ತೆಂದು ಮಕ್ಕಳ ಮೇಲೆ ಸೀರೆ ಸೆರಗು ಹೊದಿಸಿ ಮರೆ ಮಾಡಿಕೊಂಡು ದಾಟಿ ಹೋಗುತ್ತಿದ್ದರು.

ಇದು ಓದುಗರ ಅನುಕೂಲಕ್ಕಾಗಿ ಶೀನಿಂಗವ್ವನ ಗ್ರಾಮ್ಯ ಭಾಷೆಯನ್ನು ಶಿಷ್ಟ ಭಾಷೆಗೆ ಪರಿವರ್ತಿಸಿದ್ದಾಗಿದೆ ಎಂಬುದಕ್ಕೆ ಉದಾಹರಣೆಯಾಗಿದೆ. ಕಾದಂಬರಿಯ ಲೇಖಕರೂ ಕೂಡಾ ಶೀನಿಂಗವ್ವಳ ಪ್ರಜ್ಞೆಗೆ ಹೊರತಾದ ಕೆಲವು ವಿಷಯಗಳನ್ನು ಚರ್ಚಿಸಿದ್ದಾರೆ. ಶೀನಿಂಗವ್ವನಿಗೆ ಕಾಣದ ಇನ್ನೊಂದು ಮುಖವನ್ನು ಲೇಖಕರೂ ಪರಿಚಯಿಸಿದ್ದಾರೆ. ಲೇಖಕರ ಅನುಭವದ ನೆಲೆಯಲ್ಲಿ ಆ ವಿಚಾರಗಳನ್ನು ವಿಶಿಷ್ಟತೆಯಿಂದ ಪರಿಚಯಿಸಿದ್ದಾರೆ. ಕಾದಂಬರಿಯಲ್ಲಿ ಲೇಖಕರೂ ಸರಗಂ ದೇಸಾಯಿಯ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಶೀನಿಂಗವ್ವನಿಗೆ ತಿಳಿಯದ ಇನ್ನೊಂದು ಮುಖದ ಅನಾವರಣಗೊಂಡಿದೆ.

"ಚಿಕ್ಕವನಿದ್ದಾಗ ನಾನು ಅವನನ್ನು ಕಂಡಿದ್ದೇ. ಒಂದೇ ಮಾತಿನಲ್ಲಿ ವರ್ಣಿಸಬೇಕೆಂದರೆ ಒಟ್ಟಾರೆ ವಾತಾವರಣದಲ್ಲಿ ಅವನೊಬ್ಬ ಮಿಸ್‌ಫಿಟ್ ಆಗಿದ್ದ ಸಜ್ಜನನೇ ಆದರೆ ಆತನಲ್ಲಿ ಹೇಳಿಕೊಳ್ಳವಂಥ ದೋಷಗಳೂ ಇದ್ದವೂ. ಶೀನಿಂಗವ್ವ ಹೇಳುವ ಹಾಗೆ ಅವನು ಜನರನ್ನು ಅತಿಯಾಗಿ ನಂಬುತ್ತಿದ್ದ ಮಿತಿಮೀರಿ ಧಾರಾಳಿಯಾಗಿದ್ದ ಇವು ತನ್ನ ಪ್ರಕಾರ ದೋಷಗಳೇ ಅಲ್ಲ ಆತನ ದೇಹ ಸಣಕಲಾಗಿದ್ದರೂ. ಗಂಭೀರವಾಗಿರುತ್ತಿದ್ದ. ಆದರೆ ಬಯಲಾಟದ ರಿಹರ್ಸಲ್ ಮಾಡುವಾಗ ಮಾತ್ರ ಭಾರೀ ಹಾಸ್ಯಾಸ್ಪದವಾಗಿ ಕಾಣುತ್ತಿದ್ದ. ಆಗ ಮಾತ್ರ ಯಾವುದು ಲಘು ಯಾವುದು ಗಂಭೀರ ಎನ್ನುವುದನ್ನು ನಿರ್ಧರಿಸಲು ಅಸಮರ್ಥನಾಗುತ್ತಿದ್ದ".

ಕಾಂಬಾರರ ಮಾತಿನಲ್ಲಿ ಮಿಸ್‌ಫಿಟ್ ರಿಹರ್ಸಲ್ ಎಂಬ ಪದಗಳು ಗ್ರಾಮ್ಯ ಭಾಷೆಗೆ ಶಿಷ್ಟ ಭಾಷೆಯ ಪ್ರಭಾವವನ್ನು ಕಾಣಬಹುದು.

ಕಂಬಾರರು ನಡೆದು ಬಂದ ದಾರಿ ಲಾವಣಿ, ಬಯಲಾಟ, ತಾಳ, ಮದ್ದಳೆ, ಯಕ್ಷಗಾನ, ಕಥಾ ಪ್ರಸಂಗಗಳಿಂದ ಕೂಡಿದ್ದಾಗಿದೆ. ನಮ್ಮ ನವೋದಯ ಶ್ರೇಷ್ಠರಾದ ಬೇಂದ್ರೆ, ಮಧುರ ಚೆನ್ನರ ಜಾನಪದ ಕೇವಲ ಹಾಡಿಗಷ್ಟೇ ಸೀಮಿತವಾದುದು. ಆದರೆ ಕಂಬಾರರು ಪಡೆದ ಜಾನಪದ ಬೇಂದ್ರೆ ಜಾನಪದಕ್ಕಿಂತಲೂ ಹೆಚ್ಚು ಸಂಕೀರ್ಣವಾದುದು. ಅಷ್ಟೇ ದಟ್ಟ ಹೆಸರುಳ್ಳದ್ದು ಈಗಾಗಲೇ ಬೇಂದ್ರೆ ಪ್ರಕೃತಿ ಭಾವಗೀತೆ ಪ್ರಧಾನವಾದುದ್ದಾರೆ, ಕಂಬಾರರು ಲಾವಣಿ ಪ್ರಧಾನ ವಾದುದ್ದಾಗಿದೆ. ಅದಕ್ಕೆ ಅವರು ಕಾದಂಬರಿಗಳಲ್ಲಿ ಹೆಚ್ಚು ಜಾನಪದ ಶೈಲಿಯಲ್ಲಿ ತಂದಿದ್ದಾರೆ.

ಕಂಬಾರರೇ ಹೇಳುವಂತೆ 'ನನಗೆ ಜನಪದ ಕಾವೇ" ಒಂದು ಭಾಷೆ ಎಂದು ಹೇಳುತ್ತಾರೆ. ಅಭಿಜಾತ ಸಾಹಿತ್ಯಕ್ಕೆ ತೀರ ಭಿನ್ನವಾದ ಸಾಹಿತ್ಯವನ್ನು ನಿರ್ಮಿಸುತ್ತಾರೆ. ಗ್ರಾಮ ಜೀವನದ ಜಾನಪದದಲ್ಲಿ ಬೆರೆತಿರುವ ಜೀವನ ಮೌಲ್ಯ ನಂಬಿಕೆ ನಡಾವಳಿಕೆಗಳನ್ನು ಹೆಚ್ಚು ಆಸ್ಥೆಯಿಂದ ಆಪ್ತತೆಯಿಂದ ಸ್ವ-ವಿಮರ್ಶನ ಪ್ರಜ್ಞೆಯಿಂದ ಇದಿರುಗೊಂಡವರು. ತಮ್ಮ ಬರಹಗಳಲ್ಲಿ ಬಳಸಿ ಬೆಳೆಸುವ ಭಾಷಿಕ ವಿನ್ಯಾಸಗಳು ಪ್ರೇರಕವಾದಂಥವು.

ಅನುಭವ ಹಾಗೂ ಅಭಿವ್ಯಕ್ತಿಗಳನ್ನು ಅವರು ಸಮುದಾಯದ ಸಂಕಥನವನ್ನಾಗಿ ಕಟ್ಟಿಕೊಳ್ಳುತ್ತಾರೆ. ಹೀಗೆ ಒಂದು ಪಾತ್ರ ಅಥವಾ ಸಂಗತಿಯ ಸಾಂಸ್ಕೃತಿಕ ನೆಲೆಗಳನ್ನು ಕಟ್ಟಿಕೊಳ್ಳುವುದೆಂದರೆ ಬಹುಮುಖಿಯಾದಂತಹ ಸಾಂಸ್ಕೃತಿಕ ಅನುಸಂಧಾನ ಮಾಡುವುದು. ಕಂಬಾರರು ಯಾವೊಂದು ಕೃತಿಯಲ್ಲಿ ನಿರ್ದಿಷ್ಟ ಪಠ್ಯ ಎನ್ನುವುದು ಇರುವುದಿಲ್ಲ. ಕಥನ ಒಂದೇ ಎನಿಸಿದರೂ ಅದರ ಕೇಂದ್ರ ಬದಲಾಗುತ್ತಲೇ ಇರುತ್ತದೆ. ಬಹುಮುಖ್ಯವಾಗಿ ಅವರು ಕನ್ನಡ ನೆಲದ ಹಲವು ಸಮುದಾಯಗಳ ಹಾಗೂ ವ್ಯಕ್ತಿಗಳ ಭಾಷೆಯನ್ನು ಏಕಕಾಲಕ್ಕೆ ತರುತ್ತಾರೆ. ತಾಯಿ ಮಕ್ಕಳ ಭಾಷೆಯಿರುವಂತೆ ಚಿಮಣಾ, ಸಿಂಗಾರೆವ್ವ, ದೇಸಾಯಿ, ಗೌಡ, ಶಿವನಿಂಗಿ, ಲಸಮ, ಭಾಗಿರ್ತಿ, ತುಂಗವ್ವ, ಮಾದೇವಿ ಈ ರೀತಿಯ ಪಾತ್ರ ಚಿತ್ರಣಗಳನ್ನು ತರುತ್ತಾರೆ. ಈ ಪಾತ್ರಗಳ ಮುಖಾಂತರ ಜಾನಪದದ ಶೈಲಿಯನ್ನು ಗ್ರಾಮ್ಯ ವಾಸ್ತವದ ಬದುಕನ್ನು ಕಟ್ಟಿಕೊಡುವಲ್ಲಿ ಕಂಬಾರರು ಯಶಸ್ವಿಯಾಗಿದ್ದಾರೆ.

ಕಂಬಾರರ ಕಾದಂಬರಿಗಳಲ್ಲಿ ಬರುವ ಹಳ್ಳಿಯ ಚಿತ್ರಣ. ಅಲ್ಲಿನ ಭಾಷೆ ತನ್ನದೆಯಾದ ಮಹತ್ವವನ್ನು ಕಟ್ಟಿಕೊಂಡು ತನ್ನ ಸುತ್ತಲೂ ಒಂದು ಪರಿಧಿಯನ್ನು ನಿರ್ಮಿಸುತ್ತದೆ. ಆ ಒಂದು ಶೈಲಿಯು ಸಹ ಕೃತಿಗಳಲ್ಲಿ ಮುಖ್ಯವಾದದ್ದು.

ಲೇಖಿಕರು ತಾವು ಬಳಸುವ ಭಾಷೆಯ ಜೊತೆಗೆ ದೇಶೀಯ ಚಿಂತನೆಯನ್ನು ಸಹ ಮಾಡುತ್ತಾರೆ. ಆಧುನಿಕ ಸಂದರ್ಭದಲ್ಲಿ ಭಾಷೆ–ಸಾಹಿತ್ಯಗಳ ಮೂಲಕ ನಮ್ಮ ಚಿಂತನೆಗಳು ಪಾಶ್ಚಾತ್ಯೀಕರಣಗೊಳ್ಳುತ್ತಿರುವ ಅಪಾಯಗಳ ಕುರಿತು ಗಮನ ಸೆಳೆಯುತ್ತವೆ. ಅದಕ್ಕೆ ಅವರು ಯಾವುದೇ ಸಂದರ್ಭದಲ್ಲಿಯೂ ಈ ಒಂದು ದೇಶೀಯತೆ ಎಂಬ ಎಲ್ಲೆಯನ್ನು ಮೀರಿ ಹೋಗಿಲ್ಲ. ಶಿವನ ಡಂಗುರದಲ್ಲಿ ದೇಶಿಯತೆಯ ಹಿನ್ನೆಲೆಯಲ್ಲಿ ಅವರು ತಂದಿರುವ ಕೆಲವು ಸನ್ನಿವೇಶಗಳು ಸಹ ಅದ್ಭುತವಾಗಿದೆ ಅದೇ ರೀತಿ ಸಿಂಗಾರೆವ್ವ ಮತ್ತು ಅರಮನೆಯಲ್ಲಿ ದ್ರಾವಿಡ ಸಂಸ್ಕೃತಿಯಲ್ಲಿ ಮಾತೃಪ್ರಧಾನವಾದ ಸಂಸ್ಕೃತಿಯನ್ನು ತರುತ್ತಾರೆ. ಅದು ಸಿಂಗಾರವ್ವನ ಪಾತ್ರಗಳ ಮುಖಾಂತರ ಅದೇ ರೀತಿ ಭೂಮಿಯ ಬಗ್ಗೆ ಪರಿಸರದ ಬಗ್ಗೆ ಶಿವನ ಡಂಗುರದಲ್ಲಿ ಬರುವ ಪಾತ್ರಗಳು ಮುಖ್ಯವಾಗುತ್ತವೆ. ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯಲ್ಲಿ ಹಿರಿಯ ದೊರೆಸ್ವಾಮಿ ಹಾಡಿಕೊಳ್ಳುವ ಹಾಡು ಗಮನಾರ್ಹ.

ಚಿನ್ನದ ನಡಪಟ್ಟಿ ರನ್ನದ ನಡಪಟ್ಟಿ
ಚಿನ್ನ ರನ್ನದ ನಡಪಟ್ಟಿ ಕೊಡತೀನಿ
ಮೊಮ್ಮಗನ ಹಡದೆ ಸೊಸಿ ಮುದ್ದಿಗೆ ॥ ಸೋ ॥[6]

ದೇಶಗತಿಯ ವಾರಸುದಾರಿಕೆಯರಿಗಾಗಿ ನಿಷ್ಕ್ರೀಯ ಸ್ಥಿತಿಯಲ್ಲಿ ಕ್ರಿಯಾತ್ಮಕವಾಗಿ ವ್ಯವಹರಿಸುವ ಮುದುಕಿ ಕುತೂಹಲಭರಿತಳಾಗಿ ಕಾಣುತ್ತಾಳೆ. ಅದಕ್ಕಾಗಿಯೇ ಕಣ್ಣಲ್ಲಿ ಜೀವ ಹಿಡಿದು ಕೊಂಡಿರುವ ಮುದುಕಿ ಸಿಂಗಾರೆವ್ವ ಬಸುರಾದಳೆ ಎಂದು ಗರ್ವದಿಂದಲೇ ಸಿಂಗಾರೆವ್ವನನ್ನು ಗುರುತಿಸುತ್ತಾಳೆ. ಕಂಬಾರರ ಕುಲುಮೆಯಲ್ಲಿ ಯಾವ ಪಾತ್ರವು, ಮೇಲು–ಕೀಳಿನ ಝಳಕ್ಕೆ ತೂಗುವುದಿಲ್ಲ. ನೀಚ ಮತ್ತು ಕುರುಪಿ ಪಾತ್ರಗಳು ಸಹ ತನ್ನದೆಯಾದ ವ್ಯಕ್ತಿತ್ವನ್ನು ಹೊಂದಿರುತ್ತಾರೆ.

ಕಂಬಾರರು ತಾವು ರಚಿಸಿರುವಂತಹ ಕೃತಿಗಳಲ್ಲಿ ಸಾಮಾಜಿಕ ಹಿನ್ನೆಲೆಯಲ್ಲಿ ಕೆಲವು ಪಾತ್ರ ಚಿತ್ರಣಗಳನ್ನು ಜಾತಿಯತೆ, ವರ್ಗ, ಶೋಷಣೆಯಲ್ಲಿ ತಂದರು. ಆ ಪಾತ್ರಗಳು ಮುಂದೆ ಒಳ್ಳೆಯ ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತವೆ. ಅದೇ ರೀತಿ ಶಾರವ್ವ ಕೆಳವರ್ಗದವಳಾದಳು, ಚೆಂಬಸ ಶೋಷಿತನಾದರು ಶಿವಾಪುರದ ಪುನರ್ ರಚನೆಯಲ್ಲಿ ಮಾದೇವಿಯ ಮೂಲಕ ಒಂದು

6. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ – ಪುಟ 54

ಉತ್ತಮವಾದ ಪಾತ್ರ ರಚನೆಯಲ್ಲಿ ನಿಲ್ಲುತ್ತಾರೆ. ಶಿವನ ಡಂಗುರದಲ್ಲಿ ಮರ್ದಾನ ಪಾತ್ರ ಮೊದಲಿನಿಂದಲೂ ಶೋಷಣೆಯಲ್ಲಿಯೇ ತುಂಬಿದರು ಕೊನೆಯಲ್ಲಿ ಶಿಂಗಾರೆವ್ವನಿಗಾಗಿಯೇ, ಪ್ರಾಣ ತ್ಯಾಗ ಮಾಡುವುದು ಅದನ್ನು ಅವನ ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

ಕಂಬಾರರು ಸಮಾಜದ ದೃಷ್ಟಿಯಿಂದ ವ್ಯಕ್ತಿಗತ ಪರಂಪರೆಯ ದೃಷ್ಟಿಯಿಂದ ಪಾತ್ರಗಳನ್ನು ಸೃಷ್ಟಿಸುವಂತಹ ಶೈಲಿ ಉತ್ತಮವಾಗಿದೆ. ಈ ಪಾತ್ರಗಳನ್ನು ತರುವಲ್ಲಿ ಅವರಿಗೆ ಸಹಾಯ ಮಾಡುವ ಶೈಲಿ ಎಂದರೆ ಅದೇ ಜಾನಪದ ಶೈಲಿ.

ಈ ಒಂದು ಶೈಲಿಯಲ್ಲಿ ಅವರು ಉತ್ತುಂಗದ ಸ್ಥಿತಿಯನ್ನು ತಲುಪುತ್ತಾರೆಂಬುದನ್ನು ಕಾಣಬಹುದು. ಕೃತಿಗಳಲ್ಲಿಯು ಈ ಶೈಲಿ ಪರಿಣಾಮಕಾರಿಯಾದಂತಹ ಬದಲಾವಣೆಯನ್ನು ತರಲು ಯಶಸ್ವಿಯಾಗಬಲ್ಲದ್ದಾಗಿದೆ.

* * * * *

ಅಧ್ಯಾಯ–7

ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಧೋರಣೆ

ಕಾದಂಬರಿಕಾರರು ಎರಡು ಕಾದಂಬರಿಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ರಚನೆ ಮಾಡಿದ್ದಾರೆ. ಜಾತಿ ವ್ಯವಸ್ಥೆ, ಘರ್ಷಣೆಗಳು ಮೂಡನಂಬಿಕೆ, ಸಂಪ್ರದಾಯ, ಆಧುನಿಕರಣ, ರಾಜಕೀಯತೆ, ಶೋಷಣೆ ಜಾನಪದದ ಸೊಗಡನ್ನು ಕುರಿತು ಚರ್ಚೆ ಮಾಡಲಾಗುತ್ತದೆ.

ಕಾದಂಬರಿಗಳಲ್ಲಿ ಮುಖ್ಯವಾಗಿ ಕಾಡುವಂತಹ ಸಮಸ್ಯೆಗಳಲ್ಲಿ ಜಾತಿ ವ್ಯವಸ್ಥೆಯು ಒಂದು ಅನಾದಿ ಕಾಲದಿಂದಲು ಈ ರೀತಿಯದಾದ ಸಮಸ್ಯೆ ಇದ್ದು, ಅದನ್ನು ಯಾವ ರೀತಿ ಮುಂದುವರೆಸಿಕೊಂಡು ಬರುತ್ತಿದ್ದೇವೆ ಎಂಬುದಕ್ಕೆ ಈ ವ್ಯವಸ್ಥೆ ಇಂದಿಗೂ ಬೇರೂರಿ ನಿಂತಿರುವುದೇ ಸಾಕ್ಷಿ. ಕಾದಂಬರಿಗಳಲ್ಲಿ ಈ ರೀತಿಯ ಸಮಸ್ಯೆ ಎದ್ದು ಕಾಣುತ್ತದೆ. ಶಿವನ ಡಂಗುರದಲ್ಲಿ ಬರುವ, ತುಂಗವ್ವ, ಲಸಮ, ಶಾರವ್ವ ಬಲವಂತ, ನೀಲಗಂಗು, ದಲಿತ ರೈತರು, ಮತ್ತೆ ಕುಲವಂತನಾಗಿ ಹುಟ್ಟಿದ ಚೆಂಬಸವನು ಸಹ ಮೊದ ಮೊದಲು ಕೀಳೆಂದು ಕಾಣುವಂತದ್ದು ಚೆಂಬಸವನು ಶಾಲೆಯಲ್ಲಿ ಕಲಿಯುವಾಗ ಬೇರೆ ಹುಡುಗರು ಅವನಿಂದ ಮುಟ್ಟಿಸಿಕೊಳ್ಳುತ್ತಿರಲಿಲ್ಲ ಅವನನ್ನು ಪಕ್ಕದಲ್ಲಿ ಕೂರಿಸಿಕೊಳ್ಳದೆ ಇರುವುದು ಆಗಿದೆ. ಈ ಒಂದು ಸಮಸ್ಯೆಯನ್ನು ನಿಲ್ಲಿಸಲು ಪ್ರಯತ್ನಿಸಿದರು ಅದು ಎದ್ದು ಕಾಣುತ್ತದೆ. ಅದಕ್ಕೆ ತಕ್ಕ ಉತ್ತರ ಎಂಬಂತೆ ದೇವದಾಸಿಯಾದ ಶಾರವ್ವನನ್ನು ಪ್ರೀತಿಸಿ ಅವಳನ್ನು ಮದುವೆಯಾಗುತ್ತಾನೆ. ಪ್ರಾರಂಭದಲ್ಲಿ ಇವನ ಪ್ರೀತಿ, ಮದುವೆಯನ್ನು ಒಪ್ಪಿಕೊಳ್ಳದ ಕೆಲವು ಪಾತ್ರಗಳು ಬಂದರು ಅದೇ ಶಿವಾಪುರದ ಜನರು ಒಂದು ರೀತಿಯಲ್ಲಿ ಒಪ್ಪಿಕೊಳ್ಳುತ್ತಾರೆ. ಕಾರಣ ಅವನು ವಿದ್ಯೆ ಕಲಿತವನು ಜೊತೆಗೆ ಕುಲವಂತನಾಗಿ ಅದರಲ್ಲೂ ಗೌಡರ ಕುಲದಲ್ಲಿ ಹುಟ್ಟಿದವನಿಗೆ ದೇವದಾಸಿಯ ಮೇಲೆ ಅಧಿಕಾರವಿರುವುದು ಸಹಜವೆಂದು ತಿಳಿಯುತ್ತಾರೆ.

ಬಲವಂತನ ವಿಷಯಕ್ಕೆ ಬಂದರೆ ಇವನೊಬ್ಬ ಕೆಳವರ್ಗದ ರೈತ ಪ್ರಾರಂಭದಿಂದಲೂ ಗೌಡನ ಮನೆಯಲ್ಲೇ ಜೀತ ಮಾಡಿಕೊಂಡು ಬಂದರು ಮಲ್ಲೀಮಡುವಿನ ಹತ್ತಿರ ಇರುವ ಜಾಗದ ಬಗ್ಗೆ ತಕರಾರು ಬಂದು ಅದನ್ನು ಕುಂಟಿರಪ ಮತ್ತು ಗೌಡ ವಶಪಡಿಸಿಕೊಳ್ಳಲು ಅವಣಿಸುತ್ತಾರೆ. ಇದಕ್ಕೆ ಬಲವಂತನು ಒಪ್ಪದಿದ್ದಾಗ ಬ್ಯಾಂಕಿನಿಂದ ತೆಗೆದುಕೊಂಡ ಸಾಲಕ್ಕೆ ವಜಾ ಎಂದು ಅವನ ಜಮೀನನ್ನು ಆಕ್ರಮಣ ಮಾಡಿಕೊಳ್ಳುತ್ತಾರೆ. ಇನ್ನುಳಿದ ಮೂರು ಜನ ದಲಿತ ರೈತರನ್ನು ಎದುರಿಸಿ

ತನ್ನ ಅಂಕೆಯಲ್ಲಿಟ್ಟುಕೊಂಡಿರುತ್ತಾನೆ ಗೌಡ. ತನಗಾಗದವರನ್ನು ಕೊಲೆ ಮಾಡಿಸಿ ಆ ಕೊಲೆಯ ಆರೋಪವನ್ನು ಈ ರೈತರ ಮೇಲೆ ಹಾಕುತ್ತಾನೆ.

ಮರ್‍ಯಾನು ಸಹ ಕೆಳವರ್ಗಕ್ಕೆ ಸೇರಿದವನಾದರು ಅವನ ಜಮೀನನ್ನು ಪಂಡರೀಗೌಡ ಆಕ್ರಮಣ ಮಾಡಿ ಅವನನ್ನು ಜೀತದಾಳನ್ನಾಗಿ ಮಾಡಿಕೊಂಡು ಅವನ ತಾಯಿಯ ಜೊತೆ ಸಂಬಂಧ ಹೊಂದಿರುತ್ತಾನೆ. ಮರ್‍ಯಾ ತನ್ನ ಸಮವಯಸ್ಕನೆಂಬಂತೆ ಅವನಿಗೆ ಶಿಕ್ಷೆ ಕೊಡುವುದು ಕೆಲಸ ಮಾಡಿಸುವುದು ನಿರಂತರ ಆ ಚಿಕ್ಕ ಹುಡುಗನ ಮೇಲೆ ಗೌಡನ ಆಕ್ರೋಶ ಹೇಳತೀರದು. ಅದೇ ರೀತಿ ಸಿಂಗಾರೆವ್ವೆಯನ್ನು ಬಯಸಿದಾಗ ಸಿಂಗಾರೆವ್ವ ಹೇಳುವ ಮಾತು "ನನ್ನ ಮನಿ ಎಂಜಲಾ ಉಂಡ ಹೊಲೆಯಾ. ನನ್ನ ಜೋಡಿ ಮಲಗಂತ ಹೇಳೋ ಹಾಂಗಾದೇನೋ?" ಎಂದಳು. ಇಲ್ಲಿ ಕೆಳವರ್ಗದವರನ್ನು, ಜೀತದಾಳುಗಳನ್ನು ಮಾತನಾಡಿಸುವ ರೀತಿ ಬೇರೆಯದ್ದೆ ಮರ್‍ಯಾ ತನ್ನ ಒಲವನ್ನು ಈ ರೀತಿ ಹೇಳಿದ್ದಕ್ಕೆ ಸಿಂಗಾರೆವ್ವ ಬೈಯ್ಯುತ್ತಾಳೆ. ಆದೇ ಶಿವನ ಡಂಗುರದಲ್ಲಿ ಬರಮೇಗೌಡ ದೇವದಾಸಿಯಾದ ತುಂಗವ್ವನನ್ನು ತನ್ನ ಪ್ರೇಮದ ನಿವೇದನೆ ಹೇಳಿದ್ದಕ್ಕೆ ಅವಳು ಒಪ್ಪಿ ಗೌಡನ ಜೊತೆ ಬರುತ್ತಾಳೆ. ನಂತರ ಚೆಂಬಸನು ಶಾರವ್ವನನ್ನು ಪ್ರೀತಿಸಿ ಅವಳನ್ನು ಮದುವೆಯಾದಾಗ ಆವಳು ಯಾವ ಆಪೇಕ್ಷಣೆಯನ್ನು ಮಾಡುವುದಿಲ್ಲ.

ಈ ರೀತಿಯ ಕೆಲವು ಉದಾಹರಣೆಗಳನ್ನು ನೋಡಿದಾಗ ಮೇಲ್ವರ್ಗದ ಗಂಡು ಕೆಳವರ್ಗದ ಹೆಣ್ಣುಗಳನ್ನು ಯಾವ ರೀತಿಯಾದರೂ ನಡೆಸಿಕೊಳ್ಳಬಹುದು. ಆದರೆ, ಕೆಳವರ್ಗದ ಗಂಡು ಮೇಲ್ವರ್ಗದ ಹೆಣ್ಣನ್ನು ಇಷ್ಟಪಟ್ಟರೆ ಅವನಿಗೆ ಜಾತಿನಿಂದನೆ, ಅಪವಾದಗಳ ನಿಂದನೆಯನ್ನು ಕಾಣಬಹುದು ಎಂಬುದಕ್ಕೆ ಕಾದಂಬರಿಯ ಕೆಲವು ಪಾತ್ರ ಚಿತ್ರಣಗಳು ಸಾಕ್ಷಿ.

ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಜೀತದಾಳಾದ ಶೀನಿಂಗವ್ವನು ಅನೇಕ ಬಾರಿ ನಿಂಧನೆಗೆ ಶಿಕ್ಷೆಗೆ ಒಳಗಾಗುತ್ತಾಳೆ. ಚಿಕ್ಕವಯಸ್ಸಿನಿಂದಲು ಗೌಡನ ಜೀತದಾಳಾಗಿ ದುಡಿದ ನಿಷ್ಠಾವಂತ ಶೀನಿಂಗವ್ವ, ಅರಮನೆಯಲ್ಲಿ ಒಂದು ದಿನ ಸಿಂಗಾರೆವ್ವನ ಬಳೆಗಳು ಕಳ್ಳತನವಾದಾಗ ಆ ಅಪವಾದ ಶೀನಿಂಗವ್ವನ ಮೇಲೆ ಒಂದು ಕೆಟ್ಟ ಮಾತುಗಳಿಂದ ಬೈಯ್ದು ಕಾಲಿನಿಂದ ಹೊದೆಯುತ್ತಾನೆ ಗೌಡ. ಇದನ್ನು ತಡೆಯಲು ಸ್ವತಃ ಸಿಂಗಾರೆವ್ವನು ಸಹ ಬರುವುದಿಲ್ಲ. ಶಿವನ ಡಂಗುರದಲ್ಲಿ ಶಾರವ್ವ ನೀಲಗಂಗುವಿನ ಮೇಲೆ ಅತ್ಯಾಚಾರವಾಗುತ್ತದೆ. ಇದನ್ನು ಮೇಲ್ವರ್ಗದ ಜನರು ಅಧಿಕಾರಿಗಳೇ ಮಾಡುತ್ತಾರೆ. ಈ ರೀತಿಯದಾದ ಘಟನೆಗಳು ಮೇಲ್ವರ್ಗದವರಲ್ಲಿ ನಡೆಯುವುದಿಲ್ಲ. ಕೇವಲ

ಕೆಳವರ್ಗದವರು ಎಂಬ ಮಾತ್ರಕ್ಕೆ ಅವರಿಗೆ ಶಿಕ್ಷೆ ತಪ್ಪಿದ್ದಲ್ಲ. ಈ ರೀತಿಯ ಅನ್ಯಾಯಕ್ಕೆ ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ.

ಉಳುವವನೆ ಭೂಮಿಯ ಒಡೆಯನೆಂಬ ಕಾಯ್ದೆ ಜಾರಿಗೆ ಬಂದರು. ಬರಮೇಗೌಡ ಮಾತ್ರ ಈ ನಿಯಮವನ್ನು ಪಾಲಿಸುವುದಿಲ್ಲ. ಹೆಸರಿಗೆ ಕೊಟ್ಟಂತೆ ಮಾಡಿ ಉಳಿದ ರೈತರೆಲ್ಲರನ್ನು ತನ್ನ ಕೂಲಿಯಾಳುಗಳೆಂದು ಮಾಡಿಕೊಂಡಿದ್ದ. ಆದರೆ ವಿದ್ಯಾವಂತನಾದ ಚೆಂಬಸವನು ತನ್ನ ಬಳಿಯಿದ್ದ ಎಲ್ಲಾ ರೈತರಿಗೂ ಅವರು ಮಾಡುತ್ತಿದ್ದ ಜಮೀನೆಲ್ಲವನ್ನು ಬರೆದುಕೊಡುವುದರ ಮೂಲಕ ಬರಮೇಗೌಡನ ಕೊಪಕ್ಕೆ ತುತ್ತಾಗುತ್ತಾನೆ.

ಸಮಾಜದಲ್ಲಿ ಕಾಡುತ್ತಿರುವ ಮತ್ತೊಂದು ವ್ಯವಸ್ಥೆಯೇ ಶೋಷಣೆ ಈ ಶೋಷಣೆಗೆ ಬಲಿಯಾಗುವವರು ಅಮಾಯಕ ಹಳ್ಳಿಯ ಮುಗ್ಧ ಜನಗಳು. ಕಾದಂಬರಿಗಳಲ್ಲಿಯೂ ಸಹ ಈ ಶೋಷಣೆ ಎಂಬುದು ನಡೆಯುತ್ತದೆ. ಸ್ತ್ರೀಯ ಮೇಲಿನ ಶೋಷಣೆ ಜೀತದಾಳುಗಳ ಶೋಷಣೆ, ವರ್ಗಗಳ ಮೇಲಿನ ಶೋಷಣೆ, ಮೊದಲು ಸ್ತ್ರೀ ಶೋಷಣೆಯಲ್ಲಿ ಎರಡು ಕೃತಿಗಳಲ್ಲಿ ಚರ್ಚಿಸಲಾಗಿದೆ. ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ ಕೃತಿಗಳಲ್ಲಿ ಎದ್ದು ಕಾಣುವಂತಹ ಸಮಸ್ಯೆಯಾಗಿದೆ.

ಶಿವನ ಡಂಗುರದಲ್ಲಿ ತುಂಗವ್ವ ಬರಮೇಗೌಡನಿಂದ ಶೋಷಣೆಗೆ ಒಳಗಾಗುತ್ತಾಳೆ. ಜೊತೆಗೆ ಸಮಾಜದಿಂದಲೇ ಶೋಷಿತಳಾಗುತ್ತಾಳೆ. ಸಮಾಜದಲ್ಲಿರುವ ಮತ್ತೊಂದು ಸಮಸ್ಯೆಗೆ ದೇವದಾಸಿ ಪದ್ಧತಿ. ಈ ಪದ್ಧತಿಯಲ್ಲಿ ಬಲಿಯಾಗುವವರು ಕೆಳವರ್ಗದ ಹೆಣ್ಣುಮಕ್ಕಳು ಮಾತ್ರ ಚಿಕ್ಕವಯಸ್ಸಿನಲ್ಲಿಯೇ ಈ ಪಟ್ಟವನ್ನು ಕಲ್ಪಿಸಿಕೊಂಡು ದೇವರ ಹೆಸರಿನಲ್ಲಿ ಊರಿನ ಗೌಡರು ಈ ದೇವದಾಸಿಯನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಒಟ್ಟಾರೆ ದೇವರ ಹೆಸರಿನಲ್ಲಿ ಮಾಡುವ ಹಾದರ ಎಂದೇ ಹೇಳಬೇಕು ಚಿಕ್ಕ ವಯಸ್ಸಿನಲ್ಲಿ ಆರೋಗ್ಯದ ಸ್ಥಿತಿ ಹದಗೆಟ್ಟಾಗ ಅದನ್ನು ಗುಣಪಡಿಸುವಂತೆ ದೇವರಿಗೆ ಮೊರೆಹೋಗಿ ಅದಕ್ಕೆ ಪ್ರತಿಯಾಗಿ ತಮ್ಮ ಹೆಣ್ಣು ಮಕ್ಕಳನ್ನು ದೇವದಾಸಿಯಾಗಿ ಬಿಡುತ್ತಾರೆ. ಈ ರೀತಿ ದೇವರ ಹೆಸರಿನಲ್ಲಿ ಈ ದೇವದಾಸಿ ಪದ್ಧತಿಯನ್ನು ಆಚರಣೆ ಮಾಡಿಕೊಂಡು ಬರುತ್ತಿರುವುದು ಇಂದಿಗೂ ನಡೆದುಕೊಂಡು ಬರುತ್ತಿದೆ. ಎಂಬುದಕ್ಕೆ ತುಂಗವ್ವ ಮತ್ತು ಶಾರವ್ವನಂತಹ ಪಾತ್ರಗಳು ಇಂದಿಗೂ ಇವೆ ಎಂಬುದನ್ನು ಸಾಕ್ಷ್ಯವಾಗಿ ತಿಳಿಸುತ್ತಾರೆ ಲೇಖಕರು. ಇದಕ್ಕೆ ವಿರುದ್ಧವಾಗಿ ಎಂಬಂತೆ ಚೆಂಬಸವನ ಪಾತ್ರದ ಮೂಲಕ ಆ ಪದ್ಧತಿಯನ್ನು ತಿರಸ್ಕರಿಸುವ ಪ್ರಯತ್ನ ಮಾಡಿದ್ದಾರೆ.

"ಮಾತಿಗೊಮ್ಮಿ ದೇವೀ ಹೆಸರ ತಗೊಂಡು ಹೆದರಸ್ತೀಯೇನು? 'ಮಗಳ ಮದಿವೀ ಮಾಡಬ್ಯಾಡ, ನನ್ನ ಹೆಸರಿನಾಗ ಸೂಳೀ ಬಿಡು' ಅಂತಾಳೇನು ನಿನ್ನ ದೇವಿ? ಯಾವುದಾದರೂ ದೇವೀ ಹಾಂಗ ಹೇಳತಾಳೇನವಾ ತಂಗಿ? ಮೊದಲು ನಿನ್ನ ವಿಚಾರ ನೀನ ಮಾಡಿಕೊ. ಹೇಳಿಕೇಳಿ ಆಯೀನ ಮುಂದ ನಿಂತು ವರ ನೋಡಿ ಮದವೀ ಮಾಡೋದು ಬಿಟ್ಟು ಸೊಸೀನ್ನ ದೇವದಾಸಿನ್ನ ಮಾಡಿ ಸೂಳೇಗೇರಿಗಿ ಹೊಗಿಸ್ತೀನಂತೀಯಲ್ಲ ನೀ ಒಬ್ಬ ತಾಯೀನ? ಆಯೀನ? ರಾಕ್ಷಸಿ! ಈಗ ತಿದ್ದಿಕೊ. ಮುತ್ತ ಕಟ್ಟಿ ಮಾಡಿದ ಯಪ್ಪನ್ನ ನೀ ಸರಿಮಾಡಿಕೊಳ್ಳತೀಯೊ? ಇಲ್ಲೆ ನೀನ ಹೇಳ. ಏನಂತಿ ತಂಗಿ?"[1]

ಈ ರೀತಿಯ ಪದ್ಧತಿಗೆ ಬಲಿಯಾದವರು ತಮ್ಮ ಯೌವ್ವನ ಇರುವವರೆಗೆ ಈ ವೃತ್ತಿಯನ್ನು ಮುಂದುವರೆಸಿಕೊಂಡು ಬಂದು ವಯಸ್ಸಾದ ಮೇಲೆ ಜೋಗತಿಯಾಗಿ ದೇವರ ಹಾಡುಗಳನ್ನು ಹಾಡಿಕೊಂಡು ಭಿಕ್ಷೆ ಮಾಡಿ ಜೀವನ ಸಾಗಿಸುತ್ತಾರೆ. ಈ ರೀತಿಯ ಅಸಹಾಯಕ ಘಟನೆಗಳು ಇಂದಿಗೂ ಕೆಲವು ಕಡೆ ಆಚರಣೆಯಲ್ಲಿವೆ. ಈ ಒಂದು ಆಚರಣೆಗೆ ಬಲಿಯಾಗುವವರು ತುಂಗವ್ವ ನಂತರ ಶಾರವ್ವನು ಈ ಆಚರಣೆಗೆ ಬರುವ ಮೊದಲೇ ಚೆಂಬಸನ ಒಲವಿನಿಂದ ಪಾರುಗುತ್ತಾಳೆ. ಕೊನೆಗೆ ಚುನಾವಣೆಯ ಸಂದರ್ಭದಲ್ಲಿ ಸಭೆಯನ್ನು ನಿಯಂತ್ರಿಸಲು ಬಂದ ಮೂರು ಜನ ಪೋಲಿಸಿನವರು ಶಾರವ್ವನ ಮೇಲೆ ಆಕ್ರಮಣ ಮಾಡುತ್ತಾರೆ. ಒಂದು ಆಡಳಿತ ವರ್ಗದಿಂದ ಸ್ತ್ರೀ ಮೇಲಿನ ಶೋಷಣೆ ಇಂತಹ ಉದಾಹರಣೆಗಳು ಪ್ರಸ್ತುತ ಸಮಾಜದಲ್ಲಿ ಇಂದಿಗೂ ನಡೆಯುತ್ತಿವೆ.

ರೌಡಿ ರಮೇಶಿ ಮತ್ತು ಕೇಡಿ ಗಣಪರಿಂದ ನೀಲಗಂಗುವಿನ ಮೇಲೆ ಆಕ್ರಮಣ. ನೀಲಗಂಗುವಿನ ಸಾವು. ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಸಿಂಗಾರೆವ್ವನು ಸಹ ತನ್ನ ತಂದೆಯಾದ ಪಂಡರೀಗೌಡನಿಂದ ಪತಿಯಾದ ಸರಗಂ ದೇಸಾಯಿಯಿಂದ, ಚಾಕರಿಯವನಾದ ಮರ್ಯಾನಿಂದ ಶೋಷಿತಳಾಗುತ್ತಾಳೆ. ಅದೇ ರೀತಿ ಶಿವನ ಡಂಗುರದಲ್ಲಿ ಭಾಗಿರ್ತಿಯೂ ಕೂಡ ತನ್ನ ತಂದೆಯಾದ ಬರಮೇಗೌಡನಿಂದ ಪತಿಯಾದ ಕುಂಟಿರಪನಿಂದ ಶೋಷಿತಳಾಗುತ್ತಾಳೆ. ಭಾಗಿರ್ತಿ ಮತ್ತು ಸಿಂಗಾರೆವ್ವ ಇಬ್ಬರನ್ನು ಬಿಟ್ಟರೆ ಉಳಿದಂತೆ ಎಲ್ಲಾ ಸ್ತ್ರೀ ಪಾತ್ರಗಳು ಕೆಳವರ್ಗದ್ದವೇ ಆಗಿದ್ದು, ಮೇಲ್ವರ್ಗಗಳಿಂದ ಶೋಷಿತರಾಗುತ್ತಾರೆ. ಇನ್ನು ಪುರುಷ ಪಾತ್ರಗಳಲ್ಲಿ ಮೊದಲಿಗೆ ಶಿವನ ಡಂಗುರದಲ್ಲಿ ಚೆಂಬಸನು ತನ್ನ ದೊಡ್ಡಪ್ಪನಾದ ಬರಮೇಗೌಡನಿಂದ ಕುಂಟಿರಪ ಮತ್ತು ಹಳ್ಳಿಯ ಜನರಿಂದ ಶೋಷಣೆಗೆ ಒಳಪಡುತ್ತಾನೆ. ನಂತರ ಬರಮೇಗೌಡನಿಂದ ಹುಟ್ಟಿದ ತುಂಗವ್ವನ ಮಗ ಲಸಮನು ತನ್ನ ತಂದೆಯಿಂದ ಮತ್ತು ಅವನು ಸಹ ಸಮಾಜದಿಂದ ಶೋಷಣೆಗೆ ಒಳಗಾಗುತ್ತಾನೆ. ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಮರ್ಯಾ ಸಮಾಜದಿಂದ ಗೌಡನಿಂದ ಪಂಡರೀಗೌಡನಿಂದ

1. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 121

ನಿರ್ಲಕ್ಷ್ಯಕ್ಕೆ ಮತ್ತು ಶೋಷಣೆಗೆ ಒಳಗಾಗುತ್ತಾನೆ. ಇಲ್ಲಿ ಸಿಂಗಾರೆವ್ವ, ಭಾಗೀರ್ಥಿ, ಚೆಂಬಸ ತಮ್ಮವರಿಂದ ಶೋಷಣೆಗೆ ಒಳಗಾದರೆ ಮತ್ತೆ ಉಳಿದವರು ಬೇರೆ ಬೇರೆಯವರಿಂದ ಶೋಷಿತರಾಗುತ್ತಾರೆ.

ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕೃತಿಗಳಲ್ಲಿ ಮುಖ್ಯವಾಗಿ ಮೂಢ ನಂಬಿಕೆ, ಆಚಾರ-ವಿಚಾರ, ಉಡುಗೆ-ತೊಡುಗೆಗಳ ಬಗ್ಗೆ ಒಟ್ಟಾರೆ ಜಾನಪದದ ಹಿನ್ನೆಲೆಯಲ್ಲಿ ನೋಡಬಹುದು. ಕಂಬಾರರ ಕೃತಿಗಳಲ್ಲೆಲ್ಲ ಹೆಚ್ಚು ಜಾನಪದೀಯ ಅಂಶಗಳಿಂದ ರಚಿತವಾದಂತವು. ಜಾತ್ರೆ, ಹುಣ್ಣಿಮೆ, ಆಚರಣೆಗಳಲ್ಲೆಲ್ಲ ಜಾನಪದೀಯ ಅಂಶಗಳು ಎದ್ದು ಕಾಣುತ್ತದೆ. ಅನುಭವ ಹಾಗೂ ಅಭಿವ್ಯಕ್ತಿಗಳನ್ನು ಅವರು ಸಮುದಾಯದ ಸಂಕಥನವನ್ನಾಗಿ ಕಟ್ಟಿಕೊಳ್ಳುತ್ತಾರೆ. ಭಾಷೆ ಒಂದು ಸಂಸ್ಕೃತಿಯನ್ನು ನಿರ್ಮಾಣ ಮಾಡುತ್ತದೆ. ಜೊತೆಗೆ ಅವರ ಆಚರಣೆಗಳೆಲ್ಲವು ಸಹ ಸಂಸ್ಕೃತಿಯನ್ನು ಕಾಪಾಡುವುದೇ ಆಗಿರುವಂತದ್ದು. ಶಿವಾಪುರದ ಬಗ್ಗೆ ವರ್ಣನೆಯ ಬಗ್ಗೆ ಜೋಗತಿಯರ ಹಾಡುಗಳು ಕುರುಬರ ಹಾಡುಗಳಲ್ಲಿ ವರ್ಣನೆ ಇದೆ. ಅದೇ ರೀತಿ ಶೀನಿಂಗವ್ವ ಅರಮನೆಯ ಬಗ್ಗೆ ಕಥೆಯನ್ನು ಹೇಳುವ ವಿಧಾನವು ಜಾನಪದೀಯ ಅಂಶವನ್ನು ತಿಳಿಸುತ್ತದೆ.

ಹಳ್ಳಿಗಾಡಿನ ಜನರು ತಾವು ಹುಟ್ಟಿನಿಂದಲೂ ಸಾಯುವವರೆಗೂ ಅದೇ ಜಾನಪದೀಯ ಹಿನ್ನೆಲೆಯಲ್ಲಿ ಬದುಕನ್ನು ಸಾಗಿಸುತ್ತಾರೆ. ಜೊತೆಗೆ ಓದು ಬರಹ ತಿಳಿಯದ ವ್ಯಕ್ತಿಗಳು ಸಹ ವಿದ್ಯಾವಂತರ ದಾಟಿಯಲ್ಲಿ ಹಳ್ಳಿಗಳ ಏಳಿಗೆಯ ಬಗ್ಗೆ ಚಿಂತಿಸುವಂತಹ ಚಿತ್ರಣಗಳು ಕೃತಿಗಳಲ್ಲಿ ಸಾಕಷ್ಟಿವೆ. ಅವರು ಮಾತನಾಡುವಂತಹ ಭಾಷೆಯಲ್ಲಿಯೂ ಜಾನಪದದ ಸೊಗಡು ಇರುವಂತದದು. ಆಧುನಿಕತೆಯಿಂದಾಗಿ ಅಲ್ಪಸ್ವಲ್ಪ ಶಿಷ್ಟ ಭಾಷೆಯನ್ನು ಸಹ ಕೃತಿಗಳಲ್ಲಿ ತರುತ್ತಾರೆ. ಲೇಖಕರು ಕೃತಿಗಳ ಉದ್ದಗಲಕ್ಕೂ ಜಾನಪದದ ಒಂದು ರೇಖೆಯನ್ನು ಬಿಟ್ಟು ಬೇರಾವ ದಾಟಿಯಲ್ಲಿಯೂ ಕಥೆ ಹೇಳುವುದಿಲ್ಲ. ಈ ಕೃತಿಗಳ ಮುಖಾಂತರವು ಕವಿ ಜಾನಪದೀಯ ಅಂಶಗಳ ಹಿನ್ನೆಲೆಯಲ್ಲಿ ರಚಿಸಿರುವುದರಿಂದ ಒಬ್ಬ ಜಾನಪದೀಯ ಕವಿ ಎಂದು ಗುರ್ತಿಸಬಹುದು.

ಶಿವನ ಡಂಗುರ ಕಾದಂಬರಿಯಲ್ಲಿ ಪ್ರಾರಂಭದಲ್ಲಿಯೇ ಭೂಲೋಕ ಯಾವ ರೀತಿ ಸೃಷ್ಟಿಯಾಯಿತು ಎಂಬುದರ ಬಗ್ಗೆ ಕಥೆಯನ್ನು ವಿವರಿಸಲಾಗಿದೆ. ಜಾನಪದ ಕಥೆಗಳ ಮಹತ್ವವನ್ನು ಯಾವ ರೀತಿ ತಂದಿದ್ದಾರೆಂಬುದು ಮುಖ್ಯ ನಂತರದಲ್ಲಿ ಶಿವಾಪುರದಲ್ಲಿ ಗೌಡಾಳಿಕೆಯ ಮಹತ್ವದ ಬಗ್ಗೆ ಇರುವ ಚರಿತ್ರೆಯು ಮುಖ್ಯವಾಗುತ್ತ ಸವದತ್ತಿ ಜಾತ್ರೆಯ ಸಡಗರ ಸಂಭ್ರಮ ಜೊತೆಗೆ

ತುಂಗವ್ವನ ಕಥೆಗಳು ಅವಳು ಯಕ್ಷಿಣಿಯ ಬಗ್ಗೆ ಕಾಣದ ಕನಸುಗಳು ಎಲ್ಲವು ಒಂದು ರೀತಿಯ ಎಚ್ಚರಿಕೆಯನ್ನು ಸೂಚಿಸುತ್ತವೆ. ಜಾನಪದದ ಆ

ಡು ಭಾಷೆಯ ಹಿನ್ನೆಲೆಯಲ್ಲಿ ಲಸಮ ಮತ್ತು ಚೆಂಬಸರ ನಡುವಿನ ಸಂಭಾಷಣೆ ಈ ರೀತಿಯದ್ದು.

ಲಸಮ ಶಾರವ್ವನಿಗೆ ಕಾರೀಹಣ್ಣು ತೆಗೆದುಕೊಂಡು ಹೋಗುತ್ತಿದ್ದಾಗ ಅದನ್ನು ನೋಡಿದ ಚೆಂಬಸನು ಈ ರೀತಿ ಕೇಳುತ್ತಾನೆ.

"ಇವ್ಯಾರಿಗೆ?" ಅಂದ

"ಶಾರಿಗೆ"

"ಶಾರಿ ಯಾರೂ? ನಿನಗೇನಾಗಬೇಕು?"

"ಕೊಟ್ಟಿಗೆ ಮನೆ ನಾಗಣ್ಣ ನನ್ನ ಸೋದರ ಮಾವ. ಈ ಶಾರಿ ಅವನ ಮಗಳು ಕಾರೀ ಹಣ್ಣಂದರ ಆಕಿಗಿ ಭಾಳ ಆಸೆ. ಸಂಜಿಕ ಬರೋವಾಗ ತರ್ತೀನಂತ ಹೇಳಿದ್ದೆ. ದಾರಿ ಕಾಯತಾಳ".

"ನೀ ಮದಿವ್ಯಾಗ್ತೀಯೇನ ಮತ್ತ?" ಅಂದ ನಗಾಡುತ್ತ "ಇಲ್ಲ ಮಾರಾಯಾ ಆಕಿ ಆಗಲೇ ಎಲ್ಲಮ್ಮನ ಭಕ್ತೆ ಆಗ್ಯಾಳ. ಅಕಾ ಅವರ ಮನಿ ಬಂದು ಹೋಗಿ ಕೊಟ್ಟ ಬರ್ತೀನಿ".[2]

ಹಳ್ಳಿಗಳಲ್ಲಿ ಈ ರೀತಿಯ ಭಾಷೆಯನ್ನಾಡುತ್ತಾರೆ. ಆದರೆ ಈ ರೀತಿಯ ಹಾಡುಭಾಷೆಯನ್ನು ಶಿಷ್ಟ ಭಾಷೆಯಲ್ಲಿ ಹಿಡಿದಿಡುವ ಪ್ರಯತ್ನವನ್ನು ಕಂಬಾರರು ಮಾಡುತ್ತಾರೆ.

ಜನಪದದಲ್ಲಿ ಬೈಗಳಗಳು ಸಹ ಒಂದು ಭಾಗವಾಗಿದ್ದು ಅದಕ್ಕೂ ಒಂದು ಆಯಾಮವನ್ನು ಸೃಷ್ಟಿಸುತ್ತಾರೆ ಕಂಬಾರರು.

"ಆ ನನ್ನ ಹಾಟ್ಯಾ ದೇವರಿಗೆ ಕಣ್ಣಿಲ್ಲ ಮಗಳ! ಬಡವರಿಗಿ ತ್ರಾಸ ಕೊಡತಾನು. ತ್ರಾಸ ಕೊಟ್ಟು ಕೊಟ್ಟು ಮೋಜ ನೋಗೆಡ ತಾನು! ಅವನ ಕಣ್ಣು ಹೋಗಿ. ಅವನ ಹೇಂತಿ ರಂಡಿ ಆಗಲಿ. ಅವನ ಕಣ್ಣಿಗಿ ಗೆದ್ದಲು ಮುತ್ತಲಿ. ಅವನ ಬಾಯಿಗಿ ಇರಿಪಿ ಮುತ್ತಲಿ!"[3]

ಈ ರೀತಿಯ ಮಾತುಗಳನ್ನು ಸಹ ಕಾದಂಬರಿಯಲ್ಲಿ ತರುತ್ತಾರೆ. ಶಿವನ ಡಂಗುರದಲ್ಲಿ ಪೋಲಿಸಿನವರಿಂದ ಅನ್ಯಾಯಕ್ಕೊಳಗಾದ ನೀಲಗಂಗುವಿನ ಪರಿಸ್ಥಿತಿಯನ್ನು ಕಂಡ ಕಲ್ಲವ್ವ ದೇವರಿಗೆ ಶಾಪ ಹಾಕುತ್ತಾಳೆ. ಇಲ್ಲಿ ನೋಡುವ ಮುಖ್ಯ ಸಂಗತಿ ಎಂದರೆ ಶ್ರೀಸಾಮಾನ್ಯರು ತಮಗೆ ಕಷ್ಟ ಬಂದಾಗ ದೇವರಲ್ಲಿ ಮೊರೆ ಹೋಗುವುದು ಸಾಮಾನ್ಯ ಆದರೆ ಸಹಿಸಲಾಗದ ಕಷ್ಟ ಬಂದೊದಗಿದರೆ

---

2. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 60

3. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 143

ಬೇಡುವ ದೇವರಿಗೆ ಬೈಯುವ ಪರಿಸ್ಥಿತಿ ಬರುತ್ತದೆ ಎಂಬುದಕ್ಕೆ ಈ ರೀತಿಯ ಮಾತುಗಳ ಮುಖಾಂತರ ಅವಳ ಅಂತರಾಳದ ಸಿಟ್ಟನ್ನು ತೋಡಿಕೊಳ್ಳುತ್ತಾಳೆ.

ತುಂಗವ್ವನಿಗೊಂದು ಕನಸು ಬೀಳುತ್ತದೆ. ಯಕ್ಷಿಣಿಯೊಬ್ಬಳು ಗಂಡಸರ ರಕ್ತವನ್ನು ಹೀರುವಂತೆ, ಅದು ಶಿವಾಪುರದ ಬಗ್ಗೆ ಎಚ್ಚರಿಸುವಂತದ್ದು ವಿನಾಶದ ಹಂಚಿಗೆ ತಲುಪುತ್ತಿದೆ ಎಂಬುದನ್ನು ತುಂಗವ್ವ ತನ್ನ ಕನಸಿನ ಮೂಲಕ ಕಂಡು ಅದನ್ನು ನಮಃಶ್ಶಿವಾಯನಿಗೆ ವಿವರಿಸುತ್ತಾಳೆ. ಹಣದ ಆಸೆಯಿಂದ ರೈತರು ತಮ್ಮ ಮೂಲ ಬೆಳೆಗಳನ್ನು ಬಿಟ್ಟು ಬೇರೆ ಅನ್ಯ ಸಂಸ್ಕೃತಿಗೆ ಒಳಗಾಗಿ ತಮ್ಮ ಜೀವನವನ್ನು ಆಳುಮಾಡಿಕೊಳ್ಳುತ್ತಿದ್ದಾರೆ ಎಂಬಂತೆ ವಿವರಿಸುತ್ತಾಳೆ.

ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಅರಮನೆಯು ಸಹ ಒಂದು ಸಂಸ್ಕೃತಿಯ ಪ್ರತೀಕವಾಗುತ್ತದೆ ರೈತರು ತಮ್ಮ ಹೊಲಗಳಲ್ಲಿ ಬಿತ್ತನೆ ಮಾಡುವುದು ಮಳೆಯಂತೆ, ಬೆಳೆಯಂತೆ ಕುಮುದವ್ವನ ಜಾತ್ರೆಯಂತೆ ಇಷ್ಟೆಲ್ಲ ಕಾರ್ಯಗಳಲ್ಲಿ ತೊಡಗಿರುವುದು ಸಹ ಸಂಸ್ಕೃತಿಯ ಪ್ರತೀಕ.

ಶಿವಾಪುರದ ಕುಮುದವ್ವ ಗ್ರಾಮದೇವತೆ ಕುಮುದವ್ವನ ಮೂರ್ತಿ ವಿಚಿತ್ರವಾಗಿದೆ. ಕುಮುದವ್ವ ಎಂದರೆ ತೊಡಗೀಸಿ ಕುಳಿತ ಬೆತ್ತಲೆ ಹೆಣ್ಣಿನ ಮೂರ್ತಿ ಇದಕ್ಕೆ ತಲೆಯಿಲ್ಲ ಬದಲಾಗಿ ತಲೆಯ ಭಾಗದಲ್ಲಿ ಅರಳಿದ ಕಮಲವಿದೆ. ಎರಡು ಕೈಗಳಲ್ಲಿ ಕಮಲಗಳಿವೆ ಹೀಗೆ ವಿಚಿತ್ರವಾಗಿರುವ ಕುಮುದವ್ವನ ಸಂಕೇತ ಕಾದಂಬರಿಯ ಮುಖ್ಯ ಆಶಯವನ್ನು ಸ್ಥಾಪಿಸುವಲ್ಲಿ ಪ್ರಧಾನವಾಗಿ ತೆಗೆದುಕೊಳ್ಳಬೇಕು.

ಗ್ರಾಮದೇವತೆಯಾದ ಕುಮುದವ್ವನ ಗುಡಿಗೆ ಹೆಂಗಸರ ಪ್ರವೇಶವಿಲ್ಲ. ಅಲ್ಲಿಗೆ ಗಂಡಸರು ಮಾತ್ರ ಹೋಗಿ ಹರಕೆ ಸಲ್ಲಿಸುವುದು ಮತ್ತು ಹರಕೆಗೆ ಬೇಕಾದ ವಸ್ತುಗಳೆಲ್ಲವನ್ನು ಜಾತ್ರೆಯಲ್ಲಿ ಕದ್ದು ತಂದಿರಬೇಕೆಂಬ ಒಂದು ನಂಬಿಕೆ ಈ ನಂಬಿಕೆ ಜನಪದೀಯವಾಗಿ ಇವರ ಒಂದು ಆಚರಣೆಯಾಗಿ ಜೊತೆಗೆ ಪಾಲಿಸಿಕೊಂಡು ಬರುತ್ತಿದ್ದಾರೆ. ಇದು ಇವರ ಸಂಸ್ಕೃತಿಯಾಗಿ ನಿಲ್ಲುತ್ತದೆ. ಇಂಥಹ ಚಿತ್ರಣಗಳಲ್ಲಿ ಸಾಮಾನ್ಯ ಜನರು ಯಾವ ರೀತಿ ತಮ್ಮ ಮೂಢನಂಬಿಕೆಗಳನ್ನಾಚರಿಸಿಕೊಂಡು ಬರುತ್ತಿದ್ದಾರೆಂಬುದನ್ನು ಕೃತಿಯಲ್ಲಿ ವಿವರಿಸುತ್ತಾರೆ.

ಹುಚ್ಚಯ್ಯನ ಮುಖಾಂತರ ಅವನು ಮಾಡುವ ಎಲ್ಲಾ ಕೆಲಸಗಳು ಸರಿ. ಅವನೊಬ್ಬ ದೇವರ ಪ್ರತೀಕ ಎಂದು ಎಲ್ಲಾ ಜನರು ನಂಬಿರುತ್ತಾರೆ. ಅದಕ್ಕೆ ಸಂವಾದಿಯಾಗಿ ಪೂಜೆ ಮಾಡಿದರೆ ಮಕ್ಕಳಾಗುತ್ತವೆ ಎಂದು ನಂಬಿ ಸಿಂಗಾರೆವ್ವ ಪೂಜೆ ಮಾಡಿಸಲು ತೊಡಗುತ್ತಾಳೆ.

ಭಾರತೀಯ ಸಮಾಜದಲ್ಲಿ ಪ್ರತಿಯೊಂದು ಕುಟುಂಬವು ಗಂಡು ಮಕ್ಕಳನ್ನು ಪಡೆದರೆ ಮಾತ್ರ ಮುಕ್ತಿ ಎಂಬ ನಂಬಿಕೆಯಿಂದ ಇಂತಹ ನಂಬಿಕೆಗಳ ಮೊರೆ ಹೋಗುತ್ತಾರೆ. ಅದೇ ರೀತಿ ಸಿಂಗಾರೆವ್ವ ತನ್ನ ಸುತ್ತಲಿನ ಪರಿಸರದ ಕಿರುಕುಳದಿಂದ ನೊಂದು ಮರ್ಯಾದ ಮುಖಾಂತರ ತಾಯಿ ಪಟ್ಟವನನು ಅಲಂಕರಿಸುತ್ತಾಳೆ. ಮೊದಲಿಸಿಂದಲು ಅವಳು ತಾಯಿಯ ಬಗ್ಗೆ ಅಪಾರವಾದಂತಹ ಕನಸ್ಸನ್ನು ಕಂಡವಳಾಗಿದ್ದಾಳೆ. ಶೀನಿಂಗಿಯ ಜೊತೆ ತಂದೆ ತಾಯಿ ಆಟವಾಡುವುದು ತನ್ನ ಹಿರಿಯ ಮಗಳು 'ಸಂಪಿಗೆ' ಮತ್ತು ಮಗ 'ಶಿವಲಿಂಗ' ಎಂದೆಲ್ಲ ಕನಸು ಕಂಡವಳು. ತಾನು ಅರಮನೆಯಲ್ಲಿದ್ದು ಮನೆಯ ತುಂಬ ಮಕ್ಕಳನು ಹಡೆಯಬೇಕೆಂದು, ಅವರ ಪಾಲನೆ ಪೋಷಣೆಯಲ್ಲಿ ತೊಡಗಬೇಕೆಂದು ಕನಸು ಕಂಡವಳು. ತಮ್ಮ ಮನೆಯ ಕೊಟ್ಟಿಗೆಯಲ್ಲಿ ಹಸು, ಕರು ಹಾಕಿದ್ದಕ್ಕೆ ಅವಳಿಗೆ ಆನಂದವೋ ಆನಂದ. ಅದರ ಯೋಗಕ್ಷೇಮದ ಬಗ್ಗೆ ವಿಚಾರಿಸಿಕೊಳ್ಳುವ ಪರಿ ಅತ್ಯದ್ಭುತ ತಮ್ಮ ಮನೆಯ ಕೆಲಸದಾಳಾದ ನಂಜಿಯು ಬಸುರಾಗಿದ್ದಾಗ ಅವಳ ಬಯಕೆಗಳನ್ನು ಕೇಳಿ ಹಿಡೇರಿಸುವುದು ಅವಳ ಹೊಟ್ಟೆಯನ್ನು ಮುಟ್ಟಿ ತಾನೇ ಗರ್ಭಿಣಿಯಾದಂತೆ ಆನಂದ ಪಡುತ್ತಾಳೆ. ಈ ರೀತಿಯ ಆಸೆ ಮತ್ತು ಕನಸ್ಸು ಕಂಡವಳು ಆದರೆ ಅವಳು ಕಂಡ ಕನಸು ಆಸೆಗಳು ನನಸಾಗುವುದೇ ಇಲ್ಲ. ನನಸು ಮಾಡಿಕೊಳ್ಳಲು ಮರ್ಯಾದ ಮೊರೆಹೋಗುತ್ತಾಳೆ.

ಇದೇ ರೀತಿಯ ಸಂಪ್ರದಾಯವನ್ನು ಶಿವನ ಡಂಗುರ ಕಾದಂಬರಿಯಲ್ಲಿಯೂ ನೋಡಬಹುದು ಬರಮೇಗೌಡ ತನಗೆ ಗಂಡು ಬೇಕೆಂದು ಯಜ್ಞ ಯಾಗಾದಿಗಳನ್ನು ಮಾಡಿಸುತ್ತಾನೆ. ಜಾತಕವನ್ನು ಜೊತಿಷಿಗಳಿಗೆ ತೋರಿಸುತ್ತಾನೆ. ಬರಮೇಗೌಡನ ಕುಟುಂಬದಲ್ಲಿ ಒಂದು ಕಥೆಯಿದೆ ಏಳು ಮಕ್ಕಳ ತಾಯಿಯಾಗಬೇಕೆಂಬ ಬಯಕೆಯಿಂದ ದೊಡ್ಡೇಗೌಡನ ಹೆಂಡತಿ ದೊಡ್ಡವ್ವ ದೇವರಲ್ಲಿ ಬೇಡುವುದು "ದೇವರೇ! ನನಗೆ ಇನ್ನೊಂದು ಮಗುವಾಗಿದ್ದರೆ ಎಷ್ಟು ಚೆನ್ನಾಗಿತ್ತಲ್ಲ!" ಎಂದು ಕೇಳುತ್ತಾಳೆ. ಅದೇರೀತಿ ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಹಿರಿಯ ದೊರೆಸಾನಿಯು ಮೊಮ್ಮಗನಿಗಾಗಿ ಹಂಬಲಿಸುತ್ತಾಳೆ.

ಜಾನಪದೀಯ ಸಂಸ್ಕೃತಿಯಲ್ಲಿ ಗಾದೆಗಳಿಗೂ ಅವುಗಳದೆ ಆದ ಪ್ರಾಮುಖ್ಯತೆ ಬರುತ್ತದೆ. "ಥೂ ಹಾಂಗ ಮಾಡಬಾರದು" ಎಂದು ಗದರಿಸಿ 'ಹತ್ತು ಹಡೆದ ತಾಯೋಬ್ಬಳು ಚೊಚ್ಚಿಲ ಬಾಣಂತಿಗೆ ಬುದ್ದಿ ಹೇಳುವಂತೆ ಹೇಳುತ್ತಿದ್ದಳು"[4] ಈ ರೀತಿಯ ಮಾತುಗಳ ಪ್ರಸಂಗವನ್ನು ಲೇಖಕರು ಕೃತಿಯೊಳಗಡೆ ತಂದಿದ್ದಾರೆ. ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಹಿರಿಯ ದೊರೆಸಾನಿ ನಾಗಮ್ಮ ಮೊಮ್ಮಕ್ಕಳಿಗಾಗಿ ಹಂಬಲಿಸುತ್ತಾಳೆ. ಪ್ರತೀ ದಿನ ಶೀನಿಂಗವ್ವನನ್ನು ಸಿಂಗಾರೆವ್ವ ಬಸುರಾದಳೆ ಎಂದು ಕೇಳುತ್ತಾಳೆ. ಶೀನಿಂಗವ್ವ ಇಲ್ಲ ಎಂದಾಗ ಅದಕ್ಕೆ ಪ್ರತಿಯಾಗಿ ನಾಗಮ್ಮ ಈ ರೀತಿ

4. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ – ಪುಟ 28

ಹೇಳುತ್ತಾಳೆ 'ಏ, ಬಸರಾಗಾಗ ಒನಿಕೇ ಆಗಬೇಕಂತಿಲ್ಲಗ ಉಚ್ಚಿ ದಾಟಿದರ ಸಾಕು ಉಚ್ಚೀ ಹೋಯ್ತುನೋ ಇಲ್ಲೋ? ಅದ್ದೇಳು ಈ ರೀತಿಯ ಮಾತುಗಳು ಜಾನಪದೀಯರ ನಂಬಿಕೆಯನ್ನು ತೋರ್ಪಡಿಸುತ್ತವೆ. ಮಕ್ಕಳಿಲ್ಲದ್ದಕ್ಕೆ ಅವರು ಯಾವ ರೀತಿಯದಾದ ನಂಬಿಕೆಯನ್ನಾಚರಿಸಲು ಸಿದ್ಧಿರುರುತ್ತಾರೆಂಬುದನ್ನು ಇಲ್ಲಿ ಕಾಣಬಹುದು.

ಶಿವನ ಡಂಗುರದಲ್ಲಿ ವಸಾಹತುವಿನ ಪ್ರಭಾವದಿಂದಾಗಿ ಸಂಸ್ಕೃತಿಯು ವಿನಾಶದ ಹಂಚಿಗೆ ತಲುಪುವ ಸ್ಥಿತಿಗೆ ಬರುತ್ತದೆ. ಮೊದಲು ಊರಿನ ವಾತಾವರಣದ ಸುಂದರತೆ ಆದರ ಪರಿಸರ ಎಷ್ಟು ಉತ್ತಮವಾಗಿತ್ತೆಂಬುದಕ್ಕೆ ಕಾದಂಬರಿಯ ಚಿತ್ರಣದಲ್ಲಿ ನೋಡಬಹುದು. ನಂತರದಲ್ಲಿ ವಸಾಹತು ಎನ್ನುವ ರಾಕ್ಷಸನ ಪ್ರವೇಶವಾಗಿ ಊರು ಸ್ಮಶಾನವಾಗುತ್ತದೆ. ಕಂಬಾರರು ಸಮಕಾಲೀನ ಚರಿತ್ರೆಯನ್ನು ಜನಪದ ಕತೆಯ ಮೂಲಕ ಪುರಾಣದ ಮೂಲಕ ಹೇಳುತ್ತಿದ್ದರು. ಪುರಾಣಗಳು ರೂಪಕದಲ್ಲಿ ಬಚ್ಚಿಟ್ಟ ಚರಿತ್ರೆಗಳೇ ಆದರೆ ಈಗ ಅವರು ಸಮಕಾಲೀನ ಬದುಕನ್ನು ನೇರವಾಗಿ ಮುಖಾಮುಖಿಯಾಗಿಸುತ್ತಿದ್ದಾರೆ.

ಒಂದು ಕಾಲದ ಶಿವಾಪುರದ ಬದುಕಿನಲ್ಲಿ ಭೂಮಿ ಜನಗಳ ತಾಯಿಯಾಗಿತ್ತು. ಅದನ್ನು ಉಳಿಸಿಕೊಳ್ಳಬಲ್ಲ ಜನರಿದ್ದರು. ಇಂಥ ಶಿವಾಪುರದ ಬದುಕಿನಲ್ಲಿ ಈಗ ಲಯತಪ್ಪಿದೆ ಇದಕ್ಕೆ ಮುಖ್ಯ ಕಾರಣ ಬರಮೇಗೌಡ ಮತ್ತು ಕುಂಟಿರಪ ಅವನ ಸಹಪಾಟಿಗಳು ಬರಮೇಗೌಡ ಹಳ್ಳಿಗೆ ಕೆಲವು ಒಳ್ಳೆಯ ಕಾರ್ಯಗಳನ್ನು ಮಾಡಿದ್ದರಿಂದ ಅವನನ್ನು ಹಳ್ಳಿಯ ಜನ ನಂಬಿದರು. ಆದರೆ ನಂತರದಲ್ಲಿ ಅವನ ಯೋಚನೆಗಳಾದ ಕಾಲೇಜು, ಆಸ್ಪತ್ರೆಗಳನ್ನು ತೆರೆಯಬೇಕೆಂಬ ಹಂಬಲದಿಂದ ಶಿವಾಪುರದ ಮಲ್ಲಿಮಡುವಿನ ಜಾಗಕ್ಕೆ ಅಮೇರಿಕಾದಿಂದ ತಂದು ಸುರಿಯುತ್ತಿದ್ದ ರಾಸಾಯನಿಕಗಳಿಂದಾಗಿ ಹಳ್ಳಿಯ ವಾತಾವರಣ ಸಂಪೂರ್ಣ ಬದಲಾಯಿತು. ಹಳ್ಳಿಯಲ್ಲಿ ಗಬ್ಬುವಾಸನೆ ನಾರತೊಡಗಿತು. ಕ್ರಮೇಣ ಅಪಾಯಕಾರಿ ರೋಗಗಳು ಬರತೊಡಗಿದವು. ನೆಲ ಬಂಜರಾಯಿತು. ರುಚಿಕಳೆದುಕೊಂಡ ಹಣ್ಣುಗಳು ವಿಕಾರ ರೂಪದ ಕರುಗಳು. ವಿಕಲಾಂಗ ಶಿಶುಗಳು ಇವೆಲ್ಲ ಕೆಡುಕುಗಳಾದವು. ಬರಮೇಗೌಡ ಊರನ್ನು ಉದ್ಧಾರ ಮಾಡುವ ಯೋಜನೆ ಈಗ. ಊರನ್ನು ಸ್ಮಶಾನ ಮಾಡುವ ಯೋಜನೆಯಾಯಿತು. ಒಟ್ಟಾರೆ ಅಭಿವೃದ್ಧಿಯ ಹೆಸರಿನಲ್ಲಿ ಹಳ್ಳಿಯ ವಿನಾಶವಾಗತೊಡಗುತ್ತಾ ಬರುತ್ತದೆ.

ಶಿವಾಪುರದ ಸಮಗ್ರ ಅಭಿವೃದ್ಧಿಯ ಹೆಸರಿನಲ್ಲಿ ಅಲ್ಲಿಯ ಜನರ ಬದುಕು ನರಕವಾಗುತ್ತದೆ. ರಾಜಕೀಯ ಪ್ರವೇಶದಿಂದಾಗಿ ಊರು ರಣರಂಗವಾಗುತ್ತದೆ. ಅತ್ಯಾಚಾರವಾಗುತ್ತದೆ.

ಕೊಲೆಗಳಾಗುತ್ತದೆ. ಅಮಾಯಕರು ಶಿಕ್ಷೆ ಅನುಭವಿಸುವಾಗುತ್ತದೆ. ಊರೇ ನಾಶವಾಗುವ ಸ್ಥಿತಿಗೆ ತಲುಪುತ್ತದೆ.

ರಾಜಕೀಯತೆಯಿಂದಾಗಿ ಹಳ್ಳಿಗಳಲ್ಲಿ ಉಂಟಾಗುವಂತ ಬದಲಾವಣೆಗಳನ್ನು ಎರಡು ಕೃತಿಗಳಲ್ಲಿ ಚರ್ಚಿಸಲಾಗಿದೆ. ಶಿವನ ಡಂಗುರದಲ್ಲಿ ಬರಮೇಗೌಡನನ್ನು ಅಸ್ತ್ರವಾಗಿಸಿಕೊಂಡು ಕುಂಟಿರಪ ಗೌಡನನ್ನು ಚುನಾವಣೆಗೆ ನಿಲ್ಲಿಸಿ ಗೌಡನಿಂದ ಪ್ರಚಾರಮಾಡಿಸಿದ ಆದರೆ "ಜೈಜನ ಜ್ಯೋತಿ" ಪಕ್ಷದಿಂದ ಚುನಾವಣೆಗೆ ಟಿಕೆಟ್ ಸಿಕ್ಕಿದ್ದು ಮಾತ್ರ ಕುಂಟಿರಪನಿಗೆ. ಚುನಾವಣೆಯಲ್ಲಿ ಗೆದ್ದು ಮಂತ್ರಿ ಪದವಿ ಪಡೆದ ತಾರಾ, ಬಿಗ್‌ಬಾಸ್, ಕುಂಟಿರಪನ ಕುತಂತ್ರದಿಂದ ಬರಮೇಗೌಡನನ್ನು ಸ್ವಾರ್ಥಕ್ಕೆ ಬಳಸಿಕೊಂಡರು. ಊರನ್ನು ಉದ್ಧಾರ ಮಾಡುತ್ತೇವೆ ಎಂದು ವಿನಾಶದ ಹಂತಕ್ಕೆ ತಲುಪುವಂತೆ ಮಾಡುತ್ತಾರೆ. ಇದೆ ರೀತಿಯ ಚುನಾವಣೆಯ ಪ್ರಸಂಗ ಸಿಂಗಾರೆವ್ವ ಮತ್ತು ಅರಮನೆಯಲ್ಲಿಯೂ ಬರುತ್ತದೆ. ಊರುಗೆ ಉಪಕಾರಿಯಾದ ದೇಸಾಯಿ ಒಮ್ಮೆ ಪಂಚಾಯ್ತಿ ಎಲೆಕ್ಷನ್ನಿಗೆ ನಿಂತಾಗ ಕೆಲವು ಜನರನ್ನು ಕಟ್ಟಿಕೊಂಡು ನೀರಿನಂತೆ ಹಣ ಸುರಿದು ಮನೆ ಮನೆಗೆ ಹೋಗಿ ಓಟು ಕೇಳಿದ. ಆದರೆ ಅದೇ ಜನ ಅವನನ್ನು ಸೋಲಿಸಿದರು. ಇದರಿಂದ ನಿರಾಶೆಗೊಂಡ ದೇಸಾಯಿ ಮತ್ತೆ ಚುನಾವಣೆಯ ಸಹವಾಸ ಮಾಡದೆ ತೆಪ್ಪಗಾಗುತ್ತಾನೆ. ಇದರಿಂದ ಒಬ್ಬ ದಕ್ಷ ಆಡಳಿತಗಾರನಾಗಬೇಕಾದರೆ ಅವನ ಹತ್ತಿರ ವಿರುವ ಹಣ ಮಾತ್ರ ಸಾಲದು ಅವನು ಜನಗಳನ್ನು ಯಾವ ರೀತಿ ನೋಡಿಕೊಳ್ಳುತ್ತಾರೆಂಬುದು ಮುಖ್ಯವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಶಿವನ ಡಂಗುರದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಬಗ್ಗೆ ಪ್ರಸ್ತಾಪ ಬರುತ್ತದೆ.

ಚೆಂಬಸನು ಗೌಡಾಳಿಕೆಯ ಕುಟುಂಬದವನಾದರು ಆಧುನಿಕ ಶಿಕ್ಷಣ ಪಡೆದವನಾದರೂ ರೈತಾಪಿ ಜನರ ಜೀವನಕ್ಕೆ ಬೆನ್ನೆಲುಬಾಗಿ ನಿಂತು ಅವರ ರಕ್ಷಣೆ ಮಾಡುವುದರ ಜೊತೆಗೆ ಹಳ್ಳಿಯನ್ನು ಮತ್ತೆ ಹಿಂದಿನ ರೂಪಕ್ಕೆ ತರಲು ಪ್ರಯತ್ನಿಸುತ್ತಾನೆ. ಈ ಒಂದು ಪಾತ್ರದ ಮುಖಾಂತರ ಕಂಬಾರರು ಹೇಳಲು ಹೊರಟಿರುವ ಸಂದೇಶವೆಂದರೆ ಆಧುನಿಕ ಶಿಕ್ಷಣದಿಂದಾಗಿ ಸಂಸ್ಕೃತಿ ನಾಶವಾಗುತ್ತಿದೆ. ಅದನ್ನು ಬಿಟ್ಟು ಶಿಕ್ಷಣವನ್ನು ಯಾವ ರೀತಿ ಉಪಯೋಗಕ್ಕೆ ಸೀಮಿತ ಮಾಡಿಕೊಳ್ಳುವ ಎಂಬುದನ್ನು ಚೆಂಬಸನ ಪಾತ್ರದಲ್ಲಿ ಚಿತ್ರಿಸುತ್ತಾರೆ. ಆಧುನಿಕ ಶಿಕ್ಷಣವನ್ನು ಪಡೆದು, ಹಳ್ಳಿಯ ಸಂಸ್ಕೃತಿಯನ್ನು ಉಳಿಸಿಕೊಳ್ಳಲುಬಹುದು ಎಂಬುದಕ್ಕೆ ಇವನ ಪಾತ್ರ ಮಾದರಿಯಾಗುತ್ತದೆ.

ಸಮಾಜದ ಉದ್ಧಾರಕ್ಕಾಗಿ ಚೆಂಬಸನು ಕೊಲೆಗಡುಕನಾಗಿಯೂ ಶಿಕ್ಷೆಗೆ ಗುರಿಯಾಗುತ್ತಾನೆ. ಭಾಗಿರ್ತಿ ಮತ್ತು ಕುಂಟಿರಪನ ವಿಕೃತ ಸಂತಾನವಾದ 'ಮಾದೇವಿ' ಯನ್ನು 'ಕಸ್ತೂರ ಬಾ ಅನಾಥಾಶ್ರಮ' ಸೇರಿ ಶಾರವ್ವನ ಮುಖಾಂತರ ಒಂದು ಉತ್ತಮ ಸ್ಥಿತಿಗೆ ಬರುತ್ತಳೆ. ಸ್ಪರ್ಧೆಯಲ್ಲಿ ಅವಳು ತೋರಿದ ಜಾಣ್ಮೆ ಉತ್ತಮವಾದದ್ದು. ಈ ಒಂದು ಹಿನ್ನೆಲೆಯಲ್ಲಿ ಕಂಬಾರರು ಸಮಾಜ ಎಷ್ಟೇ ಹಿಂದುಳಿದಿದ್ದರು. ಅದನ್ನು ನಾವು ಯಾವ ರೀತಿ ಮುಂದುವರೆಯುವಂತೆ ಮಾಡಬಹುದು ಎಂಬುದನ್ನು ವಿವರಿಸುತ್ತಾರೆ. ಮಾದೇವಿಯ ಮೂಲಕ ಶಿವಾಪುರವನ್ನು ಕಟ್ಟಬಯಸುತ್ತಾರೆ. ಅಂದರೆ, ಅವ್ಯವಸ್ಥೆಯಿಂದ ಕೂಡಿರುವಂತಹ ಸಮಾಜವನ್ನು ಮಾದೇವಿಯು ಬುದ್ಧಿವಂತಿಕೆಯಿಂದ ಮರಳಿ ಕಟ್ಟುವ ಪ್ರಯತ್ನ ಮಾಡಬೇಕೆಂದು ಬಯಸುತ್ತಾರೆ. ಮಾದೇವಿ ಆಟದಲ್ಲಿ ತೋರಿದ ಬುದ್ಧಿವಂತಿಕೆಯ ಮುಖಾಂತರ ನಾಶಹೊಂದಲೊರಟಿರುವ ಶಿವಾಪುರದಲ್ಲಿ ತೊರಬಹುದು. ಎಂಬುದು ಲೇಖಕರ ಆಶಯ.

ಹಿಂದೆ ಇದ್ದ ಸಮಾಜಕ್ಕೂ ಇಂದಿರುವ ಸಮಾಜಕ್ಕೂ ಒಂದು ಉದಾರಹಣೆಯನ್ನು ಕೊಡುತ್ತಾರೆ.

"ಲೇ ಕುಂಟಾ, ಕಾಲ ಬದಲಾಗ್ಯಾವ್ರೋ ಎಬಡಾ, ಜಿಲ್ಲಾ ಪಂಚಾಯಿತಿ, ತಾಲೂಕಾ ಪಂಚಾತಿ, ಮೀಸಲಾತಿ ಇಂಥಾವೆಲ್ಲಾ ಒಂದು ಹಳ್ಳಿ ಚೌಕಟ್ಟು ಸಡ್ಲಾಗ್ಯಾವಲೇ! ನೀ ಇನ್ನ ಯಾವ ವಿಜಯನಗರದಾಗಿದ್ದೀಯೋ? ಬುದ್ಧಿ ಗಿದ್ದೀ? ಎಲ್ಲಿಟ್ಟೀದ್ದಿ? ಸುಮ್ಮನ ಕುಂತಕ"[5] ಎಂದು ಗದರಿ ನೋಡಿದ.

ಈ ರೀತಿಯ ಕೆಲವೊಂದು ಸೌಕರ್ಯಗಳು ಬಂದಿದ್ದರು. ಹೀಂದೆ ಇದ್ದ ಕೆಲವೊಂದು ಸಂಪ್ರದಾಯಗಳು ಮಾತ್ರ ಯಾಕೆ ಆಗಿಯೆ ಉಳದಿವೆ ಎಂಬುದನ್ನು ಪ್ರಶ್ನಿಸುತ್ತಾರೆ. ದೇವದಾಸಿಯರು ಸಹ ಗೌಡಳಿಕೆಗೆ ಯಾವುದೇ ರೀತಿಯ ಮಾರ್ಯಾದೆ ಕೊಡಲ್ಲ ಅವರಿಗೆ ಕಾನೂನು ಕಟ್ಟಳೆಗಳೆಲ್ಲ ತಿಳಿದಿದ್ದರು ಈ ದೇವದಾಸಿ ಪದ್ಧತಿಯನ್ನು ಯಾಕೆ ಉಳಿಸಿ ಕೊಂಡು ಬಂದಿದ್ದಾರೆ. ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಸಮಾಜ ಇಷ್ಟೊಂದು ಬದಲಾವಣೆಯಾಗುತ್ತಿದ್ದರು ಈ ರೀತಿಯ ಪದ್ಧತಿಗಳಲ್ಲಿ ಯಾವ ಬದಲಾವಣೆಯೂ ಕಾಣುವುದಿಲ್ಲ. ಬದಲಾಗಬೇಕಾದರೆ ವಿಕಲಾಂಗ ಮಗು ಮಾದೇವಿ ಆಟದಲ್ಲಿ ತೋರಿದ ಆಶಕ್ತಿಯಂತೆ ಸಮಾಜ ಬದಲಾವಣೆ ಬಯಸುತ್ತದೆ ಎಂಬುದನ್ನು ತಿಳಿಯಲೆತ್ನಿಸಿದ್ದಾರೆ.

---

5. ಚಂದ್ರಶೇಖರ ಕಂಬಾರರ – ಶಿವನ ಡಂಗುರ – ಪುಟ 85

ಕಂಬಾರರು ಶಿವನ ಡಂಗುರದಲ್ಲಿ ಹಾಗೂ ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಊಳಿಗಮಾನ್ಯ ಎಂಬಂತಹ ಒಂದು ವ್ಯವಸ್ಥೆಯ ಬಗ್ಗೆ ಚರ್ಚಿಸುತ್ತಾರೆ. ಹಿಂದಿನಿಂದಲು ಭೂಮಿಯನ್ನು ಕಷ್ಟಪಟ್ಟು ಹುತ್ತು ಬೆಳೆ ಬೆಳೆದು ಶ್ರಮಪಡಬೇಕಾಗಿರುವವರು ಬಡ ರೈತರೇ. ಆದರೆ ಅದರ ಫಲವನ್ನು ಅನುಭವಿಸುವವರು ಮಾತ್ರ ಗೌಡಾಳಿಕೆಯ ಗೌಡರು. ಸರ್ಕಾರ ಉಳುವವನೇ ಭೂಮಿಯ ಒಡೆಯನೆಂಬ ಕಾನೂನನ್ನು ಜಾರಿಗೆ ತಂದಿದ್ದರು. ಅದನ್ನು ಪಾಲಿಸದಿರುವಂತಹ ಸಮಾಜ ನಮ್ಮ ಕಣ್ಣೆದುರಿಗೆ ಇದೆ. ಅದೇ ರೀತಿ ಶಿವನ ಡಂಗುರದಲ್ಲಿ ಬರಮೇಗೌಡ ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾನೆ. ಆದರೆ ಚೆಂಬಸನು ಅದನ್ನು ಪಾಲನೆ ಮಾಡಿ ರೈತರ ಪ್ರೀತಿ ಸಂಪಾದಿಸುತ್ತಾನೆ. ಕೊನೆಗೆ ಪಶ್ಚಾತಾಪ ಪಟ್ಟಂತಹ ಬರಮೇಗೌಡ ತನ್ನ ತಪ್ಪನ್ನು ಸರಿಪಡಿಸಿಕೊಂಡು ತಿರಸ್ಕೃತಗೊಂಡ ಮಗ ಲಿಸಮನನ್ನು ಮಗನೆಂದು ಸ್ವೀಕರಿಸುತ್ತಾನೆ. ಸಿಂಗಾರೆವ್ವ ಮತ್ತು ಅರಮನೆಯಲ್ಲಿ ಮಾತ್ರ ಪಂಡರೀಗೌಡ ತನ್ನ ದುರ್ಬುದ್ಧಿಯಿಂದ ಮಳಗ ಬಾಳನ್ನು ನಾಶ ಮಾಡಿ. ಅಧಿಕಾರದ ಹಂಬಲದಿಂದಿರುತ್ತಾನೆ. ಸಾಲದ್ದಕ್ಕೆ ಮರ್ಡ್ಯಾನನ್ನು ಶೋಷಣೆ ಮಾಡಿ ಅವನ ಜಮೀನನ್ನು ಮುಟ್ಟುಗೋಲು ಮಾಡಿಕೊಂಡು ಅಧಿಕಾರದ ದರ್ಪದಿಂದಿರುತ್ತಾನೆ. ಆದರೆ ಶೋಷಿತನಾದ ಮರ್ಡ್ಯಾ ಸಿಟ್ಟಿಗೆದ್ದು ಗೌಡನ ಜೀವನವನ್ನು ಅಂತ್ಯ ಮಾಡುತ್ತಾನೆ.

ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟ ವರ್ಗ ಯಾವಾಗಬೇಕಾದರು ಸಿಟ್ಟಿಗೇಳಬಹುದು ಎಂಬುದಕ್ಕೆ ಮರ್ಡ್ಯಾನ ಪಾತ್ರವೇ ಸಾಕ್ಷಿ. ಅಷ್ಟೆಲ್ಲ ಕಿರುಕುಳ ನೀಡಿದರು. ಮರ್ಡ್ಯಾ ಮಾತ್ರ ಸಿಂಗಾರೆವ್ವನನನ್ನು ಕೆಲವು ವೇಳೆ ಬಲವಂತಪಡಿಸಿದರು ಪ್ರೀತಿಯಿಂದಲೇ ನಡೆದುಕೊಂಡು ಅವಳಿಗೆ ಒಳ್ಳೆಯದನ್ನೇ ಮಾಡುತ್ತಾನೆ. ಮರ್ಡ್ಯಾನೊಂದಿಗಿನ ಲೈಂಗಿಕ ಸಂಬಂಧದಿಂದಾಗಿ ಊಳಿಗಮಾನ್ಯ ವ್ಯವಸ್ಥೆಯ ಪ್ರತೀಕವಾದ ಅರಮನೆಯೊಳಗಿನ ಸಂಪ್ರದಾಯದ ಚೌಕಟ್ಟಿನ ಎಲ್ಲಾ ಕ್ರೂರ ಮೌಲ್ಯಗಳನ್ನು ಮೆಟ್ಟಿನಿಲ್ಲುವ ಉತ್ಕಟವಾದ ಸಂಘರ್ಷ ಕಾದಂಬರಿಯಲ್ಲಿದೆ.

ಭಾರತದ ಸಂಪ್ರದಾಯಬದ್ಧ ಸಮಾಜದಲ್ಲಿ ಪರಂಪರಾಗತವಾಗಿ ಬಂದ ಕೆಲವು ನೆಲೆಗಳನ್ನು ಕಾದಂಬರಿಗಳ ಮುಖಾಂತರ ಅನಾವರಣಗೊಳಿಸಲಾಗಿದೆ. ಸುಸಂಬಂದ್ದ ಸಂಪ್ರದಾಯಗಳ ಪಾಲನೆಯಲ್ಲಿ ಯಾವ ರೀತಿ ತಮ್ಮ ತನವನ್ನು ಮರೆಯುತ್ತಿದ್ದಾರೆಂಬುವನ್ನು ತಿಳಿಸಲೆತ್ನಿಸಿದ್ದಾರೆ.

ಹಳ್ಳಿಯೊಂದರ ಬದುಕನ್ನು ಚಿತ್ರಿಸುತ್ತ ಜಾಗತೀಕರಣದ ಅಪಾಯ. ನಗರಕೇಂದ್ರಿತ ಪ್ರಗತಿಯ ಪರಿಕಲ್ಪನೆ ಜನಪದದ ಆತ್ಮನಾಶ. ಅನ್ಯಾಕ್ರಮಣ ನಮ್ಮ ಸೃಜನಶೀಲತೆಯನ್ನೇ

ಕೊಲ್ಲುತ್ತಿರುವ ದುರಂತತೆ. ಅಭಿವೃದಧಿಯ ಹೆಸರಿನಲ್ಲಿ ಈ ನೆಲದ ಅಂತಃಸತ್ವವನ್ನೇ ಹೀರುತ್ತಿರುವ ಆಮದು ಯೋಜನೆಗಳ ದುಷ್ಪರಿಣಾಮ ಹೀಗೆ ಅನೇಕ ಸಂಗತಿಗಳನ್ನು 'ಶಿವನ ಡಂಗುರ' ದಲ್ಲಿ ಚರ್ಚಿಸುತ್ತದೆ.

ಸಮಾಜದಲ್ಲಿ ಸ್ತ್ರೀ ಜನ್ಮವನ್ನು ಕುರಿತು ಶೀನಿಂಗವ್ವ ಹೇಳುವ ಕಥೆಯಲ್ಲಿ ಒಂದು ಹಳ್ಳಿಯ ಸುತ್ತ ನಡೆಯುವಂತಹ ಆಚರಣೆಗಳು ರಹಸ್ಯ ತುಂಬಿದ ಅರಮನೆ ಆ ಅರಮನೆಯಲ್ಲಿ ಸ್ತ್ರೀಯ ಪರಿಸ್ಥಿತಿಯ ಜೊತೆಗೆ ಅವಳ ಸುತ್ತ ನಡೆಯುವ ವಿಚಾರಧಾರೆಗಳೆಲ್ಲವನ್ನು ಕಥೆಯ ನಿರೂಪಕಿ ವಿವರಿಸುವುದೇ ಶಿಂಗಾರೆವ್ವ ಮತ್ತು ಅರಮನೆ ಕೃತಿಯಲ್ಲಿ ಕಂಬಾರರು ವಿವರಿಸಿದ್ದಾರೆ.

ಎರಡು ಕೃತಿಗಳಲ್ಲಿಯು ಸಾಮಾಜಿಕ ತಲ್ಲಣಗಳು ಸಾಂಸ್ಕೃತಿಕ ಆಚರಣೆ ವಿಧಾನಗಳನ್ನೊಳಗೊಂಡಂತೆ ಪಾತ್ರಗಳು ಯಾವ ರೀತಿ ತಮ್ಮ ಪಾತ್ರಗಳ ಮುಖಾಂತರ ಸಂದೇಶವೊಂದನ್ನು ನಿರೂಪಿಸಲು ಹೊರಟಿವೆ ಎಂಬುದನ್ನು ಸವಿಸ್ತಾರವಾಗಿ ಕಾದಂಬರಿಯಲ್ಲಿ ಚರ್ಚಿಸಲಾಗಿದೆ. ಜೊತೆಗೆ ಸಮಾಜ ಒಳಗೊಂಡಂತೆ ಕೆಲವು ಕಟ್ಟುಪಾಡಿನ ವಿಧಾನಗಳು ಸಮಾಜವನ್ನು ಕಿತ್ತು ತಿನ್ನುವ ಪರಿಸ್ಥಿತಿಯಲ್ಲಿದೆ ಎಂಬುದನ್ನು ಸಾಬೀತು ಪಡಿಸಲಾಗಿದೆ.

* * * * *

ಉಪ ಸಂಹಾರ

ಚಂದ್ರಶೇಖರ ಕಂಬಾರರ ಎರಡು ಕಾದಂಬರಿಗಳ ತೌಲನಿಕ ಅಧ್ಯಯನ (ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ) ದಲ್ಲಿ ಎರಡು ಕಾದಂಬರಿಗಳಲ್ಲಿ ಮುಖ್ಯವಾಗಿ ಕಾಣುವಂತಹ ಸಮಸ್ಯೆಗಳ ಬಗ್ಗೆ ತೌಲನಿಕ ದೃಷ್ಟಿಕೋನದಲ್ಲಿ ಚರ್ಚಿಸಲಾಗಿದೆ. ಹಿಂದಿನಿಂದಲೂ ರೂಢಿಗತವಾಗಿ ಬಂದಂತಹ ಅನೇಕ ಪದ್ಧತಿಗಳಲ್ಲಿ ದೇವದಾಸಿ ಪದ್ಧತಿ, ಜೀತಪದ್ಧತಿ, ಊಳಿಗಮಾನ್ಯ ವ್ಯವಸ್ಥೆ, ಸ್ತ್ರೀ ಶೋಷಣೆ, ಜಾತಿ ವ್ಯವಸ್ಥೆ, ಮೇಲ್ವರ್ಗದವರಿಂದ ಕೆಳವರ್ಗಗಳ ಶೋಷಣೆ ಮೂಢನಂಬಿಕೆಗಳು ಜಾನಪದರ ಆಚಾರ-ವಿಚಾರ, ದಬ್ಬಾಳಿಕೆ, ವಸಾಹತುಶಾಹಿಯ ಪ್ರಭಾವ ಇಂತಹ ಎಲ್ಲಾ ವ್ಯವಸ್ಥೆಗಳ ನಡುವೆ ಸಮಾಜದಲ್ಲಿ ಶ್ರೀ ಸಾಮಾನ್ಯರ ಬದುಕನ್ನು ಚಿತ್ರಿಸಿರುವ ಕಂಬಾರರ ಈ ಕೃತಿಗಳಲ್ಲಿ ತೌಲನಿಕ ಅಧ್ಯಯನ ಇಲ್ಲಿ ನಡೆದಿದೆ.

ಕನ್ನಡ ಸಾಹಿತ್ಯದಲ್ಲಿ ಅನೇಕ ಕಾದಂಬರಿಗಳು ರಚನೆಯಾಗಿವೆ. ಈ ಕಾದಂಬರಿಗಳ ರಚನೆಗೆ ಸಮಾಜದ ಸ್ಥಿತಿ-ಗತಿ ಪ್ರಮುಖ ಕಾರಣವಾಗಿರುತ್ತದೆ. ಸಮಾಜದ ಘಟನೆಗಳನ್ನೇ ವಸ್ತುವಾಗಿಟ್ಟುಕೊಂಡು ಕಾದಂಬರಿಗಳು ರಚನೆಯಾಗಿವೆ. ಹಾಗೆಯೇ ಅನೇಕ ಕಾದಂಬರಿಗಳು ಹೋರಾಟದ ಹಿನ್ನೆಲೆಯಲ್ಲಿ, ಸ್ತ್ರೀ ಸಂವೇದನೆಯ ಹಿನ್ನೆಲೆಯಲ್ಲಿ ಹೀಗೆ ಅನೇಕ ರೀತಿಯದಾದ ಹಿನ್ನೆಲೆಯಲ್ಲಿ ರಚನೆಗೊಂಡವುಗಳಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ರಂಗದಲ್ಲಿ ಹಲವಾರು ಕಾದಂಬರಿಗಳು ರಚನೆಯಾಗಿವೆ. ನವ್ಯ ಕಾಲಘಟ್ಟದಲ್ಲಿ ಕಂಡುಬರುವ ಪ್ರಮುಖ ಲೇಖಕರಲ್ಲಿ ಚಂದ್ರಶೇಖರ ಕಂಬಾರರು ಒಬ್ಬರು ಇವರು ನವ್ಯೋತ್ತರ ಕಾಲಘಟ್ಟದಲ್ಲೂ ಕೃತಿ ರಚನೆ ಮಾಡಿದವರು.

ಶಿವನ ಡಂಗುರ ಕಾದಂಬರಿಯನ್ನು ಎಲ್ಲಾ ನೆಲೆಯಲ್ಲಿಯೂ ಅಧ್ಯಯನಕ್ಕೆ ಒಳಪಡಿಸಿದಾಗ ಮುಖ್ಯವಾಗಿ ಕಾಡುವಂತಹ ಅಂಶವೆಂದರೆ ಹೋರಾಟದ ಅಂಶ. ಇಲ್ಲಿ ಹಳ್ಳಿಯ ಉಳಿವಿಗಾಗಿ ಹೋರಾಟ ಒಂದು ಕಡೆಯಾದರೆ. ಮತ್ತೊಂದು ಕಡೆ ಶೋಷಣೆಗೆ ಒಳಗಾದವರ ಹೋರಾಟವಾಗುತ್ತದೆ. ಇಲ್ಲಿ ಬರುವಂತಹ ಪಾತ್ರಗಳು ಸಹ ಸಮಾಜದಲ್ಲಿ ನೆಲೆನಿಲ್ಲಲು ಹೋರಾಡುವಂತದ್ದನ್ನು ಕಾಣಬಹುದು. ಆದ್ದರಿಂದ ನನ್ನ ಅಭಿಪ್ರಾಯದಂತೆ ಈ ಒಂದು ಕೃತಿಯನ್ನು 'ಹೋರಾಟದ ಕಾದಂಬರಿ' ಎಂದು ಕರೆಯಬಹುದು ಎಂಬುದು ನನ್ನ ಅನಿಸಿಕೆ.

ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯನ್ನು ವಿಮರ್ಶಕರು 'ಸ್ತ್ರೀವಾದ ಕಾದಂಬರಿ' ಎಂದು ಗುರುತಿಸುತ್ತಾರೆ. ಇಲ್ಲಿ ಸ್ತ್ರೀ ಮೊದಲಿನಿಂದಲೂ ಕೊನೆಯವರೆವಿಗೂ ತನ್ನ ತನವನ್ನು

ಉಳಿಸಿಕೊಳ್ಳಲು ಸಮಾಜದಜೊತೆ ಅದರಲ್ಲೂ ಸಮಾಜದಲ್ಲಿರುವ ವ್ಯಕ್ತಿಗಳ ಜೊತೆ ಹೋರಾಡುತ್ತಾಲೇ ಬರುತ್ತಾಳೆ.

ಹೀಗೆ ಎರಡೂ ವಿಭಿನ್ನ ಪ್ರಕಾರಕ್ಕೆ ಸೇರಿದ ಕಾದಂಬರಿಗಳಾದರೂ ಕೆಲವು ಸಾದೃಶ್ಯಗಳನ್ನು ಗೋಚರವಾಗುತ್ತವೆ. ಅದರಲ್ಲೂ ಮುಖ್ಯವಾಗಿ ಈ ಕಾದಂಬರಿಗಳು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಆಗುವ ಶೋಷಣೆಗಳನ್ನು ಕುರಿತು ಹೇಳುತ್ತದೆ. ಹೀಗಾಗಿ ಎರಡು ಕೃತಿಗಳು ಸಮಾಜಕ್ಕೆ ಸಂದೇಶವನ್ನು ಸಾರಲು ಹೊರಟಂತವು.

ಎರಡೂ ಕಾದಂಬರಿಗಳು ವರ್ತಮಾನದಲ್ಲಿ ನಿಂತು ಭೂತದ ಘಟನೆಗಳನ್ನು ವಾಸ್ತವಕ್ಕೆ ಅನ್ವಯವಾಗುವಂತೆ ಚಿತ್ರಿಸಿವೆ. 'ಶಿವನ ಡಂಗುರ' ಕಾದಂಬರಿಯಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಹಳ್ಳಿಗಳ ವಿನಾಶದ ಕತೆಯಾದರೆ 'ಸಿಂಗಾರೆವ್ವ ಮತ್ತು ಅರಮನೆ'ಯಲ್ಲಿ ಸಿಂಗಾರೆವ್ವ ಅರಮನೆಯ ಶ್ರೀಮಂತಿಕೆಯ ನಡುವೆ ಇದ್ದರೂ ಶೋಷಣೆಗೆ ಒಳಗಾದವಳು ಅನೈತಿಕ ಸಂಬಂಧದಿಂದಾಗಿ ಮಾನವ ಸಂಬಂಧಗಳಲ್ಲಿ ಬಿರುಕಾಗಿರುವುದು ಎರಡು ಕಾದಂಬರಿಗಳಲ್ಲಿವೆ. ಕಾದಂಬರಿಗಳೆರಡೂ ನೈಜವಾದ ಘಟನೆಗಳನ್ನು ಹೇಳುತ್ತವೆಯೇ ಹೊರತು ಕಾಲ್ಪನಿಕ ಕಥೆಯನ್ನು ಹೇಳುವುದಿಲ್ಲ. ಆಯಾಯ ಪ್ರಾದೇಶಿಕ ಭಾಷೆಗೆ ಕಾದಂಬರಿಗಳಲ್ಲಿ ಮಹತ್ವ ದೊರೆತಿದ್ದು, ಆ ಭಾಷೆಯಲ್ಲಿಯೇ ಕಾದಂಬರಿಗಳು ನಿರೂಪಿತವಾಗಿವೆ.

ಕಾದಂಬರಿಗಳೆರಡು ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ಊಳಿಗಮಾನ್ಯ ವ್ಯವಸ್ಥೆಯಿರುವ ಸಮಾಜದ ಬಗ್ಗೆ ಹೇಳಲೊರಟಿರುವ ಸಂದೇಶವಾಗಿದೆ. ಶೈಕ್ಷಣಿಕವಾಗಿ ಸಮಾಜ ಮುಂದುವರೆಯುತ್ತಿದ್ದರೂ ಕೆಲವೊಂದು ಆಚರಣೆಗಳು ಇನ್ನು ಮುಂದುವರೆದುಕೊಂಡು ಬರುತ್ತಿವೆ ಎಂಬುದನ್ನು ಕಾದಂಬರಿಗಳು ಬಿಂಬಿಸುವ ಜೊತೆಗೆ ಪ್ರಸ್ತುತವಾಗಿರುವಂತಹ ಸಮಸ್ಯೆಯನ್ನು ಬೆಟ್ಟು ಮಾಡಿ ತೋರಿಸುವಂತಹ ಕೆಲಸವನ್ನು ಮಾಡುತ್ತವೆ. ಆಧುನಿಕ ಸಮಾಜದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಹೆಣ್ಣಿನ ಶೋಷಣೆ ಎಂತಹ ಅಂತಸ್ತಿನಲ್ಲೂ ಜರುಗುತ್ತದೆಂಬುದಕ್ಕೆ ಈ ಕಾದಂಬರಿಗಳು ಉದಾಹರಣೆಯಾಗಿವೆ. ಸಂಪ್ರದಾಯಬದ್ದ ಪುರುಷ ಪ್ರಧಾನ ಸಮಾಜದಲ್ಲಿಯೇ ಎಲ್ಲಾ ಅನ್ಯಾಯಗಳು ಸಂಭವಿಸುತ್ತವೆ.

ಈ ಸಂಪ್ರಬಂಧದಲ್ಲಿ ಎರಡು ಕಾದಂಬರಿಗಳ ತೌಲನಿಕ ಅಧ್ಯಯನದಲ್ಲಿ ಪ್ರಸ್ತುತ ಸಮಾಜದಲ್ಲಿ ಕೆಲವೊಂದು ಸಮಸ್ಯೆಗಳು ಯಾವರೀತಿ ಕಾಡುತ್ತಿವೆ ಎಂಬುದನ್ನು ಕಂಬಾರರ ಶಿವನ ಡಂಗುರ ಹಾಗೂ ಸಿಂಗಾರೆವ್ವ ಮತ್ತು ಅರಮನೆ ಈ ಕೃತಿಗಳ ಮುಖಾಂತರ ಸಮಾಜಕ್ಕೆ

ಅನ್ವಯವಾಗುವಂತೆ ಚರ್ಚಿಸಲಾಗಿದೆ. ಕೃತಿಗಳಲ್ಲಿ ಬರುವ ರಾಜಕೀಯತೆ, ಸಾಮಾಜಿಕತೆ, ಆರ್ಥಿಕತೆ, ಮೂಢನಂಬಿಕೆಗಳು, ಶೋಷಣೆಗಳೆಲ್ಲವೂ ಇಂದಿಗೂ ಇವೆ ಎಂಬುದನ್ನು ಕೃತಿಗಳಲ್ಲಿ ವಿವರಿಸಿದ್ದಾರೆ.

ಒಟ್ಟಾರೆಯಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾದಂತಹ ಒಂದು ವರ್ಗ ಇದೆ. ಅದು ತನ್ನತನವನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತಲೆ ಇದೆ ಎಂಬುದನ್ನು ಬಿಂಬಿಸುತ್ತದೆ. ಈ ರೀತಿಯ ಕಾದಂಬರಿಗಳ ಮುಖಾಂತರ ಸಮಾಜದ ಸಮಸ್ಯೆಗೆ ಒಂದು ಪರಿಹಾರವನ್ನು ಹುಡುಕುವುದೆ ಇದರ ಸದುದ್ದೇಶವಾಗಿದೆ. ಇಂತಹ ಕಾದಂಬರಿಗಳ ತೌಲನಿಕ ಅಧ್ಯಯನ ಮಾಡಲಾಗಿದೆ. ಈ ಒಂದು ಚಿಕ್ಕ ಸಂಪ್ರಬಂಧವಲ್ಲಿ.

* * * * *

ಆಕರ ಗ್ರಂಥಗಳು : –

1. ಚಂದ್ರಶೇಖರ ಕಂಬಾರರ – ಶಿವನ ಡಂಗುರ, ಮೊದಲ ಮುದ್ರಣ- 2015 ಅಂಕಿತ ಪುಸ್ತಕ ಪ್ರಕಾಶನ- ಬೆಂಗಳೂರು.
2. ಚಂದ್ರಶೇಖರ ಕಂಬಾರರ – ಸಿಂಗಾರೆವ್ವ ಮತ್ತು ಅರಮನೆ, ಮೊದಲ ಮುದ್ರಣ- 1982 ಅಂಕಿತ ಪುಸ್ತಕ ಪ್ರಕಾಶನ – ಬೆಂಗಳೂರು.

ಪರಾಮರ್ಶನ ಗ್ರಂಥಗಳು : –

1. ಹೊಸಗನ್ನಡ ಸಾಹಿತ್ಯ ಚರಿತೆ – ಎಲ್.ಎಸ್.ಶೇಷಗಿರಿರಾವ್, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು –2011.
2. ದೇಶೀಯ ಚಿಂತನೆ – ಚಂದ್ರಶೇಖರ ಕಂಬಾರ, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು –2011.
3. ಹೊಸಗನ್ನಡ ಕಥೆಕಾರರು ಹಾಗೂ ಕಾದಂಬರಿಕಾರರು – ಸಂಪಾದಕರು ಪ್ರೊ.ಕೆ.ಎನ್.ಗಂಗನಾಯಕ್, ಕುವೆಂಪು ಕನ್ನಡ ಅಧ್ಯಯನ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೊತ್ರೀ ಮೈಸೂರು –2011.
4. ಕನ್ನಡ ಐತಿಹಾಸಿಕ ಕಾದಂಬರಿಗಳು – ಹೆಚ್.ಉಮಾಮೂರ್ತಿ, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು –1955.
5. ಕನ್ನಡ ಕಥನ ಸಾಹಿತ್ಯ:ಕಾದಂಬರಿ – ಜಿ.ಎಸ್.ಅಮೂರ, ಕರ್ನಾಟಕ ಬುಕ್ ಏಜೆನ್ಸಿ ಪ್ರಕಾಶನ ಗಾಂಧಿನಗರ ಬೆಂಗಳೂರು –2006.
6. ಲಂಕೇಶ್ ನೆನಪು – ಸಂಪಾದಕರು ನರೇಂದ್ರ ದೇರ್ಲ, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ –2000.
7. ಸಾಹಿತ್ಯ ಸಂದರ್ಭ –ಟಿ.ಪಿ.ಅಶೋಕ, ಅಕ್ಷರ ಪ್ರಕಾಶನ ಹೆಗ್ಗೋಡು –1991.
8. ಸಾಲು ದೀಪಗಳು– ಸಂಪಾದಕರು ಜಿ.ಎಸ್.ಸಿದ್ದಲಿಂಗಯ್ಯ, ಎಂ.ಹೆಚ್.ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು –2001.
9. ಶಿವಾಪುರ ಕಂಬಾರ ನಮಸ್ಕಾರ – ಸಂಪಾದಕರು ಜಯಪ್ರಕಾಶ ಮಾವಿನಕುಳಿ, ಚಂದ್ರಶೇಖರ ಕಂಬಾರ ಅಭಿನಂದನಾ ಸಮಿತಿ ಮೂಢಬಿದಿರೆ –2004.
10. ಯುಗಧರ್ಮ ಮತ್ತು ಸಾಹಿತ್ಯ – ಕೀರ್ತಿನಾಥ ಕುರ್ತಕೋಟಿ, ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್ ಧಾರವಾಡ –2009.
11. ಚಂದ್ರಶೇಖರ ಕಂಬಾರ ವಾಚಿಕೆ – ಆಯ್ದ ಲೇಖನಗಳು –ಸಂಪಾದಕರು ಟಿ.ಪಿ.ಅಶೋಕ, ಇಳಾ ಮುದ್ರಣಾಲಯ –2011.

12. ಕಂಬಾರರ ಸಾಹಿತ್ಯದ ನೆಲೆ ಬೆಲೆ – ಬಸವರಾಜ ಕಲ್ಗುಡಿ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು –2011.
13. ಕನ್ನಡ ಸಾಹಿತ್ಯ ಪರಂಪರೆ ಮತ್ತು ಕಂಬಾರರು – ವೀರೇಶ ಬಡಿಗೇರ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು –2012.
14. ಚಂದ್ರಶೇಖರ ಕಂಬಾರರ ಕಾವ್ಯ ಭಾಷೆ – ಎಸ್.ಎಸ್.ಅಡಿಗ – ಯಾಜಿ ಪ್ರಕಾಶನ ಬಳ್ಳಾರಿ –2014.